ಸಂಪುಟ 22 ಸಂಚಿಕೆ 37-39
ಸೆಪ್ಟೆಂಬರ್ 24, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪೆಕ್ಸ್‌ರಂಗ



ಭಾರತದ ರಾಜಕೀಯ ರಂಗದ ಕ್ರೂರ ತಮಾಷೆಗಳು




ಪೆಟ್ರೋಲ್ ಬೆಲೆ ಏರಿಕೆ ವಿರುದ್ಧ ಯುರೋಪಿನಾದ್ಯಂತ ಪ್ರತಿಭಟನೆ



Sydney 2000

ಒಲಿಂಪಿಕ್ಸ್-2000 ಆರಂಭ

ಕರಾಳ ಮಸೂದೆ ವಾಪಸು



ಹಿಂದಿನ ಸಂಚಿಕೆಯಲ್ಲಿ ಭಾರತ-ಚೀನಾ ಗಡಿ ವಿವಾದದ ಹೆಸರಿನಲ್ಲಿ ಹುತಾತ್ಮ ಸ್ಮಾರಕ್ಕೆ ಕಾಂಗ್ರೆಸ್ ಅಗೌರವ ತೋರಿಸಿದ ಬಗೆ ಹಾಗೂ ಕಮ್ಯುನಿಸ್ಟ್‌ರ ಮೇಲಿನ ಅಪಪ್ರಚಾರದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಕಾಂಗ್ರೆಸ್ ದುರಾಡಳಿತದ ವಿರುದ್ಧ ರಾಷ್ಟ್ರಪತಿಗೆ ದೂರು, ಕೇರಳ ಚುನಾವಣೆಗೆ ಬಂಗಾಳ ಜನತೆ ಸ್ಪಂದನೆ ಹಾಗೂ ಕೇಂದ್ರ ಸರ್ಕಾರಿ ನೌಕರರ ಮುಷ್ಕರದ ಬಗ್ಗೆ ಓದಿ

ಚಳವಳಿ, ಪ್ರತಿಭಟನೆಗಳ ದಮನಕ್ಕೆ ಪಶ್ಚಿಮ ಬಂಗಾಳ ಸರಕಾರ ಅಡ್ಡದಾರಿ ಹುಡುಕುತ್ತಲೇ ಇತ್ತು. ಪಾದಚಾರಿಗಳು, ವಾಹನ ಸಂಚಾರದ ಹಕ್ಕುಗಳನ್ನು ರಕ್ಷಿಸುವ ನೆಪದಲ್ಲಿ ರ್‍ಯಾಲಿಗಳು ಮತ್ತು ಮೆರವಣಿಗೆಗಳನ್ನು ಕಾನೂನು ಬಾಹಿರವೆಂದು ಘೋಷಿಸುವ ಒಂದು ಕಾನೂನನ್ನು ರಚಿಸಲು ರಾಜ್ಯ ಸರಕಾರ ಯೋಚಿಸುತ್ತಿದೆ ಎಂಬ ವಿಷಯ ನಮಗೆ ಗೊತ್ತಾಯಿತು. 1960ರ ಆರಂಭದಲ್ಲಿ ಈ ವಿದ್ಯಮಾನ ನಡೆಯಿತು. ಈ ಪ್ರಸ್ತಾವಿಕ ಕಾಯಿದೆಯನ್ವಯ ನಿಯಮದ ಉಲಂಘನೆಗೆ ಮೂರು ವರ್ಷ ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಬಹುದಾಗಿತ್ತು ಎಂದೂ ತಿಳಿಯಿತು. "ಪಶ್ಚಿಮ ಬಂಗಾಳ ರ್‍ಯಾಲಿಗಳು ಮತ್ತು ಮೆರವಣಿಗೆ ನಿಯಂತ್ರಣ ಮಸೂದೆ- 1960 ಇದು ಪ್ರಸ್ತಾವಿತ ಮಸೂದೆಯ ಹೆಸರಾಗಿತ್ತು. ಮುಂದಿನ ಅಸೆಂಬ್ಲಿ ಅಧಿವೇಶನದಲ್ಲಿ ಅದನ್ನು ಮಂಡಿಸಲಾಗುವುದೆಂದು ತಿಳಿದು ಬಂತು.

ಈ ಕಾನೂನು ಜಾರಿಯಾದರೆ ಪ್ರಜಾಪ್ರಭುತ್ವ ಮತ್ತು ಸಂವಿಧಾನಿಕ ಹಕ್ಕಿನ ಬುಡಕ್ಕೆ ಕೊಡಲಿಯೇಟು ಎಂದು ಅರ್ಥ. ಏನಾದರೂ ಮಾಡಿ ಅಧಿಕಾರ ಅವಧಿಯನ್ನು ವಿಸ್ತರಿಸಿಕೊಳ್ಳುವುದು ಹಾಗೂ ಸರಕಾರದ ವಿರುದ್ಧವಾಗಲೀ ಅದರ ದಮನಕಾರಿ ನೀತಿಗಳ ವಿರುದ್ಧವಾಗಲೀ ಜನರು ಸಂಘಟಿತರಾಗದಂತೆ ತಡೆಯಲು ನಿರುಪಯೋಗಿ ಕಾಂಗ್ರೆಸ್ ಸರಕಾರ ಏನನ್ನೂ ಮಾಡಲು ಹೇಸದು ಎನ್ನುವುದು ನಾಚಿಕೆಗೇಡಿನ ಹಾಗೂ ಸರ್ವಾಧಿಕಾರಿ ಪ್ರವೃತ್ತಿಗಳಿಂದ ಸಾಬೀತಾಯಿತು.

"ಇದು ಜನತೆಯ ಜೀವನದ ಹಕ್ಕಿನ ಮೇಲೆ ಮತ್ತು ಅವರ ಆದಾಯಗಳಿಸುವ ಹಕ್ಕಿನ ಮೇಲಿನ ದೊಡ್ಡ ದಾಳಿಯಾಗಿದೆ. ಅದೇ ರೀತಿ ಸರ್ವಾಧಿಕಾರಿ ಆಡಳಿತವನ್ನು ಗಟ್ಟಿಗೊಳಿಸುವ ದೊಡ್ಡ ಹೆಜ್ಜೆಯಾಗಿದೆ. ಎಂದು ಪ್ರಾಂತೀಯ ಕೃಷಿ ಸಭಾ ಕಾರ್ಯದರ್ಶಿ ಹರೇಕೃಷ್ಣ ಕೋನಾರ್ ಹೇಳಿಕೆಯೊಂದರಲ್ಲಿ ಕಟುವಾಗಿ ಟೀಕಿಸಿದರು.

ನಾವು ಪ್ರತಿಭಟನಾ ಸಭೆ ಮತ್ತು ರ್‍ಯಾಲಿಗಳನ್ನು ಆರಂಭಿಸಿದೆವು. ಈ ಪ್ರಸ್ತಾವಿತ ಕರಾಳ ಕಾನೂನಿನ ವಿರುದ್ಧ ನಡೆದ ಕೇಂದ್ರೀಯ ರ್‍ಯಾಲಿಯಲ್ಲಿ 1.5 ಲಕ್ಷಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು. ಗಡಿ ವಿವಾದದತ್ತ ದೇಶದ ಗಮನ ಕೇಂದ್ರೀಕೃತ ಗೊಂಡಿರುವುದರಿಂದ ಈ ಕರಾಳ ಶಾಸನ ಯಾರದೇ ಗಮನಕ್ಕೆ ಬಾರದೆ ಅಂಗೀಕಾರಗೊಳ್ಳುತ್ತದೆ ಎಂದು ಪ.ಬಂಗಾಳ ಸರಕಾರ ಭಾವಿಸಿತ್ತು. ಆದರೆ ಅದನ್ನು ಅಂಗೀಕರಿಸಿದ್ದೇ ಆದಲ್ಲಿ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾದೀತೆಂದು ರ್‍ಯಾಲಿ ಎಚ್ಚರಿಕೆ ನೀಡಿತು.

1960 ಜನವರಿ 24 ರಂದು ಇಡೀ ರಾಜ್ಯ ಪ್ರತಿಭಟನೆ ದಿನವನ್ನು ಆಚರಿಸಿತು. ಈ ಮಸೂದೆಯ ವಿರುದ್ಧ ಒಂದು ಸಮಿತಿಯನ್ನೂ ರಚಿಸಿದೆವು. "ಆ ಒಂದು ದಿನವೇ 50 ಸಾವಿರ ಸಹಿಗಳನ್ನು ಸಂಗ್ರಹಿಸಿದೆವು! ಕೆಲವೇ ದಿನಗಳಲ್ಲಿ ಅದು 68 ಸಾವಿರಕ್ಕೆ ಏರಿತು ಸಮಿತಿಯ ಪರವಾಗಿ ನಿರಂಜನ ಸೇನ್, ಲಕ್ಷ್ಮಿಸೇನ್, ನಿಹಾರ ಮುಖರ್ಜಿ ಮತ್ತು ತಾರಾ ದತ್ತ ಮನವಿ ಪತ್ರವನ್ನು ಸರಕಾರಕ್ಕೆ ಸಲ್ಲಿಸಿದರು. ಪ್ರತಿಭಟನೆಗೆ ಮಣಿದ ಸರಕಾರ ಮಸೂದೆಯನ್ನು ವಾಪಸ್ ಪಡೆಯಲು ಒಪ್ಪಿತು.

ಮಹತ್ವರ ಕೇರಳ ಚುನಾವಣೆ:

ಅದೇ ಹೊತ್ತಿಗೆ ಕೇರಳದಲ್ಲಿ ವಿಧಾನಸಭೆ ಚುನಾವಣೆ ನಡೆಯಿತು. ಅದಕ್ಕೆ ಐತಿಹಾಸಿಕ ಮಹತ್ವವಿತ್ತು. ಯಾಕೆಂದರೆ ಸಂವಿಧಾನ ಬದ್ಧವಾಗಿ ಚುನಾಯಿತವಾದ ಕಮ್ಯೂನಿಸ್ಟ್ ಪಕ್ಷದ ಸರಕಾರವನ್ನು ಕೇಂದ್ರ ಸರಕಾರ ವಜಾ ಮಾಡಿದ ನಂತರ ಈ ಚುನಾವಣೆ ನಡೆಯಲಿತ್ತು. ಹಿಂದಿನ ಚುನಾವಣೆಯಲ್ಲಿ ಪಿ.ಎಸ್.ಪಿ. ನಮ್ಮ ಜತೆಯಲ್ಲಿತ್ತು. ಈ ಬಾರಿ ಅದು ಕಾಂಗ್ರೆಸ್ ಜತೆ ಕೈಜೋಡಿಸಿತ್ತು.

ಕೇರಳದ ಚುನಾವಣೆ ನಿಧಿಗೆ ನೆರವಾಗುವಂತೆ ಮಾಡಿದ ಮನವಿಗೆ ಪಶ್ಚಿಮ ಬಂಗಾಳದ ಜನರು ಸ್ಪಂದಿಸಿದರು. ರಾಜ್ಯದ ಜನತೆ ಕೊಟ್ಟ 76,000 ರೂಪಾಯಿಗೂ ಹೆಚ್ಚಿನ ಹಣವನ್ನು ಕಲ್ಕತ್ತದ ಮೈದಾನದಲ್ಲಿ ನಡೆದ ಬೃಹತ್ ರ್‍ಯಾಲಿಯಲ್ಲಿ ಕಾಕಾ ಬಾಬು ಅವರು ಇಎಂಎಸ್‌ಗೆ ಹಸ್ತಾಂತರಿಸಿದರು.

ಭೂಪೇಶ ಗುಪ್ತಾ, ಮಹಮದ್ ಇಸ್ಮಾಯಿಲ್, ಹಿರೇನ್ ಮುಖರ್ಜಿ ಮತ್ತು ನಾನು ಕೇರಳದಲ್ಲಿ ಅನೇಕ ಸಭೆಗಳಲ್ಲಿ ಮಾತನಾಡಿದೆವು. ಅಲ್ಲಿ ನಮಗೆ ಸಿಕ್ಕ ಪ್ರೋತ್ಸಾಹ ನಮ್ಮ ಮೇಲೆ ಭಾರೀ ಪ್ರಭಾವ ಬೀರಿತು.

ಇಷ್ಟಾಗಿಯೂ ನಮಗೆ ಈ ಚುನಾವಣೆಗಳಲ್ಲಿ ಗೆಲ್ಲಲಾಗಲಿಲ್ಲ ರಾಷ್ಟ್ರಪತಿ ಆಡಳಿತ ಅಸ್ತ್ರವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷ ಆಡಳಿತದ ನೆರವಿನೊಂದಿಗೆ ಜನರನ್ನು ಭಯಭೀತಗೊಳಿಸಿತು. ಕಾಂಗ್ರೆಸ್ ಸಮಾಜ ಘಾತುಕರು ನಮ್ಮ ಪಕ್ಷದ ಚುನಾವಣಾ ರ್‍ಯಾಲಿಯೊಂದರ ಮೇಲೆ ದಾಳಿ ಮಾಡಲೂ ಹೇಸಲಿಲ್ಲ. ಪರಿಸ್ಥಿತಿ ಆ ಮಟ್ಟಿಗೆ ಹದಗೆಟ್ಟಿತು. ಆಕ್ರಮಣದಲ್ಲಿ ಅನೇಕ ಜನರು ಗಾಯಗೊಂಡರು. ಕಾಂಗ್ರೆಸ್ ಇನ್ನೊಂದು ತಂತ್ರವನ್ನು ಬಳಸಿತು; ಕೋಮುವಾದಿ ವಿಷಯವನ್ನು ದಾಳವನ್ನಾಗಿ ಮಾಡಲು ಆರಂಭಿಸಿತು.

ಈ ಎರಡು ಭಯೋತ್ಪಾದನೆಯನ್ನು ಸರಿಯಾಗಿ ಎದುರಿಸಲು ನಮಗೆ ಆಗಲಿಲ್ಲ ಎನ್ನುವುದನ್ನು ನಾನಿಲ್ಲಿ ಒಪ್ಪಿಕೊಳ್ಳುತ್ತೇನೆ. 126 ಸ್ಥಾನಗಳ ಪೈಕಿ ಕಮ್ಯುನಿಸ್ಟ್ ಪಕ್ಷ 26 ರಲ್ಲಿ ಗೆದ್ದಿತು. ಕಮ್ಯೂನಿಸ್ಟ್ ಬೆಂಬಲಿತ ಮೂವರು ಪಕ್ಷೇತರರೂ ಗೆದ್ದರು.

ಕಾಂಗ್ರೆಸ್ 63, ಪಿಎಸ್‌ಪಿ 20, ಮುಸ್ಲಿಂಲೀಗ್ 11 ಮತ್ತು ಇತರರು ಮೂರು ಸ್ಥಾನಗಳನ್ನು ಗಳಿಸಿದರು. ಮುಸ್ಲಿಂಲೀಗ್ ಕಾಂಗ್ರೆಸ್‌ನ ಮಿತ್ರ ಪಕ್ಷವಾಗಿತ್ತು.

ಕಮ್ಯೂನಿಸ್ಟ್ ಪಕ್ಷ ಒಟ್ಟು ಮತಗಳಲ್ಲಿ ಶೇಕಡ 44.7 ಮತ ಪಡೆಯಿತು. ಕಾಂಗ್ರೆಸ್ 38.7 ಶೇ. ಹಾಗೂ ಪಿ.ಎಸ್.ಪಿ. 12.4 ಶೇ ಮತ ಗಳಿಸಿತು. ಸರಕಾರ ರಚಿಸಲು ಅಗತ್ಯವಾದ ಬಹುಮತದ ಸ್ಥಾನಗಳು ನಮಗೆ ಸಿಗದಿದ್ದರೂ ಜನತೆಯ ಬೆಂಬಲ ಹಿಂದೆಂದಿಗಿಂತಲೂ ಹೆಚ್ಚಾಗಿತ್ತು.

ಕೇಂದ್ರ, ಸರಕಾರಿ ನೌಕರರ ಚಳುವಳಿ:

1960 ರಲ್ಲಿ ಕೇಂದ್ರ ಸರಕಾರಿ ನೌಕರರ ಒಂದು ರಾಷ್ಟ್ರವ್ಯಾಪಿ ಚಳುವಳಿ ನಡೆಯಿತು. ಮುಷ್ಕರ ನಿರತ ನೌಕರರು ತೋರಿದ ಒಗ್ಗಟ್ಟು, ಧೈರ್ಯ ಮತ್ತು ಪ್ರಜ್ಞೆ ಜನತಾ ಆಂದೋಲನ ರೂಪುಗೊಳ್ಳುತ್ತಿರುವುದಕ್ಕೆ ಒಂದು ಸೂಚಕವಾಗಿತ್ತು. ತನ್ನದೇ ನೌಕರರ ಮೇಲೆ ಕೇಂದ್ರ ಸರಕಾರ ಹರಿಯಬಿಟ್ಟ ದೌರ್ಜನ್ಯ ಕೂಡ ಸಾಟಿಯಿಲ್ಲದ್ದಾಗಿತ್ತು.

ರಾಷ್ಟ್ರಪತಿ ಈ ಮುಷ್ಕರವನ್ನು ನಿಷೇಧಿಸಿ ಆದೇಶ ಹೊರಡಿಸಿದರು. ಅನೇಕ ಕರಾಳ ಸುತ್ತೋಲೆಗಳನ್ನು ಎಚ್ಚರಿಕೆಗಳನ್ನು ಹೊರಡಿಸಲಾಯಿತು. ಕಮ್ಯೂನಿಸ್ಟ್ ಪಕ್ಷದ ಸಂಸದೀಯ ಗುಂಪು ಸಂಸತ್ತಿನ ವಿಶೇಷ ಅಧಿವೇಶನ ಕರೆಯುವಂತೆ ಸರಕಾರವನ್ನು ಒತ್ತಾಯಿಸಿತು. ಮುಷ್ಕರ ನಿರತೆ ಕೇಂದ್ರ ಸರಕಾರಿ ನೌಕರರ ಮುಖಂಡ ಕೆ.ಜಿ. ಬೋಸ್ ಬೇಡಿಕೆಗಳನ್ನು ಈಡೇರಿಸಲೇಬೇಕೆಂದು ಪಟ್ಟು ಹಿಡಿದಿದ್ದರು. ಡಾಲ್ ಹೌಸಿ ಸಮನ್ವಯ ಸಮಿತಿಯ ನಾಯಕತ್ವದಲ್ಲಿ ಕೇಂದ್ರ ಸರಕಾರಿ ನೌಕರರ ಒಂದು ಬೃಹತ್ ಸಭೆ ನಡೆಯಿತು. 15000 ಕ್ಕೂ ಹೆಚ್ಚು ನೌಕರರು ಭಾಗವಹಿಸಿದ್ದರು ನಾನು ಕೂಡ ಸಭೆಯನ್ನುದ್ದೇಶಿಸಿ ಮಾತನಾಡಿದೆ.

ಜುಲೈ 12 ರ ಮಧ್ಯರಾತ್ರಿ ಅಭೂತಪೂರ್ವ ಮುಷ್ಕರದ ಆರಂಭ. ರೈಲ್ವೆ ಮತ್ತು ಅಂಚೆ ತಂತಿ ವಿಭಾಗದಲ್ಲಿ ಕೆಲಸಕಾರ್ಯ ಅಸ್ತವ್ಯಸ್ತ ಜತೆ ಜತೆಯಲ್ಲಿ ಭಾರೀ ಪ್ರಮಾಣದಲ್ಲಿ ದಾಳಿ ಮತ್ತು ವ್ಯಾಪಕ ಬಂಧನ. ಮೊದಲ ದಿನವೇ 1500ಕ್ಕೂ ಹೆಚ್ಚು ಮುಷ್ಕರ ನಿರತರ ಸೆರೆ. ಅನೇಕ ರಾಷ್ಟ್ರೀಯ ಮುಖಂಡರು ಸರಳುಗಳ ಹಿಂದೆ ಅಹಮದಾಬಾದಿನಲ್ಲಿ ಪೊಲೀಸ್ ಗೋಲಿಬಾರಿನಲ್ಲಿ

ಪುಟ 3ಕ್ಕೆ

ದುಡಿಯುವ ವರ್ಗಕ್ಕೆ ಸಮರ್ಪಿಸಿಕೊಂಡ ಕಾಮ್ರೇಡ್ ಎಂ.ಎಸ್. ಕೃಷ್ಣನ್

ಕರ್ನಾಟಕ ದುಡಿಯುವ ವರ್ಗದ ಚಳುವಳಿಯ ಇತಿಹಾಸದಲ್ಲಿ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿ. ಕೊಡುಗೆ ನೀಡಿದ ಹಿರಿಯ ನಾಯಕ ಕಾಂ. ಎಂ.ಎಸ್.ಕೃಷ್ಣನ್ ನಮ್ಮೆಲ್ಲರನ್ನು ಅಗಲಿದ್ದಾರೆ. ಅವರ ಅಗಲಿಕೆ ಸ್ವಾತಂತ್ರ್ಯ ಪೂರ್ವದ ಹಾಗೂ ನಂತರದ ಒಂದು ಪ್ರಮುಖ ಕೊಂಡಿಯನ್ನು ಈ ಪೀಳಿಗೆ ಕಳೆದುಕೊಂಡಿದೆ.


ಕಾಂ. ಕೃಷ್ಣನ್ ಜನಿಸಿದ್ದು ಜನವರಿ 5, 1924 ರಲ್ಲಿ. ಬೆಂಗಳೂರಿನ ಶ್ರೀಮಂತ ಕುಟುಂಬದಲ್ಲಿ. ಓದಿದ್ದು ಬಿಎಸ್ಸಿ., ಬಿ.ಇ., ಆ ಕಾಲದಲ್ಲಿ ಇಂಜಿನಿಯರ್ ಪದವಿ ಪಡೆರಾದರೂ ಆಯ್ಕೆ ಮಾಡಿಕೊಂಡದ್ದು ದೇಶದ ಜನತೆಯ ವಿಮೋಚನೆಯನ್ನು. ಅದಕ್ಕಾಗಿಯೇ ಇಡೀ ಜೀವನ ಮುಡಿಪಾಗಿಟ್ಟರು. ಕಮ್ಯುನಿಸ್ಟ್ ಪಕ್ಷಕ್ಕೆ ತಮ್ಮನ್ನು ಸಮರ್ಪಿಸಿಕೊಂಡರು. ವಿದ್ಯಾರ್ಥಿ ದೆಸೆಯಲ್ಲೇ ವಿದ್ಯಾರ್ಥಿಗಳ ಕುಂದುಕೊರತೆಗಳ ವಿರುದ್ಧ ಹೋರಾಟ ರೂಪಿಸಿದರು. ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್ ಒಂದನ್ನು ಕಾಂ. ಎಂ.ಎಸ್.ಕೆ., ಕಾಂ.ಸೂರಿ ಇತರರು ಆರಂಭಿಸಿದರು. ಅದರ ನಿರ್ವಹಣೆಗಾಗಿ ನಿಧಿ ಸಂಗ್ರಹಣೆ, ಸಂಗೀತದಂತಹ ಜನಪ್ರಿಯ ಕಾರ್ಯಕ್ರಮ ರೂಪಿಸಿ ಯಶಸ್ವಿಗೊಳಿಸಿದರು. ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಕಟ್ಟುವುದರಲ್ಲಿ, ಮತ್ತು ಅದರ ರಾಜ್ಯ ಕಾರ್ಯದರ್ಶಿಯಾಗಿಯೂ ಸಕ್ರಿಯ ಪಾತ್ರ ವಹಿಸಿದರು.

ಕಾಂ. ಕೃಷ್ಣನ್ ರವರು ಕಮ್ಯುನಿಸ್ಟ್ ಚಳುವಳಿ ಪ್ರವೇಶಿಸಿದ್ದು 1942 ರಲ್ಲಿ. 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂಬ ಗರ್ಜನೆಯ 'ಕ್ವಿಟ್ ಇಂಡಿಯಾ ಚಳುವಳಿ'ಯಲ್ಲಿ ಕ್ರಿಯಾಶೀಲರಾಗಿದ್ದರು. 1935 ರಲ್ಲಿ ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ ಕಟ್ಟುವಲ್ಲಿ ವಿಶೇಷ ಹೊಣೆಹೊತ್ತು ಕಾಂ. ಎನ್.ಎಲ್. ಉಪಾಧ್ಯಾಯ, ಎನ್.ಕೆ.ಉಪಾಧ್ಯಾಯರು, ಬಿ.ವಿ.ಕಕ್ಕಿಲ್ಲಾಯ, ಎನ್.ಎಸ್.ಹೊಳ್ಳ, ಸಿ.ಮೊನ್ನಯ್ಯ, ಶ್ರೀನಿವಾಸ ಗುಡಿ, ರಾಮರಾವ್, ಘಾಟೆ, ಎನ್.ಡಿ.ಶಂಕರ್ ಮುಂತಾದವರಿದ್ದ ಕಮ್ಯುನಿಸ್ಟ್ ಚಳುವಳಿಗೆ ಆಕರ್ಷಿತರಾದ ಕಾಂ. ಎಂ.ಎಸ್.ಕೃಷ್ಣನ್‌ರವರು ಕಾಂ.ಸೂರಿ, ನಿರಂಜನ, ಮುಧೋಳ್, ಶ್ರೀರಾಮಪ್ಪ, ಮುಂತಾದವರ ಜೊತೆ ನಡೆಸಿದ ಚಳುವಳಿಯಲ್ಲಿ ಹೆಗಲಿಗೆ ಹೆಗಲು ನೀಡಿ ಶ್ರಮಿಸಿದ್ದ ಸ್ಮರಣೀಯ.

1948 ರಲ್ಲಿ ಸ್ವಾತಂತ್ರ್ಯ ನಂತರವೂ ಸಹ ಕಮ್ಯುನಿಸ್ಟ್ ಪಕ್ಷವು ತೆಲಂಗಾಣ ಸಶಸ್ತ್ರ ಹೋರಾಟದಂತಹ ತೀವ್ರತರವಾದ ವರ್ಗ ಹೋರಾಟದಲ್ಲಿ ತೊಡಗಿತ್ತು. ಇದರಿಂದಾಗಿ ಪಕ್ಷವು ನಿಷೇಧಿತವಾಗಿತ್ತು. ಭಾರಿ ದಬ್ಬಾಳಿಕೆ ನಡೆದಿತ್ತು. ಹೀಗಾಗಿ ರಾಜ್ಯದಲ್ಲಿಯೂ ಸಹ ಭೂಗತರಾಗಿಯೇ ಚಟುವಟಿಕೆಗಳನ್ನು ನಡೆಸಬೇಕಿತ್ತು. ಎಂ.ಎಸ್.ಕೃಷ್ಣನ್‌ರವರು ಸಹ ಭೂಗತರಾಗಿದ್ದೇ ಕಾರ್ಮಿಕ ಚಳುವಳಿಯನ್ನು ಕಟ್ಟಿದರು. ಟ್ರೇಡ್ ಯೂನಿಯನ್ ಚಳುವಳಿಗೆ ಅವರು ಆಕರ್ಷಿತರಾದದ್ದು ಹಿರಿಯ ನಾಯಕರಾಗಿದ್ದ ಕೆ.ಟಿ.ಭಾಷ್ಯಂ ರವರ ಪ್ರೇರಣೆಯಿಂದ.

1950 ರ ವೇಳೆಗೆ ದೇಶದಲ್ಲಿನ ಹಲವು ಹೊಸ ಬೆಳವಣಿಗೆಗಳನ್ನು ಅನುಸರಿಸಿ, ಕಮ್ಯುನಿಸ್ಟ್ ಪಕ್ಷವೂ ಸಹ ಹೊಸ ರೀತಿಯಲ್ಲಿ ಕೆಲಸ ಆರಂಭಿಸಿತು.ಟ್ರೇಡ್ ಯೂನಿಯನ್ ಚಟುವಟಿಕೆಗಳ ಮೂಲಕ ಕಾರ್ಮಿಕ ವರ್ಗವನ್ನು ಸಂಘಟಿಸಲು ಕಾಂ. ಕೃಷ್ಣನ್ ಪೂರ್ಣತೊಡಗಿದರು.

1944-45 ರಲ್ಲಿ ಇಂಪಿರಿಯಲ್ ಟೊಬ್ಯಾಕೋ ಕಂಪನಿ ಕೆಲಸಗಾರರ ಯೂನಿಯನ್ ರಚನೆ, 1946 ರಲ್ಲಿ ಡಿ.ಎಸ್. ಶ್ರೀರಾಮು ಜೊತೆ ಕೂಡಿ ರೈಲ್ವೆ ಕೆಲಸಗಾರರನ್ನು ಸಂಘಟಿಸಿದರು. ಮಾತ್ರವಲ್ಲ ಆಗ ನಡೆದ ಚಳುವಳಿ ಅತ್ಯಂತ ಗಮನಾರ್ಹವಾಗಿದ್ದು. ಅದರಲ್ಲಿ ಮುಖ್ಯ ಪಾತ್ರ ವಹಿಸಿದ್ದರು. 1949 ರಲ್ಲಿ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಕ್ಕೆ ನಡೆದ ಚಳುವಳಿಯಲ್ಲಿ ಕಾರ್ಮಿಕರನ್ನು ತೊಡಗಿಸಲು ಶ್ರಮಿಸಿದರು. 'ಆರ್ಕಾಟ್ ಬಾಯ್ಕಾಟ್', ದಿವಾನರ ಆರ್ಡರ್ ಹೋಗಲಿ ಎಂಬ ಘೋಷಣೆಯಡಿಯಲ್ಲಿ ವಿದ್ಯಾರ್ಥಿಗಳು ಸಮರಧೀರ ಚಳುವಳಿಯೇ ನಡೆಯಿತು. ಸುಮಾರು 11 ಸಾವಿರ ರೈಲ್ವೆ ಕಾರ್ಮಿಕರು ಸಹ ಈ ಚಳುವಳಿಗೆ ಬೆಂಬಲಿಸಿದ್ದರು. 1954 ರಲ್ಲಿ ಪ್ರಮುಖ ಸಾರ್ವಜನಿಕ ಉದ್ದಿಮೆಯಾದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ನ ನೌಕರರ ಸಂಘಕ್ಕೆ ಆಯ್ಕೆ, 1951-52 ರಲ್ಲಿ ಪೈವುಡ್, 1954 ರಲ್ಲಿ ಬೆಂಗಳೂರು ಸಿಲ್ಕ್ ಕೆಲಸಗಾರರ ಸಂಘಟನೆ ಸ್ಥಾಪಿಸಲಾಯಿತು. ಕಾಂ. ಕೃಷ್ಣನ್, ಕಾಂ.ಸೂರಿ ಜೊತೆಯಲ್ಲೆ ದುಡಿದರು. ಈ ಇಬ್ಬರೂ 'ಅವಳಿ ಸೋದರರೆಂದೇ' ಗುರುತಿಸಲ್ಪಡುತ್ತಿದ್ದರು.



1956 ರಲ್ಲಿ ಎಐಟಿಯುಸಿಯ ರಾಜ್ಯ ಸಮ್ಮೇಳನದಲ್ಲಿ ಕಾಂ. ಕೃಷ್ಣನ್ ರಾಜ್ಯಕಾರ್ಯದರ್ಶಿಯಾಗಿ ಆಯ್ಕೆಯಾದರು. ಬಿ.ಇ.ಎಲ್, ಕೃಷ್ಣ ಮಿಲ್ಸ್, ರಾಮಕುಮಾರ್ ಮಿಲ್ಸ್, ರೆಮ್ಕೋ, ಟೋಬ್ಯಾಕೋ, ಐಡಿಯಲ್ ಜಾವಾ, ಕೆ.ಅಲ್.ಮಿಲ್ಸ್‌ನಂತಹ ಪ್ರತಿಷ್ಠಿತ ಕಾರ್ಖಾನೆಗಳ ಕಾರ್ಮಿಕರನ್ನು ಸಂಘಟಿಸಿ ಧೀಮಂತ ಹೋರಾಟಗಳು ನಡೆದವು.

1980 ರ ದಶಕದಲ್ಲಿ ರಾಜ್ಯ ಇತಿಹಾಸವೇ ಅಪೂರ್ವವಾದ, ರಾಜ್ಯದ ರಾಜಕೀಯ ಚಿತ್ರಣವನ್ನೇ ಬದಲಿಸಲು ಪ್ರಭಾವಿಸಿದ ಅತ್ಯಂತ ದೀರ್ಘ

ಪುಟ 10 ಕ್ಕೆ

ಕರ್ನಾಟಕ ಈ ವಾರ

ಶಿವಪ್ಪನವರ ಉಚ್ಛಾಟನೆ: ಬೀದಿಯ ರಂಪಾಟ

ಬಿಜೆಪಿಯ ಭಿನ್ನಮತೀಯ ನಾಯಕ ಶಾಸಕ ಬಿ.ಬಿ.ಶಿವಪ್ಪನವರನ್ನು ಪಕ್ಷದಿಂದ ಉಚ್ಛಾಟಿಸಿ ಒಂದು ಹಾದಿಯನ್ನು ಬಸವರಾಜ್ ಪಾಟೀಲರು ತೋರಿಸಿದ್ದಾರೆ. ಶಿವಪ್ಪನವರ ನೆತ್ತಿಯ ಮೇಲೆ ಶಿಸ್ತಿನ ಕ್ರಮದ ತೂಗು ಕತ್ತಿ ಇರಿಸಿ ಧಮಕಿ ಹಾಕಿ ತಹಬಂದಿಗೆ ತರಬಹುದೇನೋ ಎಂದೊ ಅಥವಾ ಶಿವಪ್ಪನವರನ್ನು ಉಚ್ಛಾಟಿಸಿದರೆ ಬಿಜೆಪಿಯೊಳಗೆ ಪರಿಣಾಮ ನೆಟ್ಟಗಾಕಲಿಕ್ಕಿಲ್ಲವೆಂದೋ ಅಥವಾ ಒಳಗುಟ್ಟು ಹೊರಹೋಗಿ ಮಾನ ಹರಾಜಾಗುವುದೆಂದೋ ವಿಳಂಬಿಸುತ್ತಲೆ ಬರಲಾಗಿತ್ತು. ಸೇಡಂ ಅಧ್ಯಕ್ಷರಾದ ಮೇಲೆ ಒಣಗುಟುರು ಹಾಕಿದ್ದರೂ ಕ್ರಮ ಕೈಗೊಂಡಿರಲಿಲ್ಲ. ಸೆಪ್ಟೆಂಬರ್ 5 ರಂದು ಅಶಿಸ್ತಿನ ಬಗ್ಗೆ ತನಿಖೆ ನಡೆಸಲು ಹೊಸ ಸಮಿತಿ ರಚಿಸಲಾಗಿತ್ತು. ಆದರೆ 6 ರಂದೇ ಶಿವಪ್ಪನವರನ್ನು ಉಚ್ಛಾಟಿಸಲಾಯಿತು. ಅವರಿಗೆ ಶೋಕಾಸ್ ನೋಟಿಸ್ ಸಹಾ ನೀಡಲಿಲ್ಲವಂತೆ!

ಬಿಜೆಪಿ ನಾಯಕರು ತಾವು ಪ್ರಜಾಪ್ರಭುತ್ವವಾದಿಗಳೆಂದು ಎಷ್ಟೇ ಶಂಖ ಊದಿಕೊಂಡರೂ ತುರ್ತುಸ್ಥಿತಿಯನ್ನು ವಿರೋಧಿಸಿದ ಏಕೈಕ ವೀರರೆಂದು ಜಾಗಟೆ ಹೊಡೆದರೂ ಅದರ ಸರ್ವಾಧಿಕಾರತ್ವವನ್ನು ಮರೆಮಾಚಿಕೊಳ್ಳಲು ಆಗಲಿಲ್ಲ. ಒಳಜಗಳಗಳು ಬೀದಿಯಲ್ಲಿ ಬಿದ್ದಿವೆ.

ಈ ನಿಷ್ಠುರ ಕ್ರಮದಿಂದಾಗಿ ಯಡಿಯೂರಪ್ಪ, ಅನಂತಕುಮಾರ್‌ನ 'ಕೊಡೆ'ಯ ನೆರಳು ಇನ್ನು ಖಾತ್ರಿಯಾದಂತೆ ಎಂದು ಸೇಡಂ ಹಿಗ್ಗುತ್ತಿದ್ದಾರೆಂದು 'ನಕ್ಷತ್ರಿಕನ' ವರದಿಯಿದೆ.

ಇತ್ತ ಶಿವಪ್ಪನವರು ತಮ್ಮ ಮಾಜಿ ನಾಯಕರಿಗೆ ಮಂಗಳಾರತಿ ಎತ್ತುತ್ತಿದ್ದಾರೆ. ರಾಜ್ಯದಲ್ಲಿರುವ ಕೇಂದ್ರದ ಸಚಿವರೊಬ್ಬರು ವಾಜಪೇಯಿಯವರನ್ನು ಬದಲಾಯಿಸಲು ಸಹಿ ಸಂಗ್ರಹಣೆಯಲ್ಲಿ ತೊಡಗಿದ್ದಾರೆಂದೂ, ಮನೆಯಲ್ಲಿ ಮುದ್ರಾಣಲಯವನ್ನಿಟ್ಟುಕೊಂಡು ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು ಹಂಚುತ್ತಿದ್ದಾರೆಂದೂ ಅವರ ಮೇಲೆ ಶಿಸ್ತು ಕ್ರಮ ಯಾಕಿಲ್ಲವೆಂದು ಪ್ರಶ್ನಿಸಿದ್ದಾರೆ. ಅಲ್ಲದೆ ತಮ್ಮ ಬೆಂಬಲಿಗರ ಸಮಾವೇಶವನ್ನು ಸೆಪ್ಟೆಂಬರ್ 26 ರಂದು ಸಕಲೇಶಪುರದಲ್ಲಿ ಕರೆದು ಬಲ ಪ್ರದರ್ಶನಕ್ಕಿಳಿದಿದ್ದಾರೆ. ಪಕ್ಷ ಕಟ್ಟಿದ 'ಪಿತಾಮಹ'ರೆಂದು ಜರತಾರಿ ಶಾಲು ನೇವರಿಸಿಕೊಳ್ಳುತ್ತಿದ್ದ 'ಪಿತೃ'ಗಳಿಗೆ ಹೀಗಾದರೆ ತಮ್ಮಂತಹವರದೇನು? ಎಂಬ ಚಿಂತೆ ಹಲವು ಕಮಲಧಾರಿಗಳನ್ನು ಕಾಡುತ್ತಿದೆಯಂತೆ. ಎಲ್ಲಾ ಚುನಾವಣೆಗಳಲ್ಲಿ ಜನರಿಂದ ತಿರಸ್ಕಾರಕ್ಕೊಳಗಾಗಿ ಮೂಲೆ ಗುಂಪಾಗಿ ಉದ್ಯೋಗವಿಲ್ಲದಿರುವ ಬಿಜೆಪಿ ನಾಯಕರು ಇಷ್ಟಾದರೂ ಕೆತ್ತದಿದ್ದರೆ ಹೇಗೆ ಎಂದು ಶಿವಪ್ಪನವರ ಬೆಂಬಲಿಗರು ವ್ಯಂಗ್ಯವಾಡುತ್ತಿದ್ದಾರೆ.

ಬೀದರ್ ಚರ್ಚ್ ಮೇಲೆ ಧಾಳಿ ಯಾರ ಕೈವಾಡ?

ಬೀದರನ ಚರ್ಚ್‌ವೊಂದರ ಮೇಲೆ ಕೆಲವರು ಧಾಳಿ ಮಾಡಿ ಅನಾಹುತ ಉಂಟಾಗಿರುವುದು ವರದಿಯಾಗಿದೆ.

ಇತ್ತೀಚಿನ ಕೆಲವು ಚರ್ಚ್‌ಗಳಲ್ಲಿ ನಡೆದ ಬಾಂಬ್ ಸ್ಫೋಟಕ್ಕೆ ಭಾಗಿಯಾದ ದೀನದಾರ್ ಅಂಜುಮಾನ್ ಸಂಘಟನೆಯ ಕಾರ್ಯಕರ್ತರನ್ನು ಬಂಧಿಸಿ ಜೈಲಿನಲ್ಲಿಡಲಾಗಿದೆ. ಉಳಿದವರ ಬಂಧನಕ್ಕೆ ವ್ಯಾಪಕ ಜಾಲ ಬೀಸಲಾಗಿದೆಯೆಂದು ಕೇಂದ್ರ ಸರ್ಕಾರ ಘೋಷಿಸಿದೆ. ಚರ್ಚ್‌ಗಳ ಮೇಲೆ ನಡೆದ ಎಲ್ಲಾ ಧಾಳಿಗಳಲ್ಲಿ ದೀನದಾರ್ ಮತ್ತು ಪಾಕಿಸ್ತಾನದ ಐಎಸ್‌ಐ ಕೈವಾಡವಿದೆಯೆಂದು ಸಂಘ ಪರಿವಾರವು ದೇಶದ ತುಂಬಾ ಡಾಣಾಡಂಗುರವನ್ನು ಹೊಡೆಯುತ್ತಿದೆ. ಹೀಗಾಗಿ ಇನ್ನೂ ಯಾವುದೇ ಘಟನೆ ಸಂಭವಿಸಿದಲ್ಲಿ ತನಿಖೆ ಅನಗತ್ಯವೆಂಬಂತೆ ಹೇಳಲಾಗುತ್ತದೆ. ಇದರ ನಡುವೆಯೂ ಎದ್ದು ಬರುವ ಒಂದು ಪ್ರಶ್ನೆ.... ದೀನದಾರ ಸಂಘಟನೆಯ ರಾಷ್ಟ್ರದ್ರೋಹಿಗಳ ಜನ್ಮಜಾತಕ ಜಾಲಾಡಿ ಜೈಲಿನಲ್ಲಿಟ್ಟ ನಂತರವೂ ಬೀದರ್ ಚರ್ಚ್‌ನ ಮೇಲೆ ಯಾಕೆ ದಾಳಿ ನಡೆಯಿತು? ಪಾತ್ರದಾರಿಗಳು-ಸೂತ್ರಧಾರಿಗಳು ಯಾರು? ಬೆಳಗಾವಿಯ ರಾಮದುರ್ಗದಲ್ಲಿಯೂ ಪ್ರಾರ್ಥನಾ ಸ್ಥಳವೊಂದರ ಮೇಲೆ ಮತ್ತೆ ಆಕ್ರಮಣ ಆಗಿರುವ ಸುದ್ದಿಇದೆ. ಇವೆಲ್ಲಾ ಯಾರ ಕೈವಾಡದಿಂದಾದವುಗಳು? ಜನರಲ್ಲಿ ಈಗಮತ್ತೆ ಗೊಂದಲ ಇದೆ. ಸಂಘ ಪರಿವಾರವು ಇನ್ನೂ ಉತ್ತರ ಸಿದ್ದಪಡಿಸಿಕೊಂಡಿಲ್ಲೆಂದು ಕಾಣುತ್ತಿದೆ. ಚರ್ಚ್‌ಗಳಲ್ಲಿನ ಬಾಂಬ್ ಸ್ಫೋಟ ಸಂಭವಿಸಿದ ತಕ್ಷಣ ತನಿಖೆಗೆ ಆದೇಶ ಹೊರಡುವ ಮೊದಲೇ ಐಎಸ್‌ಐ ಕೈವಾಡ ಗುರುತಿಸಿದ್ದ ಸಂಘ ಪರಿವಾರವು ಈಗ ಇನ್ನೂ ಉತ್ತರ ಸಿದ್ಧಪಡಿಸಿಕೊಂಡಿರದಿರುವುದು ಸೋಜಿಗ ಹುಟ್ಟಿಸಿದೆ.

ಇರುವಾಗ ಬಿಜೆಪಿಯ ನಾಯಕರು ರಾಜ್ಯದಲ್ಲಿರುವ ಕೇಂದ್ರದ ಸಚಿವರಾದ ಅನಂತ ಮತ್ತು ಧನಂಜಯಕುಮಾರರು ಉತ್ತರಭೂಪರಂತೆ ಮಾತನಾಡುತ್ತಿದ್ದಾರೆ. ಬೆಂದ ಮನೆಯಲ್ಲಿ ಗಳ ಹಿರಿಯುವುದು ಅವರಿಗೆ ಹೊಸದಲ್ಲ. ಅವರು ಕೇಂದ್ರ ಸರ್ಕಾರದ ಪ್ರತಿನಿಧಿಗಳೆಂಬುದು ಮರೆತು ಕೇವಲ ಬಿಜೆಪಿಯ ವಕ್ತಾರರಂತೆ ಆಡುತ್ತಿದ್ದಾರೆ. ಎರಡು ರಾಜ್ಯ ಸರ್ಕಾರಗಳಿಗೆ ಪೂರ್ಣ ಬೆಂಬಲ ನೀಡಬೇಕಾದ ಹೊಣೆಯಿಂದ ಜಾರುತ್ತಿದ್ದಾರೆ. ಇದು ಖಂಡನೀಯ.

ರಾಜ್ಯ-ಕೇಂದ್ರಗಳ ಸಂಬಂಧಗಳನ್ನು ಉತ್ತಮಗೊಳಿಸುತ್ತೇವೆನ್ನುತ್ತಲೇ ರಾಜ್ಯಗಳ ಆಂತರಿಕ ವಿದ್ಯಮಾನಗಳಲ್ಲಿ ಹಸ್ತಕ್ಷೇಪ ನಡೆಸಲಾಗುತ್ತಿದೆ. ಪಶ್ಚಿಮ ಬಂಗಾಳದಲ್ಲಿ ತನ್ನ ಖಾತೆಯನ್ನೇ ಮರೆತು ಬಂಗಾಳದಲ್ಲೇ ಠಿಕಾಣಿ ಹೂಡಿರುವ ಗೂಂಡಾ ನಾಯಕಿ ಮಮತಾ ಬ್ಯಾನರ್ಜಿಯ ತಾಳಕ್ಕೆ ತಕ್ಕಂತೆ ಕೇಂದ್ರ ಸರ್ಕಾರ ಕುಣಿಯ ತೊಡಗಿದೆ. ಒಬ್ಬ ಕೇಂದ್ರ ಸಚಿವೆ ದೂರು ನೀಡುವುದು ಅದರ ವಿಚಾರಣೆಗೆ ಇನ್ನೊಬ್ಬ ಕೇಂದ್ರ ಸಚಿವ ಜಾರ್ಜ್ ಫರ್ನಾಂಡೀಸರನ್ನು ಕಳಿಸುವುದು, ಅವರು ಹಸಿದು ಕಣ್ಣೀರಿನಿಂದ ಕುರ್ತ-ಪೈಜಾಮ ತೋಯಿಸಿಕೊಂಡು, ದೆಹಲಿಯಲ್ಲಿ ಅದರ ಆಧಾರದಲ್ಲಿ ಎಚ್ಚರಿಕೆ ನೀಡುವುದು...... ಯಾವ ಕಾನೂನು ಸಂವಿಧಾನದಲ್ಲಿದೆ. ಹಲವು ಮುಖಭಂಗಗಳನ್ನು ಅನುಭವಿಸಿದ ಮೇಲೂ ಮತ್ತೆ-ಮತ್ತೆ ಈ ಕ್ರಮಗಳು ಫ್ಯಾಸಿಸ್ಟ್ ಮಾದರಿಯಲ್ಲವೇ?

ರಾಜ್ಯದಲ್ಲಿಯೂ ದೆಹಲಿಯಲ್ಲಿಯೂ ಈ ಉಭಯ ಕುಮಾರರು ಹೆಚ್ಚು ಬಾಲ ಬಿಚ್ಚದಂತೆ ಜನತೆ ಕಡಿವಾಣ ಹಾಕಬೇಕು.

ಕಾಡುಗಳ್ಳನ ಹೂಂಕಾರ: ಬಿಜೆಪಿಗಳ ಆತುರ

ಎಲ್ಲಾ ಕಾಗದ ಪತ್ರ, ಇತ್ಯಾದಿಗಳ ಲಗೇಜ್ ಹಿಡಿದು ಮೂರನೇ ಬಾರಿ ಕಾಡು ಪ್ರವೇಶಿಸಿದ್ದ ಗೋಪಾಲನ್ ತನ್ನ ಭರವಸೆಯಂತೆ ರಾಜ್ ಮತ್ತು ಸಹಚರರನ್ನು ಕರೆದು ತರಲಿಲ್ಲ. ಬಂದಿದ್ದು ಮತ್ತೆ ಅದೇ ಕ್ಯಾಸೆಟ್‌ಗಳೊಂದಿಗೆ, ನಂತರ ಸೂಪರ್‌ಸ್ಟಾರ್ ರಜನಿಕಾಂತ್, ತಮಿಳುನಾಡು ಮುಖ್ಯಮಂತ್ರಿ ಎಂ.ಕರುಣಾನಿಧಿ ನಕ್ಕೀರನ್ ಗೋಪಾಲನ್ ಬೆಂಗಳೂರು ಭೇಟಿ... ಸಂಧಾನವೇ ಸರಿಯಾದ ಮಾರ್ಗವೆಂದು ಕರ್ನಾಟಕ ಸರ್ಕಾರದ ನಿರ್ಧಾರ...

ರಾಜ್ ಬಿಡುಗಡೆ ವಿಳಂಬಕ್ಕೆ ಸುಪ್ರೀಂಕೋರ್ಟಿನ ತೀರ್ಪು ಅಡ್ಡಿಯಾಯಿತು ಎಂದೆಲ್ಲಾ ವಿಶ್ಲೇಷಿಸಲಾಗುತ್ತಿದೆ. ವೀರಪ್ಪನ್ ಕೋರಿಕೆಯಂತೆ ಟಾಡಾ ಬಂಧಿಗಳನ್ನು ಬಿಡುಗಡೆಗೊಳಿಸಬಾರದೆಂದು ದಿವಂಗತ ಸಬ್‌ಇನ್ಸ್‌ಪೆಕ್ಟರ್ ಶಕೀಲ್‌ರ ತಂದೆ ಕೋರಿದ್ದ ಮನವಿಯನ್ನು ಪುರಸ್ಕರಿಸಿ ಸುಪ್ರೀಂಕೋರ್ಟ್ ಬಿಡುಗಡೆಯನ್ನು ತಡೆದಿದೆ. ಹಾಗೂ ಕಾಡುಗಳ್ಳನನ್ನು ಹಿಡಿಯಲಾಗದೆ ಇರುವ ತಮಿಳುನಾಡು-ಕರ್ನಾಟಕ ಸರ್ಕಾರಗಳನ್ನು ತರಾಟೆಗೆ ತೆಗೆದುಕೊಂಡಿದೆ.



ಹಾಗೆ ನೋಡಿದರೆ ಗಣ್ಯರನ್ನು ಅಪಹರಿಸಿ ತಮ್ಮ ಕೋರಿಕೆಗಳನ್ನು ಈಡೇರಿಸಬೇಕೆಂದು ತಮ್ಮ ಅಪರಾಧಿ ಕೃತ್ಯಗಳನ್ನು ಮುಂದುವರೆಸುವ ಶಕ್ತಿಗಳು ಹಾಗೂ ಎಲ್ಲಾ ಕಾನೂನು ಉಲ್ಲಂಘಿಸಿ ಅದಕ್ಕೆ ಸೊಪ್ಪು ಹಾಕುವ ಸರ್ಕಾರದ ಪ್ರವೃತ್ತಿಗೆ ಕಡಿವಾಣ ಹಾಕಬೇಕೆಂದು ರಾಷ್ಟ್ರಪತಿಗಳು ಹಿಂದೆ ರಾಷ್ಟ್ರವನ್ನು ಎಚ್ಚರಿಸಿದ್ದರು. ಈಗಿನ ಸುಪ್ರೀಂ ಕೋರ್ಟ್‌ನ ತೀರ್ಪು ಅದೇ ವಿಚಾರಸರಣಿಯಲ್ಲಿದೆ. ರಾಜ್ ಅಪಹರಣಕ್ಕೆ ಸಂಬಂಧಿಸಿ ಅವರುಗಳನ್ನು ಬಿಡುಗಡೆ ಗೊಳಿಸಲು ಅಗತ್ಯವಿರುವ ಎಲ್ಲಾ ಕ್ರಮವಹಿಸಲಿ. ಆದರೆ ಸರ್ಕಾರಗಳೇ ಕಾಡುಗಳ್ಳನಿಗೆ ಪೂರ್ತಿ ಶರಣಾಗುವುದು ಸಲ್ಲದು, ಇದು ಅಪಾಯಕಾರಿ ಪರಿಣಾಮಗಳಿಗೆ ದಾರಿ ಮಾಡುತ್ತದೆ ಎಂಬ ಎಚ್ಚರವೂ ಇರಬೇಕು. ಸರ್ಕಾರ ಸಾರ್ವಭೌಮ ಜನತೆಯ ಪ್ರತಿನಿಧಿ ಎಂಬ ನೆನಪು ಸಹಾ ಇರಬೇಕು.

ಇಲ್ಲಿ ರಾಜ್ ಅಪಹರಣದಿಂದ ರಾಜ್ಯದ ಜನತೆ ಸಂಕಷ್ಟದಲ್ಲಿರುವಾಗ ಸಂಧಾನ ಕ್ರಮಗಳು ಫಲನೀಡದೆ ಕಂಗಾಲು ಪಡುವ ಪರಿಸ್ಥಿತಿ

ವಿಲೀನ: ಸಂದರ್ಭಸಾದಕವಾಗದಿರಲಿ

ಜಾತ್ಯಾತೀತ ಜನತಾದಳದ ರಾಜ್ಯಮಟ್ಟದ ಸಭೆಯು ಜನಸಾಮಾನ್ಯರನ್ನು ಬಾಧಿಸುತ್ತಿರುವ ಸಮಸ್ಯೆಗಳನ್ನೆತ್ತಿ ಹೋರಾಡಲು ನಿರ್ಧರಿಸಿದೆ. ಉದಾರೀಕರಣ, ಜಾಗತೀಕರಣದ ದುಷ್ಪರಿಣಾಮಗಳನ್ನು ನಿರ್ಣಯದಲ್ಲಿ ಗುರುತಿಸಿ, ರೈತರ ಇತರೆ ಜನರ ಆಂದೋಲನ ಅಗತ್ಯವೆಂದು ತಿಳಿಸಿದೆ. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳನ್ನು ಎದುರಿಸಿ ಹೋರಾಡುವುದು ಮೂರನೇ ಪರ್ಯಾಯಕ್ಕೆ ಮುಂದಾಗುವುದು ಸ್ವಾಗತಾರ್ಹ. ನಿಲುವುಗಳ ಆಧಾರದಲ್ಲೇ ಜನತಾದಳ (ಯು) ವಿನೊಂದಿಗೆ ವಿಲೀನದ ಪ್ರಕ್ರಿಯೆಯೂ ಇರುತ್ತದೆಂದು ಅಭಿಪ್ರಾಯ ಪಡಲಾಗಿದೆ.

ಆದರೆ ಈ ವಿಲೀನದ ಪ್ರಕ್ರಿಯೆಗೆ ಕೇಂದ್ರದ ಎನ್‌ಡಿಎ ಜೊತೆಗಿನ ತನ್ನ ಸಂಬಂಧ ಅಡ್ಡಿಯಾಗಬಾರದು ಎಂದು ಸಂಯುಕ್ತ ಜನತಾದಳ ಸ್ಪಷ್ಟಪಡಿಸಿದೆ. ತಾನು ಕೇಂದ್ರದಲ್ಲಿ ಎನ್‌ಡಿಎ ಭಾಗವಾಗಿರುವುದಾಗಿಯೂ ರಾಜ್ಯದಲ್ಲಿ ಬಿಜೆಪಿ ಜೊತೆ ಸಖ್ಯ ತೊರೆಯಬಹುದೆಂದು ಶರತ್ತು ತಿಳಿಸಿದೆ. ಈ ಬಗ್ಗೆ ಜನತಾದಳ(ಎಸ್) ನಾಯಕತ್ವ ರಾಷ್ಟ್ರ ಹಾಗೂ ರಾಜ್ಯಮಟ್ಟದಲ್ಲಿ ಒಂದೇ ಖಚಿತವಾದ ನಿಲುವುತಳೆಯದೆ ರಾಜ್ಯಕ್ಕೆ ಇಂತಹ ಸೂತ್ರ ಅನುಸರಿಸಬಹುದೇ ಎಂದು ಯೋಚಿಸುತ್ತಿರುವಂತಿದೆ. ಹೀಗಾದಲ್ಲಿ ಅಧಿಕಾರ ಗಳಿಸಲು ಎಂತಹ ಸಂದರ್ಭಸಾದಕತನಕ್ಕೂ ಸಿದ್ದ ಎಂಬುದು ಸರಿಯಲ್ಲ. ಈ ದಿಕ್ಕಿನಲ್ಲಿ ಜೆಡಿ(ಎಸ್) ನಾಯಕತ್ವ ಚಿಂತಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು.

ಆಲಮಟ್ಟಿ ವಿದ್ಯುತ್ ಯೋಜನೆ : ಖಾಸಗಿಯವರಿಗೆ

ವಿದ್ಯುತ್‌ನ ಘಟಕಗಳ ನಿರ್ಮಾಣ, ನಿರ್ವಹಣೆ ಮತ್ತು ಉತ್ಪಾದನೆಯಲ್ಲಿ ಸಮರ್ಥ ಎಂಬುದನ್ನು ನಮ್ಮ ಕರ್ನಾಟಕ ಪವರ್ ಕಾರ್ಪೊರೇಷನ್(ಕೆಪಿಸಿ) ಸಾಬೀತುಪಡಿಸಿದೆ. ರಾಯಚೂರಿನ ಥರ್ಮಲ್ ವಿದ್ಯುತ್ ಘಟಕ, ಕಾಳಿ ಯೋಜನೆಗಳು ಜೀವಂತ ಸಾಕ್ಷಿ. ಹೀಗಿರುವಾಗ ಆಲಮಟ್ಟಿ ಜಲ ವಿದ್ಯುತ್ ಯೋಜನೆಯನ್ನು ಕೆ.ಪಿ.ಸಿ.ಗೆ ವಹಿಸದೇ ವಿಶ್ವಾದ ವಿದ್ಯುತ್ ಕಂಪನಿ Tapco ಗೆ ನೀಡಲು ಕೃಷ್ಣ ಸರ್ಕಾರ ನಿರ್ಧರಿಸಿದೆ. ತಿಳುವಳಿಕೆ ಒಪ್ಪಂದಕ್ಕೆ(MOV) ಬರಲಾಗಿದೆ. ಹಾಗೆ ನೋಡಿದರೆ ಈ ಪ್ರಸ್ತಾಪ 1992 ರಿಂದಲೂ ನವೀಕರಣಗೊಳ್ಳುತ್ತಾ ಬಂದಿದೆ.

ಒಂದು ಮೆಗಾವಾಟ್ ವಿದ್ಯುತ್ ಉತ್ಪಾದಿಸಿ, ಅನುಭವ ಇಲ್ಲದ ಈ 'ಟ್ಯಾಪ್ಕೋ' ಕಂಪನಿಗೆ 1107 ಮೆ.ವಾ. ವಿದ್ಯುತ್ ಉತ್ಪಾದನೆ ಹೊಣೆ ವಹಿಸಿರುವ ಔಚಿತ್ಯ ಪ್ರಶ್ನಿಸಲಾಗಿದೆ. ಕೆಪಿಸಿ ಹಾಗೂ ಕೃಷ್ಣ ನದಿ ನಿಗಮದ ವ್ಯಾಪ್ತಿಯಲ್ಲಿದ್ದರೆ ವಿದ್ಯುತ್ ಉತ್ಪಾದನೆಯೂ ಸಮರ್ಥವಾಗಿರುವುದಲ್ಲದೇ, ಗ್ರಾಹಕರಿಗೆ ಅತ್ಯಂತ ಕಡಿಮೆ ದರದಲ್ಲಿಯೂ ಪೂರೈಕೆ ಸಾಧ್ಯವಿದೆ. ಇದನ್ನು ಬಿಟ್ಟು ಎಲ್ಲವನ್ನು ಖಾಸಗಿ ಕಂಪನಿಗಳಿಗೆ ವಹಿಸುವ 'ಸೈಬರ್ ಕೃಷ್ಣ'ರ ದೂ(ದು)ರಾಲೋಚನೆ ಅರ್ಥವಾಗುವಂತದ್ದು!

ಜ್ಯೋತಿಬಸು ಆತ್ಮಕಥನ

ಪುಟ 2 ರಿಂದ

ಐದು ಜನರ ಸಾವು. ಬರ್ಧಮಾನ್‌ನಲ್ಲಿ ಕೂಡ ಚಳುವಳಿ ವೇಳೆ ಪೊಲೀಸರ ಗುಂಡು.

ಎರಡನೇ ದಿನ ಮುಷ್ಕರ ಇನ್ನಷ್ಟು ವ್ಯಾಪಕ. ಕೇಂದ್ರ ಸರಕಾರದಿಂದ ಇನ್ನಷ್ಟು ಕ್ರೂರ ದಮನ ಕಾರ್ಯಚರಣೆ. ಕಾರ್ಮಿಕ ಸಂಘಗಳ ಸಂಬಂಧಗಳ ಸಮಿತಿಯ ಕರೆಯ ಮೇರೆಗೆ ಜುಲೈ 14 ರಂದು ರಾಷ್ಟ್ರವ್ಯಾಪಿ ಸಾಂಕೇತಿಕ ಮುಷ್ಕರ ಮುಂಬಯಿ, ಮದ್ರಾಸ್ ಗುಜರಾತ್ ಮತ್ತು ಮಹಾರಾಷ್ಟ್ರ ಜನರಿಂದ ಈ ಮುಷ್ಕರಕ್ಕೆ ಉತ್ತಮ ಬೆಂಬಲ. ಏನಿದ್ದರೂ, ಈ ಅನಿರ್ದಿಷ್ಟಾವಧಿ ಮುಷ್ಕರ ಹೆಚ್ಚು ಕಾಲ ಮುಂದುವರಿಯಲಿಲ್ಲ. ಸರಕಾರಿ ಭಯೋತ್ಪಾದನೆಯ ಒತ್ತಡಕ್ಕೆ ಮಣಿದು ಜುಲೈ 16ರ ಮಧ್ಯರಾತ್ರಿ ಮುಷ್ಕರ ವಾಪಸು.

ಆದರೆ, ಜಂಟಿ ಕ್ರಿಯಾ ಸಮಿತಿಯ ಸ್ಥಾಯೀ ಪರಿಷತ್‌ನ ಒಬ್ಬ ಸದಸ್ಯನನ್ನು ಹೊರತುಪಡಿಸಿ ಉಳಿದೆಲ್ಲಾ ಮುಖಂಡರು ಇನ್ನೂ ಸೆರಮನೆಯಲ್ಲೇ. ಮುಷ್ಕರದಲ್ಲಿ ಪಾಲ್ಗೊಂಡ ನೌಕರರ ಮೇಲೆ ಸೇಡಿನ ಕ್ರಮ ಕೈಗೊಳ್ಳಲು ಸರಕಾರದ ಹೆಜ್ಜೆ.

ಮುಷ್ಕರ ವಾಪಸ್ಸು ಪಡೆದ ನಂತರವೂ ಬಂಧನ ಸತ್ರ ಮುಂದುವರಿಕೆ 6500 ನೌಕರರಿಗೆ ಅಮಾನತು ಹಾಗೂ ರಿಟ್ರೆಂಚ್‌ಮೆಂಟ್ ನೋಟಿಸ್. ಈ ನೋಟಿಸ್‌ಗಳನ್ನು ವಾಪಸ್ ಪಡೆಯಬೇಕು, ಯಾವುದೇ ಷರತ್ತಿಲ್ಲದೆ ಕೆಲಸಕ್ಕೆ ಮರಳಿ ಸೇರಿಸಿಕೊಳ್ಳಬೇಕು, ಎಲ್ಲ ಬಂಧಿತರನ್ನು ಬಿಡಗಡೆ ಮಾಡಬೇಕು, ಬಂಧನ ಕಾರ್ಯಚರಣೆ ನಿಲ್ಲಿಸಬೇಕು ಹಾಗೂ ಎಲ್ಲ ಮೊಕದ್ದಮೆಗಳನ್ನು ವಾಪಸ್ಸು ಪಡೆಯಬೇಕು ಎಂದು ಕಮ್ಯೂನಿಸ್ಟ್ ಪಕ್ಷದ ರಾಜ್ಯ ಮಂಡಳಿಯಿಂದ ಆಗ್ರಹ. ನಮ್ಮಿಂದ ಜುಲೈಗಳಲ್ಲಿ ಪ್ರತಿಭಟನೆಗಳ ಆರಂಭ ಸರಕಾರ ನಿರೂಪಯುಕ್ತ ಎಂಬುದು ಈ ಹೊತ್ತಿಗೆ ಬಹುತೇಕ ಜನಕ್ಕೆ ಮನವರಿಕೆ.

ಮಣಿದ ಸರಕಾರ. ಆರೋಪ ಪಟ್ಟಿಗಳು, ಅಮಾನತು ಮತ್ತು ರಿಟ್ರೆಂಚ್‌ಮೆಂಟ್ ಆದೇಶಗಳು ಭಾಗಶಃ ವಾಪಸ್ಸು ಸರಕಾರಿ ನೌಕರರ ಹೋರಾಟದ ಸಂದೇಶ ಸರಕಾರಕ್ಕೆ ತಲುಪಿದೆಯನ್ನುವುದು ಕೆಲವೇ ದಿನಗಳಲ್ಲಿ ಸ್ಪಷ್ಟ. ಕೇಂದ್ರ ಸರಕಾರಿ ನೌಕರರಿಗೆ ಸಂಬಂಧಿಸಿದ ವೇತನ ಆಯೋಗದ ಎಲ್ಲ ಮುಖ್ಯ ಶಿಫಾರಸ್ಸುಗಳನ್ನು ಸರಕಾರ ಅಂಗೀಕರಿಸುವುದೆಂದು ಕೇಂದ್ರ ಹಣಕಾಸು ಸಚಿವ ಮೊರಾರ್ಜಿ ದೇಸಾಯಿ ಅವರಿಂದ ಲೋಕಸಭೆಯಲ್ಲಿ ತರಾತುರಿಯ ಪ್ರಕಟಣೆ.

(ಮುಂದಿನ ಸಂಚಿಕೆಯಲ್ಲಿ.... ಅಸ್ಸಾವಶ್‌ನಲ್ಲಿ ಹತ್ಯಾಕಾಂಡಗಳು)

ಗುಲ್ಬರ್ಗಾದಲ್ಲಿ ಪ್ರಾಂತ ರೈತ ಸಂಘದ 12ನೇ ಸಮ್ಮೇಳನ

ಕರ್ನಾಟಕದಲ್ಲಿ ಮೊತ್ತ ಮೊದಲು ರೈತರ ಸಂಘಟನೆ ಮಾಡಿದ ಕೀರ್ತಿ ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಸಲ್ಲುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ದ.ಕನ್ನಡ ಜಿಲ್ಲೆ, ಉ.ಕನ್ನಡ ಜಿಲ್ಲೆಯಲ್ಲಿ ತೀವ್ರವಾದ ರೈತರ ಹೋರಾಟಗಳು ಆರಂಭವಾಗಿದ್ದವು. ನಂತರ ಕೋಲಾರ, ಬೆಂಗಳೂರು, ಹಾಸನ ಜಿಲ್ಲೆಗಳಲ್ಲಿ ಜೋಡಿದಾರ ಪದ್ಧತಿ ವಿರುದ್ಧ ಚಳುವಳಿ ಸಂಘಟಿಸಲಾಗಿತ್ತು. ಇವೆಲ್ಲವನ್ನು ಒಗ್ಗೂಡಿಸಿ 1957 ರಲ್ಲಿ ಮಂಗಳೂರಿನಲ್ಲಿ ನಡೆದ ಪ್ರಥಮ ರೈತ ಸಮ್ಮೇಳನದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘವನ್ನು ಸ್ಥಾಪಿಸಲಾಯಿತು. ಈ ಚರಿತ್ರಾರ್ಹ ಸಂಘಟನೆಯ 12ನೇ ಸಮ್ಮೇಳನ ಗುಲ್ಬರ್ಗಾದಲ್ಲಿ ಸೆಪ್ಟೆಂಬರ್ 18 ರಂದು ಆರಂಭವಾಗಿ 20 ರವರೆಗೆ ನಡೆಯುತ್ತಿದೆ.

ಕರ್ನಾಟಕ ರೈತರನ್ನು ನಾಶಮಾಡುತ್ತಿರುವ ಬೆಳೆಗಳ ಆಮದು(ಟನ್‌ಗಳಲ್ಲಿ)

	98-99	99-2000
ಗೋಧಿ	18,03,700	6,90,400
ಬೇಳೆ	5, 63,602	2,03,986
ಎಣ್ಣೆ	26,21,851	41,96,000
ಹಾಲು-ಬೆಣ್ಣೆ	1,886	17,753
ಸಕ್ಕರೆ	9,00,471	11,14, 940

ಭಾರತದ ರಾಜಕೀಯ ರಂಗದ ಕ್ರೂರ ತಮಾಷೆಗಳು

"ಕಾಕಿ ಚಡ್ಡಿಯೊಳಗೆ ನುಗ್ಗಿದ ಸಮಾಜವಾದಿ" ಎಂದು ಅಮೂಲ್ಯ ಗಂಗೂಲಿಯವರು ಕರೆದಿರುವ ಜಾರ್ಜ್ ಫರ್ನಾಂಡೀಸ್, ಪರಿಸರದ ಹಾಗೂ ಪ್ರಾಣಿಗಳ ಬಗ್ಗೆ ಬಹಳ ಕಾಳಜಿ ತೋರಿಸುವ ಆದರೆ ಮಾನವರ ಕಗ್ಗೊಲೆಗಳ ಬಗ್ಗೆ ಮೌನದಿಂದಿರುವ ಮೇನಕಾ ಗಾಂಧಿ, ಮುಂತಾದವರು ಭಾರತದ ರಾಜಕೀಯದ ವೈಚಿತ್ರ್ಯಗಳು.

ಪ್ರಜಾಪ್ರಭುತ್ವದ ಬಗ್ಗೆ ಬಹಳ ಮಾತನಾಡುವ ಆದರೆ ಸಂಘ ಪರಿವಾರದ ಆಡಳಿತಕ್ಕೆ ಒಪ್ಪಿ ಸಹಿ ಮಾಡುವ ಕರುಣಾನಿಧಿ ಹಾಗೂ ಚಂದ್ರಬಾಬು ನಾಯ್ಡು ಇವರು ಸಹ ಭಾರತದ ರಾಜಕೀಯ ವೈಚಿತ್ರ್ಯದ ಇನ್ನೊಂದು ಮುಖ. ಈ ವರ್ಷದ ದೊಡ್ಡ ತಮಾಷೆಯೆಂದರೆ ಬಿಜೆಪಿ ನಾಯಕತ್ವದಲ್ಲಿ ತುರ್ತುಪರಿಸ್ಥಿತಿಯ ಬೆಳ್ಳಿ ಹಬ್ಬ ಆಚರಣೆಯ ತೀರ್ಮಾನ. ಪ್ರಜಾಪ್ರಭುತ್ವವನ್ನು ಕೊಲೆಗೈದ ದಿನಗಳಾಗಿದ್ದವು ತುರ್ತುಪರಿಸ್ಥಿತಿಯ ಕಾಲ. ಬಿಜೆಪಿಯ ಘೋಷಣೆ "ತುರ್ತು ಪರಿಸ್ಥಿತಿಯ ಕಾಲ ನೆನಸಿಕೊಳ್ಳಿ, ಪ್ರಜಾಪ್ರಭುತ್ವ ಬಲಪಡಿಸಿ" ಇದನ್ನೊಂದು ವಾರಾಚರಣೆಯಾಗಿ ಮಾಡಬೇಕೆಂದು ಬಿಜೆಪಿ ತೀರ್ಮಾನಿಸಿತ್ತು. ಇದರ ಮುಖ್ಯ ಘೋಷಣೆಯಲ್ಲೇ ಅನೇಕ ಸಣ್ಣತನಗಳನ್ನು ಅವರು ತೋರಿಸಿದ್ದಾರೆ. ಕೇಂದ್ರ ಗೃಹ ಸಚಿವರಾದ ಎಲ್.ಕೆ.ಅಡ್ವಾಣಿ ತುರ್ತು ಪರಿಸ್ಥಿತಿ ಸಂದರ್ಭದಲ್ಲೇ ಬೆಂಗಳೂರಿನ ಸೆಂಟ್ರಲ್ ಜೈಲ್‌ನಲ್ಲಿದ್ದರು. ಆ ದಿನಗಳ ನೆನಪಿಗಾಗಿ ಅಡ್ವಾಣಿಯವರು ಬೆಂಗಳೂರು ಸೆಂಟ್ರಲ್ ಜೈಲಿಗೆ ಭೇಟಿ ಕೊಡುತ್ತಾರೆ ಎಂದು ಬಿಜೆಪಿ ವಕ್ತಾರ ವೆಂಕಯ್ಯನಾಯ್ಡು ಹೇಳಿಕೆ ಕೊಟ್ಟಿದ್ದರು. ಆದರೆ ಆರ್.ಎಸ್.ಎಸ್. ನ ಹಳೆಯ ಚರಿತ್ರೆ ಗೊತ್ತಿರುವವರಿಗೆ ಎಲ್.ಕೆ.ಅಡ್ವಾಣಿಯ ಜೈಲು ದರ್ಶನ ತಮಾಷೆಯಾಗಿ ಕಾಣುತ್ತದೆ. ತುರ್ತು ಪರಿಸ್ಥಿತಿಯ ಕರಾಳ ದಿನಗಳಿಗೆದುರಾಗಿ ಆರ್.ಎಸ್.ಎಸ್. ಚಳುವಳಿಗೆ, ಆರ್.ಎಸ್.ಎಸ್. ಪ್ರಮುಖರೇ ವಂಚನೆ ಮಾಡಿರುತ್ತಾರೆ ಎಂದು ಸುಬ್ರಮಣ್ಯ ಸ್ವಾಮಿ ಬರೆದಂತಹ 'ಎಮರ್ಜೆನ್ಸಿ ಓದದಿರುವ ಪಾಠ' ಎಂಬ ಪುಸ್ತಕದಲ್ಲೇ ಬರೆಯಲಾಗಿದೆ. ಕಾವಿ ಪಡೆಯ ಹಲವಾರು ವಂಚನೆ, ಕಪಟತನದ ಬಗ್ಗೆ ಈ ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ.

ಯರವಾಡ ಜೈಲಿನಲ್ಲಿದ್ದ ಅಂದಿನ ಆರ್.ಎಸ್.ಎಸ್. ಮುಖ್ಯಸ್ಥ ಇಂದಿರಾಗಾಂಧಿಯವರಿಗೆ ಕಳುಹಿಸಿಕೊಟ್ಟ ಕ್ಷಮಾಪಣೆ ಕೋರಿಕೆ ಪತ್ರ ಆ ಕಾಲದಲ್ಲೇ ಕುಪ್ರಸಿದ್ಧವಾಯಿತು. ತುರ್ತುಪರಿಸ್ಥಿತಿ ವಿರುದ್ಧ ಚಳುವಳಿಯಿಂದ ದೂರ ನಿಲ್ಲುತ್ತೇವೆ ಎಂದು ಈ ಪತ್ರದಲ್ಲಿ ಮಾತು ಕೊಡಲಾಗಿತ್ತು. ಅಂದಿನ ಇಂದಿರಾಗಾಂಧಿಯವರ 20 ಅಂಶ ಕಾರ್ಯಕ್ರಮಗಳಿಗೆ ಕೆಲಸ ಮಾಡುತ್ತೇವೆ ಎಂದು ಆ ಪತ್ರದಲ್ಲಿ ಹೇಳಲಾಗಿತ್ತು. ಈ ರೀತಿಯ ಹಲವಾರು ದಾಖಲೆಗಳು ಮಹಾರಾಷ್ಟ್ರ ವಿಧಾನಸಭೆಯ ದಾಖಲೆಗಳಲ್ಲಿವೆ ಎಂದು ಸುಬ್ರಮಣ್ಯ ಸ್ವಾಮಿ ತಮ್ಮ ಪುಸ್ತಕದಲ್ಲಿ ಹೇಳಿರುತ್ತಾರೆ.

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಜನಪರ ಚಳುವಳಿಗೆ ವಂಚನೆ ಮಾಡಿದ ಏಕೈಕ ಸಂಘಟನೆಯೆಂದರೆ ಆರ್.ಎಸ್.ಎಸ್. ಇಂದಿನ ಪ್ರಧಾನಿ ಅಟಲ್‌ಬಿಹಾರಿ ವಾಜಪೇಯಿಯವರು ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲಿ ಬ್ರಿಟಿಷರ ಪರ ಸಾಕ್ಷಿ ನುಡಿದದ್ದು ಐಕ್ಯರಂಗದಲ್ಲಿ ಈ ಹಿಂದೆ ಪ್ರಕಟವಾಗಿದೆ. ಅದೇ ರೀತಿ ವಂಚನೆಯ ಬೇರೊಂದು ಮುಖವೇ ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಇಂದಿನ ಪ್ರಧಾನ ಮಂತ್ರಿ ಬರೆದಿದ್ದ ಒಂದು ಪತ್ರ 'ತುರ್ತುಪರಿಸ್ಥಿತಿಗೆ ವಿರುದ್ಧವಾದ 'ಯಾವ ಚಳುವಳಿಯಲ್ಲೂ ನಾನು ಇಲ್ಲ" ಎಂದು ಬರೆದು ಕೊಟ್ಟ ವಾಜಪೇಯಿಯವರು ಪರೋಲ್‌ನಲ್ಲಿ ಬಿಡುಗಡೆಯಾಗುವ ಸೌಲಭ್ಯ ಪಡೆದಿದ್ದರು.

ಈ ಮೋಸದ ಸೌಲಭ್ಯಗಳನ್ನು ಪಡೆಯುವುದಕ್ಕಿಂತ ಜೈಲುವಾಸವೇ ಮೇಲು ಹಾಗೂ 'ಮಾತು ಕಡಿಮೆ, ಕೆಲಸ ಹೆಚ್ಚು' ಎಂಬ ಇಂದಿರಾಗಾಂಧಿಯವರ ಘೋಷಣೆಗಿಂತ ಸಾವೇ ಮೇಲೆಂದು ಅಂದು ಜೈಲಿನಲ್ಲಿದ್ದ ಹೋರಾಟಗಾರರು ಪ್ರತಿಜ್ಞೆ ಮಾಡಿದ ದಿನಗಳಲ್ಲೇ ವಾಜಪೇಯಿ ಹಾಗೂ ಅವರ ಸಂಗಾತಿಗಳು ಸರಕಾರಕ್ಕೆ ಶರಣಾದರು. ನಾವು ಒಳ್ಳೆ ರೀತಿಯಲ್ಲೇ ನಡೆದುಕೊಳ್ಳುತ್ತೇವೆ ಎಂದು ಮುಚ್ಚಳಿಕೆ ಬರೆದುಕೊಟ್ಟು ಅಂದಿನ ಜನ ಸಂಘದ ಅನೇಕ ಮುಖಂಡರು ತುರ್ತುಪರಿಸ್ಥಿತಿಯಲ್ಲಿ ಜೈಲು ವಾಸದಿಂದ ತಪ್ಪಿಸಿಕೊಂಡರು ಎಂಬುದು ವಂಚನೆಯ ಇನ್ನೊಂದು ಮುಖ ಎಂದು ಅಕಾಲಿ ಮುಖಂಡ ಸುರ್ಜಿತ್ ಸಿಂಗ್ ಬರ್ನಾಲಾ ಅಂದು ಹೇಳಿದ್ದರು.

ಸಂಜಯ್ ಗಾಂಧಿಯವರನ್ನು ಸಂಘ ಪರಿವಾರದ ಮುಖಂಡರು ಅಂದು ಬಹಳ ಭಕ್ತಿಯಿಂದ ಕಾಣುತ್ತಿದ್ದರು. ಜೈಲಿನಿಂದ ಬಿಡುಗಡೆ ಆದ ಆರ್.ಎಸ್.ಎಸ್. ಮುಖಂಡರಹು ಸಂಜಯ್ ಗಾಂಧಿಯವರ ಕೀರ್ತಿ ಬಗ್ಗೆ ಬಹಳ

ಇ.ಕೆ.ಎನ್.ರಾಜನ್

ಹೊಗಳುತ್ತಿದ್ದರು. ದೆಹಲಿಯ ಟರ್ಕ್‌ಮ್ಯಾನ್ ಗೇಟ್‌ನಲ್ಲಿ ಬುಲ್‌ಡೋಜರ್‌ನಿಂದ ಅಲ್ಲಿಯ ಮುಸ್ಲಿಮರ ಮನೆಗಳನ್ನು ನೆಲಸಮ ಮಾಡಿದ ಇಂದಿರಾಪುತ್ರನಿಗೆ ಜನಸಂಘದ ಮುಖಂಡರು ಜೈಕಾರ ಹಾಕಿದ್ದರು. ಮುಸ್ಲಿಮರ ಮನೆಗಳನ್ನು ನೆಲಸಮ ಮಾಡಿದ ಭಾರತದ ಮೊಟ್ಟ ಮೊದಲ ನಾಯಕ ಸಂಜಯ್ ಗಾಂಧಿ ಎಂದು ಜೈಕಾರ ಹಾಕಿದ್ದರು. ಈ ಟರ್ಕ್‌ಮ್ಯಾನ್ ಗೇಟ್ ದುರಂತದ ಮುಖ್ಯ ಸೂತ್ರದಾರ ಜಗಮೋಹನ್ ಇಂದಿನ ಬಿಜೆಪಿ ಸರಕಾರದ ಮಂತ್ರಿ.

ಸಂಜಯ್ ಗಾಂಧಿಯ ಅಂದಿನ ಯೋಜನೆಗಳನ್ನು ಇಂದು ಚುರುಕುಗೊಳಿಸುವಲ್ಲಿ ಸಂಘ ಪರಿವಾರದವರು ಮುಂದಾಗಿದ್ದಾರೆ. ಪ್ರಜಾಪ್ರಭುತ್ವ ತತ್ವವನ್ನು ದುರ್ಬಲಪಡಿಸುವುದು, ಭಾರತದ ಐಕ್ಯತೆಯನ್ನು ದುರ್ಬಲಗೊಳಿಸುವುದು ಇತ್ಯಾದಿ ತಂತ್ರಗಳಿಗೆ ಕಾವಿ ಪಡೆ ಇಂದು ಮುಂದಾಗಿದೆ. ಗಾಂಧೀಜಿಯವರನ್ನು ಕೊಂದದ್ದು, ಬಾಬ್ರಿಮಸೀದಿ ಧ್ವಂಸ ಮಾಡಿದ್ದು, ಈಗ ಅಲ್ಪಸಂಖ್ಯಾತರ ವಿರುದ್ಧ ನಡೆಸುತ್ತಿರುವ ಅಕ್ರಮಗಳು ಇವರು ಬೇರೆ ಬೇರೆ ಸಂದರ್ಭಗಳಲ್ಲಿ ಅನುಸರಿಸಿರುವ ತಂತ್ರಗಳಾಗಿವೆ.

ಫ್ಯಾಸಿಸ್ಟ್ ಕೇಂದ್ರ ಸಂಘಟನೆಯಾದ ಆರ್.ಎಸ್.ಎಸ್., ಭಜರಂಗದಳ, ಬಿಜೆಪಿ ಒಕ್ಕೂಟಗಳು ಹೊಸದಾದ ಒಂದು ವಿಷಯವನ್ನು ರಾಷ್ಟ್ರದ ಮುಂದಿಟ್ಟಿರುತ್ತಾರೆ. ಭಾರತದ ಸಂವಿಧಾನ ತಿದ್ದುಪಡಿ ಅವರ ನಿಜವಾದ ಉದ್ದೇಶವಲ್ಲ. ಬದಲಾಗಿ ಸಂವಿಧಾನಕ್ಕೆ ಸಂಪೂರ್ಣ ಬದಲಾವಣೆ ತರಲು ಅವರು ಹೊರಟಿರುತ್ತಾರೆ. ಈ ಕೇಸರಿ ಪಡೆಯ ಮುಖ್ಯ ಗುರಿ ವಿದ್ಯಾಭ್ಯಾಸ, ಸೈನ್ಯ, ಪೋಲೀಸ್, ಆಡಳಿತ ಮುಂತಾದ ರಂಗಗಳನ್ನು ಕೇಸರೀಕರಣ ಗೊಳಿಸುವುದು, ಭಾರತದ ಚರಿತ್ರೆಯನ್ನೇ ಬದಲಾಯಿಸುವ ಕಾರ್ಯಕ್ರಮಕ್ಕೆ ಇವರು ಹೊರಟಿರುವುದನ್ನು ನಾವು ಕಾಣಬಹುದು.

ಸಂವಿಧಾನದಲ್ಲಿ ನ್ಯಾಯಾಂಗ ವ್ಯವಸ್ಥೆಯ ಮಧ್ಯಪ್ರವೇಶ ತುರ್ತುಪರಿಸ್ಥಿತಿ ಬರಲು ಕಾರಣವಾಯಿತು. ಇಂದು ಅಂದಿಗಿಂತ ಕಠಿಣವಾದ ರೀತಿಯಲ್ಲಿ ಸಂಘ ಪರಿವಾರ ಮುಂದುವರೆಯುತ್ತಿದೆ ಎಂದು ಹಿಂದೂ ಪತ್ರಿಕೆಯಲ್ಲಿ ಹರಿಶ್ ಗಾರೆಯವರ ಒಂದು ಲೇಖನ ಪ್ರಕಟವಾಗಿದೆ. ಈ ಲೇಖನದಲ್ಲಿ ಬಹುಸಂಖ್ಯಾತ ಹಿಂದೂ ಮತೀಯವಾದವನ್ನು ಸಂಘ ಪರಿವಾರದವರು ಎತ್ತಿ ಹಿಡಿಯುತ್ತಿದ್ದಾರೆ ಎಂದು ಬರೆಯಲಾಗಿದೆ.

ಪೋರ್ಚುಗೀಸ್ ಸರ್ವಾಧಿಕಾರಿಯಾದ ಸಾಲಾಸಾರ್ ಬಗ್ಗೆ ಸಂಜಯ್ ಗಾಂಧಿ ಆ ಕಾಲದಲ್ಲೇ ಕೆಲವು ಪ್ರಶ್ನೆಗಳನ್ನು ಕೇಳಿದ್ದಾಗಿ ಉಮಾ ವಾಸುದೇವ್ "ಇಂದಿರಾಗಾಂಧಿಯ ಎರಡು ಮುಖಗಳು" ಎಂಬ ಕೃತಿಯಲ್ಲಿ ಹೇಳಿರುತ್ತಾರೆ. ರಾಷ್ಟ್ರದ ಸಂವಿಧಾನವನ್ನೇ ಬದಲು ಮಾಡಿದ ಪೋರ್ಚುಗೀಸ್ ಸರ್ವಾಧಿಕಾರಿ ಹೇಗೆ ಬಹುಕಾಲ ಆಡಳಿತ ಮಾಡಿದ ಎಂದು ತಿಳಿಯಲು ಸಂಜಯಗಾಂಧಿ ಆಶಿಸಿದ್ದರು. ಅದೇ ರೀತಿ ಹಿಟ್ಲರ್ ಹಾಗೂ ಮುಸಲೋನಿ ಬಗ್ಗೆ ಬಹಳ ಹೆಮ್ಮೆಯಿಂದ ಮಾತನಾಡುವವರು ಸಂಘ ಪರಿವಾರದ ಮುಖಂಡರು ಈ ರೀತಿ ಸರ್ವಾಧಿಕಾರ ನಾಯಕತ್ವ ನೀಡಲು, ಕಾತುರರಾಗಿದ್ದಾರೆ. ಸಂಜಯ ಗಾಂಧಿಯ ಸರ್ವಾಧಿಕಾರ ಪ್ರವೃತ್ತಿಯನ್ನು ಇಂದು ಅಡ್ವಾಣಿಯವರು ಮುಂದುವರೆಸುತ್ತಿದ್ದಾರೆ ಎಂದು ಈ ಲೇಖನದಲ್ಲಿ ಕಾಣಿಸಲಾಗಿದೆ. 1992 ರ ಡಿಸೆಂಬರ್ 6 ರಂದು ನಡೆದ ದೇಶಿಯ ದುರಂತಕ್ಕೆ ಅಡ್ವಾಣಿಯವರು ಕಾರಣರಾಗಿದ್ದು ಇವರನ್ನು ಸಂಜಯ ಗಾಂಧಿಯವರ ಪರಂಪರೆಗೆ ಸೇರಿಸಬಹುದು.

ಚುನಾವಣಾ ಆಯೋಗಕ್ಕೆ ಕಾಂ॥ ಸುರ್ಜಿತ್ ಪತ್ರ



ಮಾನ್ಯರೆ, ಕೇರಳ ಹೈಕೋರ್ಟಿನ ನಿರ್ದೇಶನದನುಸಾರವಾಗಿ ನೀವು ನಮಗೆ ದಿನಾಂಕ 29 ಜೂನ್ 2000 ದಂದು ಕಳುಹಿಸಿದ ನೋಟಿಸು ತಲುಪಿದೆ. ಕೊಚ್ಚಿಯ ಸಮಾಜಸೇವಾ ಸಂಘಟನೆಯೊಂದು ನಮ್ಮ ಪಕ್ಷವು ಆಚರಿಸಿದ ಹರ್ತಾಳ ಕುರಿತಂತೆ ನೀಡಿದ ದೂರಿನ ಆಧಾರದಲ್ಲಿ ನಮ್ಮ ಪಕ್ಷಕ್ಕೆ ಚುನಾವಣಾ ಆಯೋಗವು ಸೂಚನೆ ಕಳಿಸಿದ್ದರ ಹಿನ್ನೆಲೆಯಲ್ಲಿ ಈ ಕೆಳಗಂಡ ಅಂಶಗಳನ್ನು ಪಕ್ಷದ ಪರವಾಗಿ ಚುನಾವಣಾ ಆಯೋಗದ ಗಮನಕ್ಕೆ ತರಲಾಗುತ್ತಿದೆ.

1. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟಿಸುವ ಹಕ್ಕು ಅದೊಂದು ಮೂಲಭೂತ ಹಕ್ಕಾಗಿದೆ. ಸಂಸದೀಯ ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳು ಸ್ವಾಭಾವಿಕವಾಗಿಯೇ ಪ್ರತಿಭಟನೆಗಳನ್ನು ಸಂಘಟಿಸುವ ಹಕ್ಕನ್ನು ಹೊಂದಿವೆ. ಭಾರತದ ಸಂವಿಧಾನದ ಅನುಚ್ಛೇದ 19(1) (ಸಿ) ಯ ಅಡಿಯಲ್ಲಿ ಸಂಘ ಸಂಸ್ಥೆಗಳನ್ನು ರಚಿಸುವ ಹಕ್ಕನ್ನು ನೀಡಲಾಗಿದೆ. ಅಲ್ಲದೆ ಯಾವುದೇ ರಾಜಕೀಯ ಪಕ್ಷಗಳು ಅಥವಾ ಸಂಸ್ಥೆಗಳು ಸರ್ಕಾರದ ನೀತಿಗಳ ವಿರುದ್ಧ ಪ್ರತಿಭಟಿಸುವ ಮತ್ತು ಜನಾಭಿಪ್ರಾಯವನ್ನು ರೂಪಿಸುವ ಹಕ್ಕುಗಳನ್ನು ಹೊಂದಿವೆ. ಈ ಹಕ್ಕುಗಳನ್ನು ರದ್ದು ಮಾಡುವುದೆಂದರೆ ಪ್ರಜಾಪ್ರಭುತ್ವದ ರಾಜಕೀಯ ವ್ಯವಸ್ಥೆಯನ್ನೇ ಉದ್ವಿಗ್ನಗೊಳಿಸಿದಂತಾಗುತ್ತದೆ.

2. ಕೇಂದ್ರ ಸರ್ಕಾರವು ಸಂವಿಧಾನದ 356ನೇ ಅನುಚ್ಛೇದವನ್ನು ಬಳಸಿ ಬಿಹಾರದ ಚುನಾಯಿತ ರಾಜ್ಯ ಸರ್ಕಾರವನ್ನು ವಜಾಗೊಳಿಸಿದ್ದರ ವಿರುದ್ಧ ಕೇರಳದ ಸಿಪಿಐ(ಎಂ) ರಾಜ್ಯ ಸಮಿತಿಯು 1998 ಸೆಪ್ಟೆಂಬರ್-25 ರಂದು ರಾಜ್ಯಾದ್ಯಂತ ಮುಷ್ಕರಕ್ಕೆ ಕರೆ ನೀಡಿತ್ತು. ಹಿಂಸೆಗೆ ಪ್ರಚೋದಿಸುವ ಅಥವಾ ಪ್ರಯತ್ನಿಸುವ ಯಾವುದೇ ಉದ್ದೇಶ ಈ ಕರೆ ನೀಡಿದ್ದ ಸಿಪಿಐ(ಎಂ) ಪಕ್ಷಕ್ಕೆ ಇರಲಿಲ್ಲ. ಅಲ್ಲದೆ, ಸಿಪಿಐ(ಎಂ) ಪಕ್ಷವು ಮುಷ್ಕರಕ್ಕೆ ಕರೆ ನೀಡುವ ಹಕ್ಕನ್ನು ಕಾಪಾಡಲು ಮತ್ತು ಅದನ್ನು ಮುಂದುವರೆಸಲು ಬಯಸುತ್ತದೆ. ಯಾವುದೇ ಪಕ್ಷ ಹರತಾಳಕ್ಕೆ ಕರೆ ನೀಡುವುದೆಂದರೆ ಜನರೆ ಸ್ವಯಂ ಪ್ರೇರಿತರಾಗಿ ಕೆಲಸಗಳಿಗೆ ಹೋಗುವುದನ್ನು ನಿಲ್ಲಿಸಿ, ತಮ್ಮೆಲ್ಲ ಚಟುವಟಿಕೆಗಳನ್ನು ಬದಿಗಿರಿಸಿ ಈ ಮುಷ್ಕರವನ್ನು ಬೆಂಬಲಿಸಬೇಕೆಂಬುದು. ಈ ರೀತಿಯ ಪ್ರತಿಭಟನೆಯನ್ನು ಯಾವುದೇ ಬಲವಂತ ಹಿಂಸೆಯ ಅಥವಾ ಅದಕ್ಕೆ ಪ್ರರೇಪಿಸುವ ಆಧಾರದ ಮೇಲೆ ಸಂಘಟಿಸಲಾಗುವುದಿಲ್ಲ.

3. ಮುಷ್ಕರವನ್ನು ಕಾನೂನು ಬಾಹಿರವೆಂದು ಘೋಷಿಸಿರುವ ಕೇರಳ ಹೈಕೋರ್ಟಿನ ತೀರ್ಪು ಹಲವಾರು ದೋಷಗಳಿಂದ ಕೂಡಿದೆ.

1. ಹರತಾಳ ಎನ್ನುವುದು ಒಂದು ಪ್ರತಿಭಟನಾ ಕ್ರಿಯೆ. ಆದರೆ ನ್ಯಾಯಾಲಯವು ಹರತಾಳ ಮತ್ತು ಅದರ ಆಚರಣೆಯ ಸಂಧರ್ಭದಲ್ಲುಂಟಾಗುವ ಉದ್ದೇಶ ಪೂರ್ವಕ ಹಿಂಸೆ ಮತ್ತು ಕೃತ್ಯ ಕುರಿತಂತೆ ಇರುವ ಅಂತರವನ್ನು ಗುರ್ತಿಸಿಲ್ಲ.

2.ಹರತಾಳವು ಒತ್ತಾಯಪೂರ್ವಕವಾಗಿರುವುದರಿಂದ ಅದಕ್ಕೆ ಅವಕಾಶ ನೀಡಬಾರದೆಂದು ನಿರ್ದೇಶಿಸಿ, ಹರತಾಳವನ್ನೇ ಕಾನೂನುಬಾಹಿರ ಹಾಗೂ ಅಸಂವಿಧಾನಿಕವೆಂದು ಸಾರಸಗಟಾಗಿ ಘೋಷಿಸಿದೆ.

3.ಹರತಾಳ ಆಚರಣೆಯ ಸಂದರ್ಭದ ಲ್ಲುಂಟಾಗುವ ಉದ್ದೇಶಪೂರ್ವಕವಾದ ಕೃತ್ಯಗಳು ಅಥವಾ ಹಿಂಸೆಯನ್ನು ತಡೆಗಟ್ಟಲು ಕಾನೂನಿಗೆ ಅವಕಾಶವಿದೆ. ಅಲ್ಲದೆ ಅಂತಹ ಕೃತ್ಯಗಳಲ್ಲಿ ತೊಡಗಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಸಂಬಂಧಿಸಿದ ಆಡಳಿತ, ನಿರ್ದೇಶನವನ್ನು ನೀಡಬಹುದು.

4. ಬಲಾತ್ಕಾರವಾಗಿ "ಮುಷ್ಕರವನ್ನಾಚರಿಸುವ' ರಾಜಕೀಯ ಪಕ್ಷಗಳ ವಿರುದ್ಧ ದೂರುಗಳು ಬಂದಾಗ ಕಾನೂನು ಕ್ರಮ ಕೈಗೊಳ್ಳಲು ಚುನಾವಣಾ ಆಯೋಗಕ್ಕೆ ಹೈಕೋರ್ಟು ತನ್ನ ತೀರ್ಪಿನಲ್ಲಿ ನಿರ್ದೇಶಿಸಿದೆ. ಅಂದರೆ ಚುನಾವಣಾ ಆಯೋಗಕ್ಕೆ ನ್ಯಾಯಾಲಯವು ರಾಜಕೀಯ ಪಕ್ಷಗಳ ಮೇಲೆ ಪೋಲೀಸರಂತೆ ಉಸ್ತುವಾರಿ ಮಾಡುವ ಜವಬ್ದಾರಿಯನ್ನು ವಹಿಸಿದೆ. "ಚುನಾವಣಾ ಆಯೋಗದಡಿಯಲ್ಲಿ ನೋಂದಾವಣೆಗೊಂಡ ಯಾವುದೇ ಪಕ್ಷ ಅಥವಾ ಸಂಘಟನೆಗಳು ಅಥವಾ ಅದರ ಸದಸ್ಯರು, ಸಾಮಾನ್ಯ ಪ್ರಜೆಗಳನ್ನು ಒತ್ತೆಯಾಳಾಗಿಸುವಂತಹ ಕ್ರಮಗಳನ್ನು ಕೈಗೊಂಡರೆ, ಮತ್ತು ಸರ್ಕಾರಗಳು ಪ್ರಜೆಗಳ ಹಕ್ಕಿನ ಉಲ್ಲಂಘನೆಯ ಬಗ್ಗೆ ಮೂಕ ಪ್ರೇಕ್ಷಕನಂತೆ ಕುಳಿತು ಕೊಂಡರೆ ಚುನಾವಣಾ ಆಯೋಗ ಕ್ರಿಯಾಶೀಲ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ತಡೆಗಟ್ಟಬಹುದು. ಹೀಗೆ ಒಂದು ಕ್ರಿಯಾಶೀಲ ಚುನಾವಣಾ ಆಯೋಗವು, ಮನಸ್ಸಿಗೆ ಬಂದಂತೆ ಹರತಾಳಗಳಿಗೆ ಕರೆ ನೀಡಿ ಬೆದರಿಕೆ ಹಾಗೂ ಬಲತ್ಕಾರದ ಮೂಲಕ ಅದನ್ನು ಆಚರಿಸುವುದನ್ನು ತಡೆಗಟ್ಟಬಹುದು" ಎಂದು ಕೇರಳ ಹೈಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ. ಆದರೆ ಸಂವಿಧಾನವು ಚುನಾವಣಾ ಆಯೋಗಕ್ಕೆ ಇಂತಹ ಕೆಲಸವನ್ನು ಮಾಡುವ ಯಾವುದೇ ಅಧಿಕಾರವನ್ನು ನೀಡಿಲ್ಲ.

5. 1951 ರ ಜನತಾ ಪ್ರಾತಿನಿಧ್ಯ ಕಾಯ್ದೆ ಸೆಕ್ಷನ್ 29 ಎ (5) ಪ್ರಕಾರ ಚುನಾವಣಾ ಆಯೋಗಕ್ಕೆ ರಾಜಕೀಯ ಪಕ್ಷಗಳನ್ನು ನೊಂದಾಯಿಸಿ ಕೊಳ್ಳುವ ಹಕ್ಕನ್ನು ನೀಡಲಾಗಿದೆ. ಆ ಕಾಯ್ದೆಯಲ್ಲಿ ಸೇರ್ಪಡೆ ಕುರಿತಂತೆ ಹೀಗೆ ಹೇಳಲಾಗಿದೆ. ಅದರ ಪ್ರಕಾರ ಯಾವುದೇ ಸಂಘ ಅಥವಾ ಸಮಿತಿಯು ಭಾರತ ಸಂವಿಧಾನದಲ್ಲಿ ತನ್ನ ನಿಷ್ಠೆಯನ್ನು ಹೊಂದಿರಬೇಕಾಗುತ್ತದೆ. ಮತ್ತು ಭಾರತದ ಸಂವಿಧಾನದ ಮೂಲ ತತ್ವಗಳಾದ ಸಮಾಜವಾದ ಧರ್ಮ ನಿರಪೇಕ್ಷತೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳನ್ನು ಹಾಗೂ ಸಾರ್ವಭೌಮತೆ ಐಕ್ಯತೆ ಮತ್ತು ಸಮಗ್ರತೆಯನ್ನು ಎತ್ತಿಹಿಡಿಯಲು ಬದ್ಧವಾಗಿರಬೇಕು.

ಜನತಾ ಪ್ರಾತಿನಿಧ್ಯ ಕಾಯ್ದೆಯ ಈ ಕಲಂ ಪ್ರಕಾರವಾಗಿ ಈಗ ಕೇರಳ ಉಚ್ಛ ನ್ಯಾಯಾಲಯವು ಹರತಾಳ ನಡೆಸಿದ ರಾಜಕೀಯ ಪಕ್ಷದ ವಿರುದ್ಧ ಸಲ್ಲಿಸಿರುವ ಅರ್ಜಿಯನ್ನು ವಿಲೇವಾರಿ ಮಾಡಿ ಎಂದು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿದೆ. ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 29 (ಎ) (5), ಚುನಾವಣಾ ಆಯೋಗಕ್ಕೆ ರಾಜಕೀಯ ಪಕ್ಷಗಳ ಮಾನ್ಯತೆಯನ್ನು ರದ್ದು ಮಾಡುವ ಅಧಿಕಾರವನ್ನು ನೀಡುವುದಿಲ್ಲ ಎಂಬುದು ಸಿಪಿಐ(ಎಂ) ಪಕ್ಷದ ದೃಢ ಅಭಿಪ್ರಾಯ. ಅಲ್ಲದೆ ರಾಜಕೀಯ ಪಕ್ಷಗಳ ಕುರಿತು ವಿಚಾರಣೆ ನಡೆಸಿ ಅವುಗಳನ್ನು ಅಮಾನ್ಯಗೊಳಿಸುವ ಯಾವುದೇ ವ್ಯಾಪ್ತಿಯನ್ನು ಚುನಾವಣಾ ಆಯೋಗವು ಹೊಂದಿಲ್ಲ.

6. ಯಾವುದೇ ರಾಜಕೀಯ ಪಕ್ಷಗಳ ಮಾನ್ಯತೆಯನ್ನು ರದ್ದುಗೊಳಿಸುವ ಅವಕಾಶ ಕಾನೂನಿನಲ್ಲಿ ಇಲ್ಲ ಎಂದು ಚುನಾವಣಾ ಆಯೋಗವು ಕೇರಳ ಉಚ್ಛ ನ್ಯಾಯಾಲಯದ ಮುಂದೆ ಮಂಡಿಸಿರುವುದನ್ನು ಸಿಪಿಐ(ಎಂ) ಪಕ್ಷ ಗಮನಿಸಿದೆ. ಯಾವುದೇ ಪಕ್ಷ ಮಾನ್ಯತೆಯನ್ನು ರದ್ದುಗೊಳಿಸುವ ದೆಂದರೆ ಆ ಪಕ್ಷದ ಮೇಲೆ ನಿಷೇಧವನ್ನು ಹೇರಿ ಚುನಾವಣೆಗಳಲ್ಲಿ ಸ್ಪರ್ಧಿಸಲಾಗದಂತೆ ಮಾಡುವುದು ಎಂದರ್ಥ. ಅಂತಹ ಕರಾಳ ಕ್ರಮವೊಂದನ್ನು ಚುನಾವಣಾ ಆಯೋಗ ಯೋಚಿಸುವುದಕ್ಕೂ ಸಾಧ್ಯವಿಲ್ಲ. ಆದ್ದರಿಂದ ಕೊಚ್ಚಿಯ ಸ್ವಯಂ ಸೇವಾ ಸಂಸ್ಥೆಯಂತಹವರು ಸಲ್ಲಿಸುವ ಅರ್ಜಿಯನ್ನು ಪರಿಶೀಲಿಸಲು ಮತ್ತು ಕ್ರಮ ತೆಗೆದುಕೊಳ್ಳುವುದು ಚುನಾವಣಾ ಆಯೋಗದ ವ್ಯಾಪ್ತಿಗೆ ಹೊರತಾದುದು ಎಂದು ಚುನಾವಣಾ ಆಯೋಗವು ಈಗಾಗಲೇ ತಳೆದಿರುವ ನಿಲುವನ್ನು ಪುನರುಚ್ಚರಿಸಬೇಕು ಎಂದು ನಮ್ಮ ವಿನಂತಿ.

7. ಅಲ್ಲದೆ ಕೇರಳ ಹೈಕೋರ್ಟಿನ ಈ ತೀರ್ಪು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಕೆಲಸ ಮಾಡುತ್ತಿರುವ ರಾಜಕೀಯ ಪಕ್ಷಗಳ ಆಧಾರವನ್ನೇ ಪ್ರಶ್ನಿಸುವಂತಹ ಪ್ರಾಮುಖ್ಯತೆಯನ್ನು ಪಡೆದಿರುವುದರಿಂದ ಸಿಪಿಐ(ಎಂ) ಪಕ್ಷವು ಈ ತೀರ್ಪನ್ನು ಪ್ರಶ್ನಿಸಿ ಸರ್ವೋಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ನಿರ್ಧರಿಸಿದೆ.

ಕನ್ನಡಕ್ಕೆ: ಕೆ.ಮಹಾಂತೇಶ್

ಸಾಮ್ರಾಜ್ಯಶಾಹಿ ಪಾದರವಿಂದಗಳಲ್ಲಿ

ಅಮೆರಿಕಾದಲ್ಲಿ ವಾಜಪೇಯಿ

ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರು ಅನಾರೋಗ್ಯದಿಂದ ಬಳಲುತ್ತಿದ್ದರೂ, ಅಮೇರಿಕದ ಹಿತಾಸಕ್ತಿ ಕಾಪಾಡಲು ಮತ್ತು ಸಾಮ್ರಾಜ್ಯಶಾಹಿಗೆ ತನ್ನ ಬದ್ಧತೆಯನ್ನು ಪ್ರದರ್ಶಿಸಲು ಅಮೇರಿಕಾಕ್ಕೆ ಭೇಟಿ ನೀಡುತ್ತಿದ್ದಾರೆ. ಇನ್ನು ಕೆಲವೇ ತಿಂಗಳುಗಳಲ್ಲಿ ಅಮೇರಿಕಾದಲ್ಲಿ ಚುನಾವಣೆ ನಡೆದು ಅಧ್ಯಕ್ಷ ಬಿಲ್ ಕ್ಲಿಂಟನ್‌ರವರು ನಿರುಪಯುಕ್ತ ವಸ್ತುವಾಗುವ ಬಗ್ಗೆ ಗೊತ್ತಿದ್ದರೂ ವಾಜಪೇಯಿ ಸರ್ಕಾರಕ್ಕೆ ಬಗ್ಗೆ ಗಮನವೇ ಇದ್ದಂತಿಲ್ಲ.



ವಾಜಪೇಯಿಯವರು ಅಮೇರಿಕಕ್ಕೆ ಹೊರಡುವ ಒಂದು ಗಂಟೆ ಮೊದಲು, ಭಾರತದ ದೂರಸಂಪರ್ಕ ಜಾಲವನ್ನು ಬಹುರಾಷ್ಟ್ರೀಯ ವಿದೇಶಿ ಕಂಪನಿಗಳಿಗೆ ಮುಕ್ತವಾಗಿಸುವ ಅವಕಾಶವನ್ನು ಪ್ರಕಟಿಸಿ ಅಮೇರಿಕದ ದೊರೆಗಳ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಇದಕ್ಕೂ ಮೊದಲೇ ದೂರಸಂಪರ್ಕವನ್ನು ದೇಶಿಯ ಮತ್ತು ವಿದೇಶಿಯ ಖಾಸಗೀ ಕಂಪನಿಗಳಿಗೆ ವಹಿಸುವ ನಿರ್ಧಾರವನ್ನು ಕೈಗೊಂಡಿತ್ತು. ಇದರಿಂದ ಸ್ಪಷ್ಟಗೊಳ್ಳುತ್ತಿರುವುದೇನೆಂದರೆ ಭಾರತದ ಹಿತಾಸಕ್ತಿಯನ್ನು ಕಡೆಗಣಿಸಿ ಅಮೇರಿಕ ಖಾಸಗೀ ದೂರಸಂಪರ್ಕ ಉದ್ದಿಮೆಗಳಿಗೆ ಭಾರೀ ಲಾಭವನ್ನು ಗಿಟ್ಟಿಸಲು ಅವಕಾಶ ನೀಡಿರುವುದು. ಮತ್ತು ಇದರಿಂದ ಭಾರತದ ಬಹುಸಂಖ್ಯಾತ ಜನವಿಭಾಗ ಇದುವರೆಗೂ ದೂರಸಂಪರ್ಕ ಇಲಾಖೆಯಿಂದ ಪಡೆಯುತ್ತಿದ್ದ ರಿಯಾಯತಿಗಳನ್ನು ಕಡಿತಗೊಳಿಸಲು ನಿರ್ಧಾರ ಮಾಡಿದೆ. ವಿಶ್ವ ವಾಣಿಜ್ಯ ಸಂಘಟನೆಯ ಒಪ್ಪಂದದ ಪ್ರಕಾರ ಭಾರತವು ದೂರ ಸಂಪರ್ಕವನ್ನು 2004ನೇ ಇಸ್ವಿಗೆ ವಿದೇಶಿ ಕಂಪನಿಗಳು ಬಂಡವಾಳ ಹೂಡಲು ಮುಕ್ತಗೊಳಿಸಬೇಕಿತ್ತು. ಆದರೆ ವಾಜಪೇಯಿ ಸರ್ಕಾರವು ಸಾಮ್ರಾಜ್ಯಶಾಹಿ ಒತ್ತಡಕ್ಕೆ ಮಣಿದು ಮತ್ತು ಅಮೇರಿಕವನ್ನು ಸಂತುಷ್ಟಗೊಳಿಸಲು ಈ ರೀತಿ ಅವಧಿಗೆ ಮೊದಲೇ ಮುಕ್ತಗೊಳಿಸಲು ಮುಂದಾಗಿದೆ. ಕಳೆದ 2 ವರ್ಷಗಳಿಂದಲೂ ಅಮೇರಿಕಾ ತೀವ್ರ ಒತ್ತಡ ಹೇರುತ್ತಿರುವುದರ ಫಲವಾಗಿ 429 ಕೃಷಿ ಉತ್ಪನ್ನ ವಸ್ತುಗಳನ್ನು ವಿದೇಶದಿಂದ ಮುಕ್ತವಾಗಿ ತರಿಸುವ ಆಮದು ನೀತಿಯನ್ನು ಜಾರಿಗೊಳಿಸಿದ್ದರ ಪರಿಣಾಮವಾಗಿ ಕೃಷಿ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿದ್ದ ಲಕ್ಷಾಂತರ ಜನರು ತೀವ್ರ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಲ್ಲದೆ ಒಂದೇ ತಿಂಗಳಲ್ಲಿ ಕೃಷಿ ಮತ್ತು ಕೈಗಾರಿಕ ಉತ್ಪನ್ನಗಳ ಪ್ರಮಾಣಾತ್ಮಕ ನಿರ್ಬಂಧಗಳನ್ನು ತೆಗೆದು ಹಾಕಿ ಕೃಷಿ ರಂಗವನ್ನೇ ದಿವಾಳಿಗೊಳಿಸುತ್ತಿವೆ. ಪರಿಣಾಮವಾಗಿ ಚಹಾ ಬೆಲೆಯಲ್ಲಿ ತೀವ್ರ ಕುಸಿತ ಕಂಡು ಬಂದಿದ್ದರಿಂದ ಕಾರ್ಮಿಕರು ಮತ್ತು ಮಾಲಿಕರು ಜೊತೆಯಾಗಿ ಸರ್ಕಾರದ ನೀತಿಯ ವಿರುದ್ಧ ಪ್ರತಿಭಟನೆ ಹಾದಿ ಹಿಡಿದಿದ್ದಾರೆ.

ಅಲ್ಲದೆ 1999 ರಲ್ಲಿ ಚುನಾವಣಾ ಫಲಿತಾಂಶಗಳು ಹೊರಬೀಳುವ ಮೊದಲೆ ನಮ್ಮ ಹಣಕಾಸು ಮಂತ್ರಿಗಳು ಅಮೇರಿಕದ ನೆಲದಲ್ಲಿ ನಿಂತು ಒಂದು ವಾರದಲ್ಲಿಯೇ ನಾವು ವಿಮಾ ಕ್ಷೇತ್ರವನ್ನು ಖಾಸಗೀಕರಿಸುತ್ತೇವೆ ಮತ್ತು ಪೇಟೆಂಟ್ ಕಾಯ್ದೆಯನ್ನು ತಿದ್ದುಪಡಿ ಮಾಡುತ್ತೇವೆ ಎಂದು ಘೋಷಿಸಿದ್ದನ್ನು ನಾವು ನೆನಪಿಸಿಕೊಳ್ಳಬೇಕು. ಮತ್ತೆ ಅಧಿಕಾರಕ್ಕೆ ಬಂದ ನಂತರ ಸಾಮ್ರಾಜ್ಯಶಾಹಿಗಳ ಒತ್ತಡಕ್ಕೆ ಮಣಿದು ಅವುಗಳನ್ನು ಮಾಡಿಯೇ ಬಿಟ್ಟರು!

ಇದರಿಂದ ಸ್ಪಷ್ಟಗೊಳ್ಳುವುದೇನೆಂದರೆ ಭಾರತವನ್ನು ಮತ್ತು ದೇಶದ ಎಲ್ಲಾ ಹಿತಾಸಕ್ತಿಗಳನ್ನು ವಿದೇಶಗಳಿಗೆ ಮಾರಾಟ ಮಾಡಲು ಈ ಅಮೇರಿಕ ಭೇಟಿಯ ಸಂದರ್ಭದಲ್ಲಿ ಹೊರಟಿದ್ದಾರೆ. ಇದರ ವಿರುದ್ಧ ಭಾರತದ ಜನತೆಯು ಸ್ವಯಂ ಸಿದ್ಧರಾಗಿ ಪ್ರತಿರೋಧವನ್ನು ವ್ಯಕ್ತಪಡಿಸಬೇಕು. ಅಲ್ಲದೆ ಸಾಮ್ರಾಜ್ಯಶಾಹಿಯ ಕಪಿಮುಷ್ಠಿಯಲ್ಲಿ ಸಿಕ್ಕಿಕೊಂಡ ಮೇಲೆ ನಮ್ಮ ದೇಶ ಮತ್ತು ಜನತೆ ಮತ್ತು ಹಿತಾಸಕ್ತಿಗಳು ಸುರಕ್ಷಿತವಾಗಿರಲು ಸಾಧ್ಯವೇ?

ಈ ಆರ್ಥಿಕ ಕ್ಷೇತ್ರಗಳು ಮಾತ್ರವಲ್ಲ ಶ್ರೀ

ಪುಟ 11 ಕ್ಕೆ

ಕಾಫಿ, ಟೀ ಕೃಷಿಗೆ ಬಡಿದ ಜಾಗತೀಕರಣದ ಬೇಗೆ

ವಿ.ಸುಕುಮಾರ್

ಭಾರತ ಸರ್ಕಾರವು ಅನುಸರಿಸುತ್ತಿರುವ ಜಾಗತೀಕರಣ, ಉದಾರೀಕರಣದ ಪರಿಣಾಮ ಇಂದು ತೋಟ, ಕೈಗಾರಿಕೆ ಉತ್ಪನ್ನಗಳ ಮೇಲೂ ತೀವ್ರ ದಾಳಿಯನ್ನು ನಡೆಸಿದೆ. ನಮ್ಮ ಆಂತರಿಕ ಮಾರುಕಟ್ಟೆಯನ್ನು ಮೀರಿ ನಾವು ರಫ್ತು ಮಾಡುವಷ್ಟು ಚಾ ವನ್ನು ಉತ್ಪಾದಿಸುತ್ತಿದ್ದರೂ ಇಂಡೋ-ಶ್ರೀಲಂಕಾದ ಒಪ್ಪಂದದ ಪ್ರಕಾರ ಕಡಿಮೆ ದರಕ್ಕೆ ಪ್ರತಿವರ್ಷ 15 ಸಾವಿರ ಮಿಲಿಯ ಕೆ.ಜಿ. ಆಮದು ಮಾಡಲು ಒಪ್ಪಂದ ಮಾಡಿಕೊಂಡಿದೆ. ವಾಣಿಜ್ಯ ಸಂಘಟನೆಗಳ ಒಪ್ಪಂದದ ಪ್ರಕಾರ ಶೇ 35 ರಷ್ಟು ಆಮದು ಶುಲ್ಕವನ್ನು ಭಾರತವು ನಿಗದಿಮಾಡಬಹುದಾಗಿದ್ದರೂ ಶ್ರೀಲಂಕಾದೊಂದಿಗೆ ಕೇವಲ ಶೇ 7.5 ರಷ್ಟು ಮಾತ್ರ ಆಮದು ಶುಲ್ಕ ನಿಗದಿ ಮಾಡಿದೆ. ಗುಣಮಟ್ಟದ ಮೇಲೆ ಇದ್ದ ನಿರ್ಬಂಧ ಸಹ ಈಗ ಸಾರ್ಕ್ ದೇಶಗಳ ತೆಗೆದುಹಾಕಲಾಗಿದೆ

1991 ರ ಮೊದಲು ಭಾರತದ ಚಾ ಸೋವಿಯತ್ ದೇಶಕ್ಕೆ ಹೇರಳವಾಗಿ ರಫ್ತು ಮಾಡಲಾಗುತ್ತಿತ್ತು. ಸೋವಿಯತ್ ದೇಶದ ಪಥನದ ನಂತರ ಅಲ್ಲಿಯ ಮಾರುಕಟ್ಟೆ ಸಂಪೂರ್ಣವಾಗಿ ಇಲ್ಲದಂತಾಗಿದೆ. ಇದರ ಪರಿಣಾಮ ಇಂದು ಚಾ ಕ್ಷೇತ್ರ ಗಂಭೀರ ಸಮಸ್ಯೆಯನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಇಂಡೋ-ಶ್ರೀಲಂಕಾ ಒಪ್ಪಂದದ ಪ್ರಕಾರ ಚಾ ಆಮದು ಮಾಡಿಕೊಳ್ಳುವ ಒಪ್ಪಂದ ನಮ್ಮ ದೇಶದ ಚಾ ಕ್ಷೇತ್ರವನ್ನು ತಲ್ಲಣಗೊಳಿಸಿದೆ. ನೀಲಗಿರಿ ಪ್ರದೇಶದಲ್ಲಿ ಉತ್ಪಾದನೆ ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಚಾ ಸೊಪ್ಪು ವ್ಯಾಪಾರ ಮಾಡಬೇಕಾದ ಪರಿಸ್ಥಿತಿ ಬಂದೊದಗಿದ್ದು ಅಲ್ಲಿಯ ಸುಮಾರು 4 ಸಾವಿರ ಸಣ್ಣ ಬೆಳೆಗಾರರನ್ನೊಳಗೊಂಡು ಸುಮಾರು 50,000 ಮಂದಿ, ಬೆಳೆಗಾರ ಕಾರ್ಮಿಕರು ಮತ್ತಿತರರು ದೀರ್ಘ ಚಳುವಳಿಯಲ್ಲಿದ್ದಾರೆ. ಹಸಿರು ಚಾ ಸೊಪ್ಪು ಪ್ರತಿ ಕೆ.ಜಿ.ಗೆ 2.50 ನಿಂದ 4 ರೂ. ಗೆ ಮಾರಬೇಕಾದ ದಾರುಣ ಪರಿಸ್ಥಿತಿ ಬಂದಿದೆ. ತಮಿಳು ನಾಡು ರಾಜ್ಯ ಸರಕಾರ ನೀಡಿದ ಅಲ್ಪ ರಿಯಾಯಿತಿ, ಕೇಂದ್ರ ಸರ್ಕಾರ ನೀಡಿದ ಅಲ್ಪ ಸಬ್ಸಿಡಿ ಈ ಕ್ಷೇತ್ರವನ್ನು ಉಳಿಸುವ ಯಾವ ಪರಿಣಾಮವನ್ನು ಬೀರುವ ಪರಿಸ್ಥಿತಿಯಲ್ಲಿಲ್ಲ. ಎಕ್ಸಿಮ್ ಪಾಲಿಸಿಯಲ್ಲಿರುವ ಲೋಪದೋಷಗಳ ಪರಿಣಾಮ ಹೇರಳವಾಗಿ ರಬ್ಬರ್‌ನ್ನು ನಮ್ಮ ದೇಶದ ಉದ್ಯಮಿಗಳು ಆಮದು ಮಾಡಿಕೊಳ್ಳುತ್ತಿರುವುದರಿಂದ ಆ ಕ್ಷೇತ್ರದ ಕೈಗಾರಿಕೆ ತೀವ್ರ ಬಿಕ್ಕಟ್ಟು ಎದುರಿಸುತ್ತಿದೆ. ಉತ್ಪಾದನೆ ವೆಚ್ಚಕ್ಕಿಂತ ಕಡಿಮೆ ದರಕ್ಕೆ ರಬ್ಬರ್ ಮಾರಬೇಕಾದ ಪರಿಸ್ಥಿತಿ ಬಂದಿದ್ದು ಈ ಕೈಗಾರಿಕೆ ತೀವ್ರ ಸಂಕಷ್ಟದಲ್ಲಿದೆ.

ಕಾಫಿ:

ಈ ಕೈಗಾರಿಕೆ 1995 ರ ಕಾಲಘಟ್ಟದಲ್ಲಿ ಹಿಂದೆ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದ್ದ ಕಾಫಿ ಮಂಡಳಿಯನ್ನು ರದ್ದು ಮಾಡಿ ಮುಕ್ತ ಮಾರುಕಟ್ಟೆಗೆ ಕಾಫಿ ವ್ಯಾಪಾರವನ್ನು ಬಿಟ್ಟಿದ್ದರಿಂದ ಕಾಫಿ ಬೆಳೆಗಾರರಿಗೆ ಅವರು ನೆನಸಿಕೊಳ್ಳಲು ಆಗದಷ್ಟು ಬೆಲೆ ಕಾಫಿಗೆ ಸಿಕ್ಕಲು ಪ್ರಾರಂಭಿಸಿತು. ಇದರಿಂದ ಕಾಫಿ ಬೆಳೆಗಾರರು ಲಾಭಗಳಿಸಿದರು. ಉದಾರೀಕರಣವನ್ನು ಹಾಡಿ ಹೊಗಳಿದರು. ದಾರಾಳವಾಗಿ ದುಂದುವೆಚ್ಚ ಮಾಡಿದರು. ಆದರೆ ಪರಿಸ್ಥಿತಿ ವರ್ಷದಿಂದ ವರ್ಷಕ್ಕೆ ಇಳಿಮುಖವಾಗಲು ಪ್ರಾರಂಭಿಸಿದೆ. 1991-92 ರಲ್ಲಿ 50 ಕೆ.ಜಿ. ಅರೇಬಿಕ ಪಾರ್ಚ್‌ಮೆಂಟ್ ಕಾಫಿಯ ಬೆಲೆ ಸುಮಾರು ರೂ. 7000 ದಿಂದ ರೂ. 7500 ವರೆಗೆ, ರೊಬಸ್ಟಾ ಕಾಫಿಯ ಬೆಲೆ 50 ಕೆ.ಜಿ.ಗೆ ರೂ. 2800 ರಿಂದ 3000 ದವರೆಗೆ ಇದ್ದದ್ದು ಈಗ ಅರೇಬಿಕ ಪಾರ್ಚ್ ಮೆಂಟ್ ಬೆಲೆ ರೂ. 2700 ರೂ.ಗೆ, ರೊಬಸ್ಟಾ ಕಾಫಿಯ ಬೆಲೆ ರೂ. 800 ವರೆಗೆ ಇಳಿದಿದೆ.



ಈ ರೀತಿ ತೋಟ ಕೈಗಾರಿಕಾ ಕ್ಷೇತ್ರಗಳ ಉತ್ಪನ್ನಗಳ ತೀವ್ರ ಬೆಲೆ ಕುಸಿತ ಈ ಕ್ಷೇತ್ರದ ಕೈಗಾರಿಕೆಗಳನ್ನು ಹಾಗೂ ಇಲ್ಲಿ ಕೆಲಸ ಮಾಡುವ ಲಕ್ಷಾಂತರ ತೋಟ ಕಾರ್ಮಿಕರನ್ನು ತೀವ್ರವಾಗಿ ಬಾಧಿಸಲು ಪ್ರಾರಂಭಿಸಿದೆ. ನಮ್ಮ ದೇಶದಲ್ಲಿ ತೋಟ ಕೈಗಾರಿಕೆಯಲ್ಲಿ ಖಾಯಂ ಹಾಗೂ ಹಂಗಾಮಿಯಾಗಿ ಸುಮಾರು 40 ಲಕ್ಷಕ್ಕೂ ಅಧಿಕ ಕಾರ್ಮಿಕರು ದುಡಿಯುತ್ತಿದ್ದು, ನಿರುದ್ಯೋಗದ ಸಮಸ್ಯೆಯನ್ನು ಕಾರ್ಮಿಕರು ಎದುರಿಸಬೇಕಾದ ಪರಿಸ್ಥಿತಿ ಬರುತ್ತಲಿದೆ. ಕಾರ್ಮಿಕರಿಗೆ ವೇತನವನ್ನು ಕೊಡಲು, ಕಾರ್ಮಿಕರ ಇತರೆ ಸೌಲಭ್ಯಗಳನ್ನು ಕಾಲ ಕಾಲಕ್ಕೆ ಪಾವತಿಸಲು ತೋಟ ಮಾಲಿಕರಿಗೆ ಸಾಧ್ಯವಾಗುವ. ಕಾರ್ಮಿಕರ ವೇತನದಲ್ಲಿ ಕಡಿತ ಮಾಡಿದ ಹಾಗೂ ಮಾಲೀಕರ ಪಾಲಿನ ಭವಿಷ್ಯ ನಿಧಿಯನ್ನು ಭವಿಷ್ಯ ನಿಧಿ ಯೋಜನೆಗೆ ಕಟ್ಟಲಾಗದ ಪರಿಸ್ಥಿತಿ, ಕೆಲಸ ಬಿಟ್ಟವರಿಗೆ ಗ್ರ್ಯಾಚ್ಯುಟಿ ಕೊಡಲು ಸಾಧ್ಯವಾಗದ ಗಂಭೀರ ಪರಿಸ್ಥಿತಿ ಕಾಣಲಾಗುತ್ತಿದೆ. ಈ ಪರಿಸ್ಥಿತಿ ಹೀಗೆ ಮುಂದುವರೆದರೆ ತೋಟಕೈಗಾರಿಕೆ ಉದ್ಯಮ ಹಂತಹಂತವಾಗಿ ನಾಶವಾಗಿ ಇವೆಲ್ಲವನ್ನು ಬಹುರಾಷ್ಟ್ರೀಯ ಕಂಪನಿಗಳು ಕಬಳಿಸುವ ಸಾಧ್ಯತೆಗಳಿವೆ.

ಅಪೂರ್ವ ಸಮಾವೇಶ

ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಬಗ್ಗೆ ಐ.ಎನ್.ಟಿ.ಯು.ಸಿ. ಸಂಘಟನೆಗೆ ಇತರೆ ಸಂಘಟನೆಗಳಿಗಿಂತ ತೀವ್ರವಾದ ಭಿನ್ನಾಭಿಪ್ರಾಯವಿದ್ದರೂ ಡಬ್ಲ್ಯೂ.ಟಿ.ಓ. ಒಪ್ಪಂದದಿಂದ ತೋಟ ಉದ್ಯಮಕ್ಕೆ ಬಂದಿರುವ ಗಂಭೀರ ಅಪಾಯವನ್ನು ಮನಗಂಡು ಅಖಿಲ ಭಾರತ ಮಟ್ಟದಲ್ಲಿ ಕಾರ್ಮಿಕರ ತೀವ್ರ ಚಳುವಳಿಯನ್ನು ಬೆಳೆಸಲು ಇತರೆ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳೊಂದಿಗೆ ಕೈ ಜೋಡಿಸಲು ಮುಂದೆ ಬಂದಿದೆ.

ಸ್ವತಂತ್ರ ಭಾರತದ ಇತಿಹಾಸದಲ್ಲಿ ಪ್ರಥಮವಾಗಿ ನಮ್ಮ ರಾಷ್ಟ್ರದ ವಿವಿಧ ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿಐಟಿಯು, ಎಐಟಿಯುಸಿ, ಐಎನ್‌ಟಿಯುಸಿ, ಯುಟಿಯುಸಿ, ಎಚ್‌ಎಂಎಸ್‌ನ ನೇತೃತ್ವದ ತೋಟ ಕಾರ್ಮಿಕ ಸಂಘಟನೆಗಳ ಹಾಗೂ ಸ್ವತಂತ್ರ ತೋಟ ಕಾರ್ಮಿಕರ ಸಂಘಟನೆಗಳ ಮುಖಂಡರುಗಳ ಅಖಿಲ ಭಾರತ ಸಮ್ಮೇಳನ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣದ ಪರಿಣಾಮದಿಂದಾಗಿ ತೋಟ ಕೈಗಾರಿಕೆ ಇಂದು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಕೇರಳದ ಕೊಚಿನ್ ನಗರದಲ್ಲಿ ಇದೇ ಆಗಸ್ಟ್ 20 ಮತ್ತು 21 ರಂದು ಸೇರಿತು.

ಐ.ಎನ್.ಟಿ.ಯು.ಸಿ. ಅಖಿಲ ಭಾರತ ಅಧ್ಯಕ್ಷರಾದ ಜಿ.ಸಂಜೀವರೆಡ್ಡಿ, ಸಿಐಟಿಯುನ ಪ್ರಧಾನ ಕಾರ್ಯದರ್ಶಿ ಕಾಂ. ಎಂ.ಕೆ.ಪಂಧೆ, ಯುಟಿಯುಸಿಯ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಸುನೀಲ್ ರಂಜನ್ ಗುಪ್ತಾ, ಎಚ್‌ಎಂಎಸ್ ನ ಕೃಷ್ಣಸ್ವಾಮಿ ಮೊದಲಾದವರು ಈ ಸಮ್ಮೇಳನದಲ್ಲಿ ಪಾಲ್ಗೊಂಡು ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು.

ಸಮ್ಮೇಳನದಲ್ಲಿ ವಿವಿಧ ಸಂಘಟನೆಗಳ ಮುಖಂಡರುಗಳ ತೀವ್ರ ಚರ್ಚೆಯ ನಂತರ ಈ ಕೆಳಗಿನಂತೆ ಕೆಲವು ಮುಖ್ಯ ಹೋರಾಟದ ಕಾರ್ಯಕ್ರಮಗಳನ್ನು ರೂಪಿಸಿದೆ.

1. ಉತ್ತರ ಹಾಗೂ ಈಶಾನ್ಯ ಭಾರತದ ಇನ್ನು ಹೆಚ್ಚಿನ ತೋಟ ಕಾರ್ಮಿಕಸಂಘಟನೆಗಳನ್ನು ಚಳುವಳಿಯ ವ್ಯಾಪ್ತಿಗೆ ತರಲು ಇದೇ ಅಕ್ಟೋಬರ್ ತಿಂಗಳಲ್ಲಿ ಎರಡನೇ ವಾರದಲ್ಲಿ ಪಶ್ಚಿಮ ಬಂಗಾಳದ ಸಿಲುಗುರಿಯಲ್ಲಿ ಮುಂದಿನ ಸಭೆಯನ್ನು ಕರೆಯುವುದು.

2. 2000 ಅಕ್ಟೋಬರ್ 15 ರೊಳಗೆ ಪ್ಲಾಂಟೇಶನ್ ವಿಭಾಗಗಳ ಎಲ್ಲಾ ರಾಜ್ಯಗಳಲ್ಲಿ ರಾಜ್ಯ ಸಮ್ಮೇಳನಗಳನ್ನು ನಡೆಸುವುದು.

3. ತೋಟ ಕಾರ್ಮಿಕರಿಗೆ ಜಾಗತೀಕರಣದ ಪರಿಣಾಮದಿಂದ ತೋಟ ಕೈಗಾರಿಕೆ ಬಿಕ್ಕಟ್ಟಿನ ಪ್ರಜ್ಞೆಯನ್ನು ಹೆಚ್ಚಿಸಲು ಪ್ರಧಾನಮಂತ್ರಿಯವರಿಗೆ 'ಸೇವ್ ಪ್ಲಾಂಟೇಶನ್, ಸೇವ್ ಪ್ಲಾಂಟೇಶನ್ ವರ್ಕರ್ಸ್' ಎಂಬ ಘೋಷಣೆಯೊಂದಿಗೆ ಪೋಸ್ಟ್ ಕಾರ್ಡ್ ಚಳುವಳಿ ಕಾರ್ಯಕ್ರಮವನ್ನು ಅಕ್ಟೋಬರ್ ಮೂರನೇವಾರದಿಂದ ನಡೆಸುವುದು.

4. ಇದೇ ನವೆಂಬರ್ 8 ರಂದು ತೋಟಗಳ ಮುಖ್ಯ ಕೇಂದ್ರಗಳಲ್ಲಿ ಮೆರವಣಿಗೆ, ಬಹಿರಂಗ ಸಭೆಗಳನ್ನು ನಡೆಸುವುದು.

5. ತೋಟ ಕಾರ್ಮಿಕ ಸಂಘಟನೆಗಳ ಹಾಗೂ ತೋಟ ಮಾಲೀಕರ ಸಂಘಟನೆಗಳ ಮುಖಂಡರುಗಳ ಪ್ಲಾಂಟೇಶನ್ ಭಾಗದ ಸಂಸತ್ ಸದಸ್ಯರನ್ನು ಸೇರಿಸಿ ನವದೆಹಲಿಯಲ್ಲಿ 2000 ಡಿಸೆಂಬರ್‌ನಲ್ಲಿ ವಿಚಾರ ಸಂಕಿರಣವನ್ನು ಏರ್ಪಡಿಸಬೇಕೆಂದು

6. 2001 ರ ಜನವರಿಯಲ್ಲಿ ಸಂಸತ್ ಅಧಿವೇಶನದ ಸಂದರ್ಭ ತೋಟ ಕಾರ್ಮಿಕರ ಸಂಸತ್ ಚಲೋ ಕಾರ್ಯಕ್ರಮವನ್ನು ನಡೆಸಬೇಕೆಂದು ತೀರ್ಮಾನಿಸಲಾಗಿದೆ.



ವಿದ್ಯುತ್ ಬೆಲೆ ಏರಿಕೆ ವಿರುದ್ಧ

ಆಂಧ್ರದಲ್ಲಿ ನಿಲ್ಲದ ಸಮರ

ಶೇ 200 ಕ್ಕೂ ಹೆಚ್ಚು ಪಟ್ಟು (ಕೆಲವು ಪ್ರಕರಣಗಳಲ್ಲಿ 245%) ವಿದ್ಯುತ್ ದರಗಳನ್ನು ಆಂಧ್ರದ ಚಂದ್ರಬಾಬು ನಾಯ್ಡು ಸರ್ಕಾರ ಏರಿಸಿತು. ಏಕಾಏಕಿ ಎರಗಿದ ಈ ದಾಳಿಯಿಂದಾಗಿ ಆಂಧ್ರದ ಜನ ಕಂಗಾಲಾದರು. ಅತ್ಯಂತ ಜನವಿರೋಧಿಯಾದಂತಹ ಇಂತಹ ನೀತಿಗಳು ಒಂದಾದ ಮೇಲೊಂದರಂತೆ ಜಾರಿಯಾಗುತ್ತಿರುವುದನ್ನು ಜನತೆ ಸಹಿಸದಾದರು. ವಿಧಾನ ಸಭೆಯ ಹೊರಗು ಒಳಗು ಪ್ರತಿಭಟನೆಗಳು ತೀವ್ರವಾದವು.

ಲೆಕ್ಕಾಚಾರವಿಲ್ಲದೆ ಯದ್ವಾ-ತದ್ವಾ ಏರಿದ ವಿದ್ಯುತ್ ದರಗಳನ್ನು ವಾಪಸ್ಸು ಪಡೆಯುವಂತೆ ಒತ್ತಾಯಿಸಿ ಸಿಪಿಐ(ಎಂ), ಸಿ.ಪಿ.ಐ., ಸಿಪಿಐ(ಎಂಎಲ್) ಕಾಂಗ್ರೆಸ್‌ಐ ಮುಂತಾದ ಪಕ್ಷಗಳ ಶಾಸಕರುಗಳು ವಿಧಾನಸಭೆಯ ಎದುರು ಒಂದು ತಿಂಗಳ ಕಾಲ ಉಪವಾಸ ನಿರಸನ ನಡೆಸಿದರೆ, ಹೊರಗೆ ಲಕ್ಷೋಪಲಕ್ಷ ಜನ ಸಭೆ ಮೆರವಣಿಗೆ, ಪ್ರತಿ ಭಟನಾ ಪ್ರದರ್ಶನಗಳು ರಸ್ತೆ ತಡೆ ಮುಂತಾದ ಕಾರ್ಯಕ್ರಮಗಳ ಮೂಲಕ ಸರ್ಕಾರಕ್ಕೆ ಮೇಲಿಂದ ಮೇಲೆ ಎಚ್ಚರಿಕೆ ಕೊಟ್ಟರು. ಇಷ್ಟಾದರು ಹೈಟೆಕ್ ಮಂತ್ರಿಯ ಕಿವಿ ತೆರೆಯಲೇ ಇಲ್ಲ.

ಹೈಟೆಕ್ ಮಂತ್ರಿ ನಾಯ್ಡುರವರ ಕಣ್ಣು ಕಿವಿ ತಲೆ ಎಲ್ಲವೂ ಅಮೇರಿಕಾದ ಕ್ಲಿಂಟನ್‌ರ ಹಿಂದೆಯೇ ಹೋಗಿಬಿಟ್ಟವೆಯೆಂದು ಅರಿತ ಆಂಧ್ರದ ಜನತೆ ಸರ್ಕಾರದ ಕಣ್ಣು ತೆರೆಸುವ ಸಲುವಾಗಿ 'ಆಗಸ್ಟ್ 28' ರಂದು ' ಚಲೋ ಅಸೆಂಬ್ಲಿ' ಕಾರ್ಯಕ್ರಮವನ್ನು ಸಂಘಟಿಸಿದರು.

ಸಿಪಿಐ, ಸಿಪಿಐ(ಎಂ), ಸಿಪಿಐ(ಎಂಎಲ್) ಮುಂತಾದ 9 ಎಡ ಪಕ್ಷಗಳು ಹಾಗೂ ಕಾಂಗ್ರೆಸ್ ಐ ಚಲೋ ಅಸೆಂಬ್ಲಿಗೆ ಕರೆ ನೀಡಿದ್ದವು. ಸಾಗರೋಪಾದಿಯಲ್ಲಿ ಜನತೆ ಹೈದರಾಬಾದ್ ನಗರಕ್ಕೆ ಹರಿದು ಬಂತು. ಪ್ರತಿಭಟನೆಯನ್ನು ದಮನ ಮಾಡುವ ತೀರ್ಮಾನಕ್ಕೆ ಬಂದಿದ್ದ ನಾಯ್ಡು ಸರ್ಕಾರ ಜಿಲ್ಲಾ ಕೇಂದ್ರಗಳಲ್ಲಿಯೇ ತಂಡೋಪತಂಡ ಜನತೆಯನ್ನು ಬಂಧಿಸಿತು. ಬೆದರಿಸಿತು. ರ್‍ಯಾಲಿಯಲ್ಲಿ ಭಾಗವಹಿಸದಂತೆ ತಡೆಯಿತು.

ಇಷ್ಟಾದರು ಲಾರಿಗಳಲ್ಲಿ ಬಸ್ಸುಗಳಲ್ಲಿ .. ವ್ಯಾನುಗಳಲ್ಲಿ ಬಂದಿಳಿದ ಸಹಸ್ರಾರು ಜನ ಚಲೋ ಅಸೆಂಬ್ಲಿಯಲ್ಲಿ ಭಾಗವಹಿಸಲು ಗಾಂಧಿಯನ್ ಮಾರ್ಗದಲ್ಲಿ ಚಲಿಸಿತು. ಶಾಂತಿಯುತ ಮೆರವಣಿಗೆ ಅಸೆಂಬ್ಲಿ ಕಡೆಗೆ ಹೊರಟಿತ್ತು. ಬಹಿರಂಗ ಸಭೆಯನ್ನು ನಡೆಸುವ ಏರ್ಪಾಡು ಸಹ ಆಗಿತ್ತು.

ಆದರೆ ಶಾಂತಿಯುತ ಹೋರಾಟ ಮುಖ್ಯಮಂತ್ರಿಗಳಿಗೆ ಬೇಕಾಗಿರಲಿಲ್ಲವೆಂದು ಕಾಣುತ್ತದೆ. ಹೋರಾಟ, ಜನಚಳುವಳಿಗಳನ್ನು ಹತ್ತಿಕ್ಕುವ ಉದ್ದೇಶ ಹೊಂದಿದ್ದ ಕ್ಲಿಂಟನ್‌ರ ಬಾಲಬಡುಕ ನಾಯ್ಡು ಪೊಲೀಸ್ ಅಸ್ತ್ರ ಬಳಸಿ ಪ್ರತಿಭಟನೆಕಾರರ ಮೇಲೆ ಇನ್ನಿಲ್ಲದ ದೌರ್ಜನ್ಯ ನಡೆಸಿಯೇ ಬಿಟ್ಟರು. ಪೊಲೀಸರು ನಡೆಸಿದ ವಿಕಾರ ರೂಪದ ದೌರ್ಜನ್ಯ ಹಾಗೂ ಗೋಲಿಬಾರ್‌ಗೆ ಅಮಾಯಕ ನಾಲ್ಕು ಜೀವಗಳು ಬಲಿಯಾದರೆ 139 ಜನ ಆಸ್ಪತ್ರೆ ಸೇರಬೇಕಾಯಿತು. ಅದರಲ್ಲಿ 83 ಜನ ಈಗಲೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪೊಲೀಸ್ ದೌರ್ಜನ್ಯ ಖಂಡಿಸಿ ದೇಶಾದ್ಯಂತ ಪ್ರತಿಭಟನೆ:

ಜಲಿಯನ್ ವಾಲಾಬಾಗ್ ದುರಂತವನ್ನು ನೆನಪಿಸಿಕೊಟ್ಟ ಪೊಲೀಸ್ ದೌರ್ಜನ್ಯ ಹೈದಾರಾಬಾದಿನಲ್ಲಿ ನಡೆಯುತ್ತಿದ್ದಂತೆಯೇ ಸುದ್ದಿ ಎಲ್ಲೆಡೆ ಹಬ್ಬಿತು. ಪತ್ರಿಕೆಗಳು ಟಿವಿಗಳ ಮೂಲಕ ಭೀಬತ್ಸ ದೃಷ್ಯಗಳನ್ನು ಕಣ್ಣಾರೆ ಕಂಡ ಜನತೆ ದಮನಕಾರಿ ಸರ್ಕಾರಕ್ಕೆ ಶಾಪಹಾಕಿದ್ದು ಮಾತ್ರವಲ್ಲದೆ ಪ್ರತಿಭಟನೆಗಳನ್ನು ಸಲ್ಲಿಸಿದರು. (ಟಿ.ವಿಗಳಲ್ಲಿ ಕಂಡಿದ್ದು ಪೂರ್ಣಸತ್ಯವಲ್ಲದ್ದು)

ಘಟನೆ ನಡೆದ ಮೂರನೆ ದಿವಸ ಇಡೀ ಆಂಧ್ರ ಬಂದ್ ಆಚರಿಸಿತು. ಅಘೋಷಿತ ಕರ್ಫ್ಯೂ ಇಡೀ ರಾಜ್ಯದಲ್ಲಿ ಜಾರಿಯಾಯಿತು. ತಾಲ್ಲೂಕು ಕೇಂದ್ರಗಳಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ನೂರಾರು ಸಾವಿರಾರು ಸಂಖ್ಯೆಯಲ್ಲಿ ಸೇರಿದ ಜನತೆ ಪ್ರತಿಭಟನಾ ಮೆರವಣಿಗೆಗಳನ್ನು ಸಭೆ ಪ್ರದರ್ಶನಗಳನ್ನು ನಡೆಸಿದರು. ರೋಷಗೊಂಡ ಪ್ರತಿಭಟನೆಕಾರರು ಚಂದ್ರಬಾಬುನಾಯ್ಡು ಪ್ರತಿಕೃತಿಯನ್ನು ದಹಿಸಿದರು. ದಮನಕಾರಿ ಹಲ್ಲೆಗೆ ಎಲ್ಲೆಡೆ ತೀವ್ರಖಂಡನೆ ವ್ಯಕ್ತವಾಯಿತು. ಮುಖ್ಯಮಂತ್ರಿಪಟ್ಟಕ್ಕೇರಿಸಿದ್ದಕ್ಕಾಗಿ ಪಶ್ಚಾತಾಪ ಪಟ್ಟರು.

ದೆಹಲಿಯಲ್ಲಿ ಪ್ರತಿಭಟನೆ:

ಸಿಪಿಐ, ಸಿಪಿಐ(ಎಂ) ಸಿಪಿಐ(ಎಂ.ಎಲ್) ನ ನೂರಾರು ಕಾರ್ಯಕರ್ತರು ಆಗಸ್ಟ್ 31 ರಂದು ನವದೆಹಲಿಯ ಆಂಧ್ರ ಭವನದ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದರು. ವಿದ್ಯುತ್ ದರಗಳನ್ನು ವಾಪಸ್ಸು ಪಡೆಯುವಂತೆ ಒತ್ತಾಯಿಸಿ ಹಾಗೂ ಪೋಲೀಸ್ ದೌರ್ಜನ್ಯವನ್ನು ಖಂಡಿಸಿ ಚಂದ್ರಬಾಬು ನಾಯ್ಡು ಪ್ರತಿಕೃತಿಯನ್ನು ಸುಡಲಾಯಿತು.

ರೋಷಗೊಂಡ ಮಹಿಳಾ ಪ್ರದರ್ಶಕಾರರು ಸುಡುವ ಮುಂಚಿ ಪ್ರತಿಕೃತಿಗೆ ಷೂ - ಹಾಗೂ ಚಪ್ಪಲಿಗಳಿಂದ ಹೊಡೆದು ನಾಯ್ಡು ಮೇಲೆ ರೋಷ ಕಾರಿದರು. ನಾಯ್ಡು ಇಂದಾಗಿ ಕೊಲೆಯಾದ ಮಕ್ಕಳು ಹಾಗೂ ಅಣ್ಣ ತಮ್ಮಂದಿರಿಗಾಗಿ ಅತ್ತರು.

ಕೊಲೆಗೆಡುಕ ಚಂದ್ರಬಾಬು ನಾಯ್ಡು ರಾಜೀನಾಮೆಗಾಗಿ ಒತ್ತಾಯಿಸಿ, ಘೋಷಣೆಗಳನ್ನು ಕೂಗಿದರು.

ಸಿಪಿಐ(ಎಂ)ನ ಬೃಂದಾಕಾರಟ್, ಬ್ರತಿನ್‌ಸೇನ್ ಗುಪ್ತಾ, ಸಿಪಿಐನ ಡಿ ರಾಜಾ, ಸಿಪಿಐ ಎಂಎಲ್ ನ ಅಪರ್ಣಾ ಮುಂತಾದವರು ಪ್ರದರ್ಶನದ ನೇತೃತ್ವ ವಹಿಸಿದ್ದರು.

ಸಿಪಿಐ ಹಾಗೂ ಸಿಪಿಎಂ ನ ನಿಯೋಗದಿಂದ ರಾಷ್ಟ್ರಾಧ್ಯಕ್ಷರ ಭೇಟಿ:

ಸೆಪ್ಟಂಬರ್ 2 ರಂದು ಎರಡೂ ಪಕ್ಷಗಳು ನಿಯೋಗವು ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಘಟನೆಯ ಬಗ್ಗೆ ವಿವರಿಸಿತು.

ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ರಾಷ್ಟ್ರಪತಿಗಳಿಗೆ ಸಲ್ಲಿಸಿದ್ದ ವಿಡಿಯೋ ಚಿತ್ರೀಕರಣ ಹಾಗೂ ಆತನ ಹೇಳಿಕೆಗಳ ಕುರಿತು ನೈಜ ಮಾಹಿತಿಯನ್ನು ನೀಡಲಾಯಿತು.

ಉಗ್ರರನ್ನು ಹತ್ತಿಕ್ಕಲು ಪೋಲೀಸರನ್ನು ಬಿಡಬೇಕಾಯಿತು ಎಂದು ಹೇಳಿಕೆ ನೀಡಿದ್ದ ಮುಖ್ಯಮಂತ್ರಿಗಳು ಪ್ರಕರಣದ ಕೆಲವೇ ತುಣಕನ್ನು ಮಾತ್ರ ರಾಷ್ಟ್ರಪತಿಗಳಿಗೆ ಸಲ್ಲಿಸಿದ್ದರು. ಘಟನೆಯನ್ನು ಸಮರ್ಥಿಸಿಕೊಂಡಿದ್ದರು. ಇದು ಎಷ್ಟರ ಮಟ್ಟಿಗೆ ಸತ್ಯ ಎಂಬ ವಿಚಾರವನ್ನು ನಿಯೋಗವು ರಾಷ್ಟ್ರಧ್ಯಕ್ಷರಿಗೆ ಮನನ ಮಾಡಿಕೊಟ್ಟಿತು.

ಕಾನೂನು ಮತ್ತು ಸುವ್ಯವಸ್ಥೆ ರಾಜ್ಯ ಸರ್ಕಾರಕ್ಕೆ ಬಿಟ್ಟ ವಿಚಾರ ಸಂವಿಧಾನದ ಒಕ್ಕೂಟ ತತ್ವವನ್ನು ಎತ್ತಿ ಹಿಡಿಯುವ ಸಲುವಾಗಿ ಪ್ರಜ್ಞಾಪೂರ್ವಕವಾಗಿಯೇ ಬದ್ಧರಾಗಬೇಕಾದ ಈ ವಿಚಾರಕ್ಕೆ ರಾಷ್ಟ್ರಪತಿಗಳು ಮಧ್ಯಪ್ರವೇಶಿಸುವುದನ್ನು ಅಪೇಕ್ಷಿಸದ ನಿಯೋಗವು, ವಸ್ತು ಸ್ಥಿತಿಯ ಕುರಿತಷ್ಟೇ ವಿವರವಾದ ಮಾಹಿತಿಯನ್ನು ರಾಷ್ಟ್ರಪತಿಗಳಿಗೆ ಒದಗಿಸಿತು ನ್ಯಾಯಾಂಗ ತನಿಖೆಯ ಅಗತ್ಯವನ್ನು ಒತ್ತಿ ಹೇಳಿತು.

ಆಂಧ್ರದ ಮುಖ್ಯಮಂತ್ರಿಗಳ ಸುಳ್ಳು ಮಾಹಿತಿಗಳು ಹಾಗೂ ಯೋಜಿತ ಪ್ರಚಾರವನ್ನು

ಪ್ರಭಾವತಿ. ಎನ್



ವಿಶ್ವಬ್ಯಾಂಕಿಗೆ ಶರಣು ನಾಯ್ಡು ಸಲಾಮು - ನಿಲ್ಲದ ಸವಾಲು

ಜನಸಾಮಾನ್ಯರ ಹಿತಾಸಕ್ತಿಯನ್ನು ಬದಿಗಿಟ್ಟು ಶ್ರೀಮಂತರನ್ನು, ಜೊತೆಗೆ ವಿದೇಶಿ ಸಾಮ್ರಾಜ್ಯ ಶಾಹಿಗಳನ್ನು ಒಲೈಸುತ್ತಿರುವ ಹೈಟೆಕ್ ಮುಖ್ಯಮಂತ್ರಿ ಚಂದ್ರ ಬಾಬುನಾಯ್ಡು ತಲೆಬುಡವಿಲ್ಲದೆ ವಿದ್ಯುತ್ ದರ ಏರಿಸಿ ಚಳುವಳಿಯನ್ನು ದಮನದ ಮೂಲಕ ಹತ್ತಿಕ್ಕಲು ಮುಂದಾದರು. ವಿಶ್ವ ಬ್ಯಾಂಕಿನ ಅಣತಿಯಂತೆ ಭಿಕ್ಷುಕ ಚಂದ್ರಬಾಬು ನಾಯ್ಡು ಎಷ್ಟು ಬೇಕಾದರು ಕುಣಿಯಬಹುದು. ಆದರೆ ಹೆಜ್ಜೆ ಹಾಕುವವರು ಯಾರು?

ಲಾಠಿ ಬರಲಿ ಬೂಟೇ ಬರಲಿ ರಕ್ತ ಚಿಲ್ಲಲಿ ಪ್ರಾಣ ಹೋಗಲಿ ಬಂದೂಕೇ ಆಗಲಿ ಬಾಂಬೇ ಆಗಲಿ ದೇಶ ಮಾರಲು ಬಿಡುವುದಿಲ್ಲ ದೇಶ ಹರಾಜಿಗೆ ತಯಾರಿಲ್ಲ ಎಂದು ಘೋಷಣೆಗಳನ್ನು ಕೂಗಿದ್ದು ಮಾತ್ರವಲ್ಲ ಮಾಡಿಯೇ ತೋರಿದರು ದೇಶ ಪ್ರೇಮಿ ಜನತೆ. ಇಷ್ಟಾದ ನಂತರ ಹೋರಾಟದ ಸಮರಕ್ಕೆ ಸಜ್ಜಾಗಿ ನಿಂತೇ ನಿಂತರು. ಚಳುವಳಿಯನ್ನು ದಮನದ ಮೂಲಕ ಹತ್ತಿಕ್ಕಲು ಸಾಧ್ಯವಿಲ್ಲ ದಮನ ಹೆಚ್ಚಾದಂತೆ ಹೋರಾಟದ ತೀವ್ರತೆ ಏರುತ್ತದೆಯೇ ಹೊರತು ಇಳಿಯುವುದಿಲ್ಲ ಎಂಬ ಪಾಠವನ್ನು ನಾಯ್ಡುಗೆ ಕಲಿಸಲು ಚಳುವಳಿಯನ್ನು ಮುಂದುವರೆಸಲು ಪಣ ತೊಟ್ಟರು.

ವಿದ್ಯುತ್ ದರಗಳನ್ನು ಇಳಿಸುವವರೆಗೆ ಚಳುವಳಿಯನ್ನು ವಾಪಸ್ಸು ಪಡೆಯುವುದಿಲ್ಲ ಎಂಬ ತೀರ್ಮಾನವನ್ನು ಸರ್ಕಾರದ ಗಮನಕ್ಕೆ ತಂದರು. ಪ್ರತಿಭಟನಾ ವಾರಾಚರಣೆಗೆ ಕರೆ ಕೊಟ್ಟರು. ಸರ್ಕಾರ ನಿಗಧಿಪಡಿಸಿರುವ ವಿದ್ಯುತ್ ದರಗಳನ್ನು ಕಟ್ಟಬಾರದೆಂದು ಜನತೆಗೆ ಕರೆ ನೀಡಲಾಗಿದೆ. ಚಳುವಳಿ ಮುಂದುವರೆದಿದೆ.

ವಿದ್ಯುತ್ ದರಗಳನ್ನು ಇಳಿಸುವುದಿಲ್ಲವೆಂಬ ಪ್ರತಿಷ್ಠೆಯ ಪಟ್ಟು ನಾಯ್ಡು ಕಡೆಯಿಂದ. ಇದು ಪ್ರತಿಷ್ಠೆಯ ಪ್ರಶ್ನೆಯಲ್ಲ ಸಾಮಾನ್ಯ ಜನರ ಬದುಕಿನ ಪ್ರಶ್ನೆ, ವಿದ್ಯುತ್ ದರಗಳನ್ನು ಇಳಿಸದೇ ಬಿಡುವುದಿಲ್ಲವೆಂಬ ಪಟ್ಟು ಚಳುವಳಿಕಾರರ ಕಡೆಯಿಂದ.

ಚಂದ್ರಬಾಬು ಸರ್ಕಾರ ವಿಶ್ವ ಬ್ಯಾಂಕ್ ಮುಂದೆ ಬಾಜಿ ಕಟ್ಟಿದರೆ ಹೋರಾಟಗಾರರು ಜನತೆಯ ನಡುವೆ ಸಮರ ಸಾರಿದ್ದಾರೆ, ಸಜ್ಜನ ದುರ್ಜನರ ನಡುವೆ ಸಾಗಿರುವ ಈ ಸಮರದಲ್ಲಿ ಮುಂದೇನಾಗುವುದೊ ನೋಡೋಣವೆಂದು ಕಾಯುತ್ತಾ ಕುಳಿತರಷ್ಟೇ ಸಾಲದು ಸಜ್ಜನರು ಸಮರದಲ್ಲಿ ಭಾಗೀದಾರರೂ ಆಗ ಬೇಕು ಆಗಷ್ಟೇ ವಿಜಯ.

ಬಯಲಿಗೆಳೆಯುವುದೇ ಭೇಟಿಯ ಉದ್ದೇಶವಾಗಿತ್ತು.

ಆಂಧ್ರ ಹೈಕೋರ್ಟಿನ ಪ್ರಸ್ತುತ ನ್ಯಾಯಾಧೀಶರ ಕಡೆಯಿಂದ ನ್ಯಾಯಾಂಗ ತನಿಖೆಯಾಗಬೇಕೆಂದು ನ್ಯಾಯ ಸಮ್ಮತ ಬೇಡಿಕೆಯನ್ನು ಆ.ಪ್ರ. ಮುಖ್ಯಮಂತ್ರಿಗಳು ನಿರಾಕರಿಸುತ್ತಿರುವುದೇ ಅವರ ತಪ್ಪಿಸಿಕೊಳ್ಳುವ ತಂತ್ರವನ್ನು ಸಾಬೀತುಪಡಿಸುತ್ತದೆ ಎಂದು ನಿಯೋಗವು ಆರೋಪಿಸಿತು.

ನಿಯೋಗದಲ್ಲಿ ಇ. ಬಾಲನಂದನ್, ಆರ್. ಉಮಾಪತಿ, ಸೀತಾರಾಂ ಯೆಚೂರಿ (ಸಿಪಿಎಂ ನ ಪಾಲಿಟ್‌ಬ್ಯೂರೋ ಸದಸ್ಯರುಗಳು) ಎ.ಬಿ. ಬರ್ದನ್, ಡಿ.ರಾಜ (ಸಿಪಿಐ ಮುಖಂಡರು) ಮುಂತಾದವರಿದ್ದರು.

ನ್ಯಾಯಾಂಗ ತನಿಖೆಗೆ ಯೆಚೂರಿ ಆಗ್ರಹ:

ಆಗಸ್ಟ್ 30 ರಂದು ನವದೆಹಲಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ಸಿಪಿಎಂ ನ ಪಾಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೋಚೂರಿಯವರು ಘಟನೆಯ ನ್ಯಾಯಾಂಗ ತನಿಖೆಗಾಗಿ ಆಗ್ರಹಪಡಿಸಿದರು. ಹೈದ್ರಾಬಾದಿನ ಘಟನೆಯನ್ನು ಸ್ಥಳ ಪರಿಶೀಲನೆಯನ್ನು ಮುಗಿಸಿ ಆಗ ತಾನೆ ಹಿಂತಿರುಗಿದ್ದ ಯೆಚೂರಿಯವರು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಪೂರ್ವಯೋಜಿತ ದಮನ ಇದಾಗಿದ್ದು ಪೋಲೀಸ್ ದೌರ್ಜನ್ಯ ಅನುಚಿತವಾದದ್ದು ಎಂದು ವಿವರಿಸಿದರು.



ಆಸ್ಪತ್ರೆಯಲ್ಲಿ ಗಾಯಾಳುಗಳನ್ನು ಭೇಟಿ ಮಾಡಿ ಮರಳಿದ್ದ ಯೆಚೂರಿಯವರು 83 ಜನ ಈಗಲೂ ಆಸ್ಪತ್ರೆಯಲ್ಲಿದ್ದಾರೆ. ಅದರಲ್ಲಿ 69 ಜನ ಸಿಪಿಎಂ ನವರು ಏಳು ಜನ ಕಾಂಗ್ರೆಸ್‌ಗೆ ಸೇರಿದವರು ಆರುಜನ ಸಿಪಿಐ ಕಾರ್ಯಕರ್ತರು, ಒಬ್ಬ ಸಿಪಿಐ (ಎಂ.ಎಲ್) ಗೆ ಸೇರಿದವ. ಚಂದ್ರಬಾಬು ನಾಯ್ಡುವಿನ ಪ್ರಕಾರ ಇವರಲ್ಲಿ ಯಾರು ಭಯೋತ್ಪಾದಕರು? ಯಾವ ಭಯೋತ್ಪಾದಕರನ್ನು ಚದುರಿಸಲು ಗೋಲಿಬಾರ್ ನಡೆಸಲಾಯಿತು ಎಂದು ಮುಖ್ಯಮಂತ್ರಿಗಳ ಹೇಳಿಕೆಗೆ ಪ್ರತಿಯಾಗಿ ನುಡಿದರು. ಭಯೋತ್ಪಾದಕರನ್ನು ಚದುರಿಸುವ ಸಲುವಾಗಿಯೇ ಗೋಲಿಬಾರ್ ನಡೆಸಿದ್ದಾರೆ, ಹಾಗಿದ್ದ ಪಕ್ಷದಲ್ಲಿ ನ್ಯಾಯಾಂಗ ತನಿಕೆ ನಡೆಯಲಿ ಪ್ರಕರಣ ಬೆಳಕಿಗೆ ಬರಲಿ ಎಂದು ಆಗ್ರಹಪಡಿಸಿದರು.

ನೆರೆಯ ಹಾವಳಿಯಿರುವುದರಿಂದಾಗಿ ಚಳುವಳಿಯನ್ನು ವಾಪಸ್ಸು ಪಡೆಯಲು ಮುಖ್ಯಮಂತ್ರಿಗಳು ಸೂಚಿಸಿದ್ದಾರೆ. ಚಳುವಳಿಯನ್ನು ವಾಪಸ್ಸು ಪಡೆಯಲು ನಮ್ಮ ಅಭ್ಯಂತರವೇನೂ ಇಲ್ಲ. ವಿಪರೀತವಾಗಿ ಏರಿಸಿರುವ ವಿದ್ಯುತ್ ದರಗಳನ್ನು ಹಿಂದಕ್ಕೆ ಪಡೆದು ಜನತೆಗೆ ಹೊರಿಸಿರುವ ಹೊರೆಯನ್ನು ಇಳಿಸಲಿ ಚಳುವಳಿಯನ್ನು ನಿಲ್ಲಿಸುತ್ತೇವೆ ಎಂದು ಚಳುವಳಿಯ ಅಗತ್ಯದ ಬಗ್ಗೆ ವಿವರಿಸಿದರು.

ಪ್ರಾಕೃತಿಕ ವಿಕೋಪಗಳಿಗಿಂತ ಸರ್ಕಾರ ಸೃಷ್ಟಿಸುವ ವಿಕೋಪಗಳೇ ಭಯಾನಕವಾಗಿರುವ ಬಗ್ಗೆ ಯಚೂರಿ ವಿಷಾದಿಸಿದರು. ಟಿ.ವಿ. ಚಾನೆಲ್‌ಗಳಲ್ಲಿ ಭಿತ್ತರವಾಗುತ್ತಿರುವ ಅವಾಸ್ತವಿಕ (ಕೆಲವೇ ದೃಶ್ಯಗಳನ್ನು ಸೆರೆ ಹಿಡಿದು ತೋರಿಸುವ) ಚಿತ್ರಗಳನ್ನು ತೋರಿಸದಂತೆ ಲಿಖಿತ ನಿರ್ಬಂಧ ವಿಧಿಸಬೇಕೆಂದು ಸತ್ಯ ಸಂಗತಿಯನ್ನು ಮರೆಮಾಚಲು ಅವಕಾಶ ನೀಡಕೂಡದೆಂದು ಆಗ್ರಹ ಪಡಿಸಿದರು.

ಮೊಣಕಾಲಿನ ಕೆಳಗೆ ಲಾಠಿಚಾರ್ಜು ನಡೆಸುವ, ಸೂಚನೆ ಕೊಟ್ಟು ಜನತೆಯನ್ನು ಚದುರಿಸುವ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಕುತ್ತಿಗೆ, ಬೆನ್ನು, ಎದೆ, ಹೊಟ್ಟೆ ಎಲ್ಲೆಂದರಲ್ಲಿ ಬುಲೆಟ್ ಹಾರಿಸಿದ ಪೊಲೀಸರ ಪೈಶಾಚಿಕ ಕೃತ್ಯವನ್ನು ಯೆಚೂರಿ ಖಂಡಿಸಿದರಲ್ಲದೆ ಇದೊಂದು ಪೂರ್ವಯೋಜಿತ ಕೊಲೆ ಯತ್ನ ಎಂದು ಆರೋಪಿಸಿ ಚಂದ್ರಬಾಬು ನಾಯ್ಡು ರಾಜೀನಾಮೆಗೆ ಆಗ್ರಹ ಪಡಿಸಿದರು.

ಸ್ವಾತಂತ್ರ ಹೋರಾಟಗಾರರ ಖಂಡನೆ, ನಾಯ್ಡುಗೆ ಛೀಮಾರಿ:

ಅಮಾಯಕ ಜನತೆಯ ಮೇಲೆ ನಡೆದ ಲಾಠಿಚಾರ್ಜ್ ಅಶ್ರುವಾಯು, ಬಿರುಸು ನೀರಿನ ಪ್ರಯೋಗ, ಗೋಲಿಬಾರ್, ಅಶ್ವದಳ ತುಳಿತ ಇನ್ನೂ ಮುಂತಾದ ಬರ್ಬರ ಆಕ್ರಮಣಗಳನ್ನು ಖಂಡಿಸಿ ಆಂಧ್ರ ಪ್ರದೇಶದ ಸ್ವಾತಂತ್ರ ಹೋರಾಟಗಾರರ ಸಂಘ ಸರ್ಕಾರಕ್ಕೆ ಛೀಮಾರಿ ಹಾಕಿದೆ.

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಪ್ರಖ್ಯಾತ ಸಿನಿಮಾ ನಿರ್ದೇಶಕರು, ನಿರ್ಮಾಪಕರು ಆಗಿರುವ ಬಿ.ತಿಲಕ್‌ರವರು ಹೇಳಿಕೆ ನೀಡಿ ಈ ಘಟನೆ ನಮಗೆಲ್ಲರಿಗೂ ಜಲಿಯನ್ ವಾಲಾಬಾಗನ್ನು ನೆನಪಿಸಿಕೊಟ್ಟಿತು. ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನು ಒದ್ದೋಡಿಸಲು ನಾವೆಲ್ಲ ಆ ಕಾಲದಲ್ಲಿ ಎಷ್ಟೆಲ್ಲಾ ಶ್ರಮ ಪಟ್ಟೆವು, ಏನೆಲ್ಲಾ ಆಸೆ ಪಟ್ಟೆವು ಆದರೆ ಇಂದು ನಾಯ್ಡು ಅಂಥವರು ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೆ ಕೆಂಪು ಹಾಸು ಹಾಕಲು ಹೊರಟಿದ್ದಾರೆ. ಕ್ಲಿಂಟನ್ ಮಹಾಶಯನನ್ನು ಮೆಚ್ಚಿಸಲು ಹೊರಟಿದ್ದಾರೆ. ಹೀಗಾಗಿ ಸಾಮಾನ್ಯ ಜನರ ಮೇಲೆ ಸವಾರಿ ನಡೆದಿದೆ. ಮತ್ತೊಮ್ಮೆ ಸ್ವಾತಂತ್ರ್ಯ ಸಮರಕ್ಕೆ ದೇಶದ ಜನತೆ ಸಜ್ಜಾಗಬೇಕಾಗಿದೆ ಎಂದು ಕರೆ ನೀಡಿರುತ್ತಾರೆ.

ಸ್ವಾತಂತ್ರ್ಯ ಯೋಧರು ಸಭೆ ಸೇರಿ ಘಟನೆಯನ್ನು ಸರ್ವಾನುಮತದಿಂದ ಖಂಡಿಸಿದ್ದಲ್ಲದೆ ನಾಯ್ಡು ಸರ್ಕಾರದ ದಮನಕಾರಿ ನೀತಿಗಳ ವಿರುದ್ಧ ನಿರ್ಣಯವನ್ನು ಅಂಗೀಕರಿಸಿರುತ್ತಾರೆ. ರಾಜ್ಯಪಾಲರನ್ನು ಬೇಟಿಯಾಗಿ ಚಳುವಳಿಕಾರರ ಪರವಾಗಿ ಮನವಿಪತ್ರ ಸಲ್ಲಿಸಿರುತ್ತಾರೆ.

ಇದು ಚರಿತ್ರೆಯಿಂದ ಕಲಿತಿರುವ ಪಾಠ:

ನಿನ್ನೆ ಉತ್ತರ ಪ್ರದೇಶದಲ್ಲಿ ಇಂದು ಆಂಧ್ರದಲ್ಲಿ ನಾಳೆ ಕರ್ನಾಟಕ ಹೀಗೆ ಜನತೆಯ ಮೇಲೆ ದಬ್ಬಾಳಿಕೆ ನಡೆಯುತ್ತಾ ಹೋದಲ್ಲಿ ಕೊನೆ ಎಂದು. ಈಗಾಗಲೆ ನಮ್ಮ ರಾಜ್ಯದಲ್ಲೂ ಸಹ ವಿದ್ಯುತ್ ದರಗಳ ಏರಿಕೆಯ ಪ್ರಸ್ತಾಪಗಳು ಬರತೊಡಗಿವೆ. ಬಹುಶಃ ನಗರ ಸಭಾ ಚುನಾವಣೆಗಳನ್ನು ಕಾಯುತ್ತಿರಬಹುದಷ್ಟೆ. ಕಾದು ನೋಡೋಣ ವೆಂದು ಸುಮ್ಮನಾದರೆ ಆಂಧ್ರದ ಜನತೆಗೆ ಒದಗಿದ ಗತಿಯೇ ನಮಗೂ ಒದಗಬಹುದು.

ಕೇವಲ ಚಂದ್ರಬಾಬು ಮಾತ್ರ ಈ ತಪ್ಪು ಮಾಡಿದವರೆಂದು ಪರಿಗಣಿಸುವುದು ಬೇಡ. ನಮ್ಮ ರಾಜ್ಯದ ಹೈಟೆಕ್ ಮುಖ್ಯಮಂತ್ರಿಗಳು ನಾಳೆ ನಾಯ್ಡು ದಾರಿಯನ್ನೇ ತುಳಿಯಬಹುದು. ಸುಲಿಗೆ ವ್ಯವಸ್ಥೆಯ ಆರಾಧಕರೆಲ್ಲ ಒಂದೇ ಎಂದು ತಿಳಿಯುವಲ್ಲಿ ನಾವು ಯಾಮಾರಬಾರದು.

ಆಂಧ್ರದಲ್ಲಿ ಇಂದು ಬಾರಿಸಿದ್ದು ನಮಗೆ ನಾಳೆಯ ಎಚ್ಚರಿಕೆಯ ಗಂಟೆ. ಇಡೀ ದೇಶಕ್ಕೆ ಎಚ್ಚರಿಕೆಯ ಗಂಟೆ ಎನ್ನುವುದನ್ನು ನಾವು ಮರೆಯಬಾರದು.

ಆಂಧ್ರದ ಜನತೆಗೆ ಸೌಹಾರ್ದ ಬೆಂಬಲ ನೀಡುವ ಜೊತೆಗೆ ನಮ್ಮ ನಾಡಿನ ಬೆಳವಣಿಗೆಗಳನ್ನು ಪರಿಗಣಿಸಿ ಪೂರ್ವಸೂಚನೆಯಿಲ್ಲದೆ ಎರಗುವ ದಾಳಿಗಳನ್ನು ಹಿಮ್ಮೆಟ್ಟಿಸಲು ಸಜ್ಜಾಗುವುದೇ ಒಳಿತು. ಪ್ರಜಾಸತ್ತಾತ್ಮಕ ಚಳುವಳಿಯನ್ನು ಬೆಳೆಸುವುದೇ ಒಳಿತು.

ಆಗಸ್ಟ್ 31 ಕರ್ನಾಟಕದಲ್ಲಿ ಪ್ರತಿಭಟನೆ

ಆಂಧ್ರದಲ್ಲಿ ಗೋಲಿಭಾರ್ ನಡೆದ ಸಂದರ್ಭದಲ್ಲಿ ಕರ್ನಾಟಕದಲ್ಲಿ ಸಿಪಿಐ(ಎಂ) ಪಕ್ಷ ರಾಜ್ಯ ಸಮಿತಿ ಸಭೆ ಸೇರಿತ್ತು. ವಿಷಯ ತಿಳಿದ ಕೂಡಲೇ ಪಕ್ಷದ ರಾಜ್ಯ ಸಮಿತಿ ಘಟನೆಯನ್ನು ಖಂಡಿಸಿ ನಿರ್ಣಯ ಅಂಗೀಕರಿಸುವುದರ ಜೊತೆಗೆ ಆಗಸ್ಟ್ 31 ಕ್ಕೆ ಇಡೀ ರಾಜ್ಯದಲ್ಲಿ ಪ್ರತಿಭಟನಾ ದಿನ ಆಚರಿಸಲು ಕರೆ ನೀಡಿತು. ಕರೆಯ ಮೇರೆಗೆ ರಾಜ್ಯಧಾನಿ ಬೆಂಗಳೂರಿನಲ್ಲಿ ಸಿಪಿಎಂ ಹಾಗೂ ಜನತಾದಳದ ಕಾರ್ಯಕರ್ತರು ಆನಂದರಾವ್ ವೃತ್ತದಲ್ಲಿ ಗಾಂಧಿ ಪ್ರತಿಮೆ ಎದುರು ಸೇರಿ ಚಂದ್ರಬಾಬು ನಾಯ್ಡುವಿನ ಪ್ರತಿಕೃತಿ ಸುಟ್ಟುಪ್ರತಿಭಟನೆ ವ್ಯಕ್ತಪಡಿಸಿದರು.

ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕು ಕೇಂದ್ರದಲ್ಲಿ ಸಹ ಸಿಪಿಎಂ ನ ಕಾರ್ಯಕರ್ತರು ಚಂದ್ರಬಾಬುನಾಯ್ಡು ಪ್ರತಿಕೃತಿಯನ್ನು ಸುಟ್ಟರು. ಸುರಿವ ಮಳೆಯಲ್ಲಿಯೇ ಕಾರ್ಯಕ್ರಮ ಜರುಗಿತು.

ಕೋಲಾರದಲ್ಲಿ ಮುಖ್ಯಮಂತ್ರಿ ನಾಯ್ಡು ಪ್ರತಿಕೃತಿ ದಹನ ಮಾಡಲಾಯಿತು. ಜೊತೆಗೆ ಶ್ರೀನಿವಾಸಪುರ ಗುಡಿಬಂಡೆ ಬಾಗೇಪಲ್ಲಿ, ಮುಂತಾದ ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನಾ ಸಬೆಗಳನ್ನು ನಡೆಸಲಾಯಿತು. ಬಾಗೇಪಲ್ಲಿ ತಾಲ್ಲೂಕು ಕೇಂದ್ರದಲ್ಲಿ ಸುಮಾರು 300 ಜನ ಪ್ರದರ್ಶನಕಾರರು ಸೇರಿದ್ದರು.

ದಾರವಾಡದಲ್ಲಿ ಜನತಾದಳ ಎಸ್, ಸಿಪಿಐ(ಎಂ) ಜಂಟಿ ಪತ್ರಿಕಾಗೋಷ್ಠಿ ನಡೆಸಿ ಕೃತ್ಯವನ್ನು ಖಂಡಿಸಲಾಯ್ತು.

ಬಳ್ಳಾರಿಯಲ್ಲಿ ದಳ ಎಸ್ ಮತ್ತು ಸಿಪಿಐನ ಮುಖಂಡರು ಹಾಗೂ ಸಿಪಿಎಂ ಸೇರಿ ಜಂಟಿಯಾಗಿ ಪ್ರತಿಭಟನಾ ಕಾರ್ಯಕ್ರಮ ನಡೆಸಲಾಯ್ತು. ಹೊಸಪೇಟೆ ತಾಲ್ಲೂಕು ಕೇಂದ್ರದಲ್ಲಿ 300 ಜನ ಪ್ರದರ್ಶನಕಾರರು ಸಭೆ ನಡೆಸಿದರು.

ಮಂಗಳೂರಿನಲ್ಲಿ ಸಿಪಿಐ ಕಾರ್ಯದರ್ಶಿ ಬಿ.ಕೆ. ಕೃಷ್ಣಪ್ಪ ಹಾಗೂ ಸಿಪಿಎಂನ ಸುಮಾರು 200 ಕಾರ್ಯಕರ್ತರು ಸೇರಿ ಪ್ರತಿಭಟನೆ ಸಲ್ಲಿಸಿದರು.


ಕೊಡಗಿನ ಸಿದ್ದಪುರದಲ್ಲಿ ಪ್ರತಿಭಟನಾ ಸಬೆ ನಡೆಯಿತು.

ಮೈಸೂರಿನಲ್ಲಿ ದಳ ಹಾಗೂ ಸಿಪಿಎಂ ಜಂಟಿಯಾಗಿ ಪ್ರತಿಭಟನಾ ಸಭೆ ನಡೆಸಿತು. ದಳದ ಮುಖಂಡ ಬಸವಗೌಡ ಪಾಲ್ಗೊಂಡಿದ್ದರು.

ತುಮಕೂರಿನಲ್ಲಿ ಸಿಪಿಎಂನ ಕಾರ್ಯಕರ್ತರು ನಾಯ್ಡು ಪ್ರತಿಕೃತಿಯನ್ನು ಸುಟ್ಟು ಪ್ರತಿಭಟನೆ ನಡೆಸಿದರು.

ವಿಶ್ವಸಂಸ್ಥೆಯ 2000 ವರ್ಷದ ವಿಶೇಷ ವಿಶೇಷ ಅಧಿವೇಶನ

ವಿಶ್ವಸಂಸ್ಥೆಯ ಎರಡನೇಯ ಸಹಸ್ರಾಬ್ದ ಅಧಿವೇಶನದಲ್ಲಿ ನೂರಕ್ಕೂ ಹೆಚ್ಚು ದೇಶಗಳ ಅಧ್ಯಕ್ಷರು, ಪ್ರಧಾನಿಗಳು ಭಾಗವಹಿಸಿದ್ದರು. ಭಾರತದ ಪ್ರಧಾನಿ ಪಾಕಿಸ್ತಾನದೊಡನೆ ತಮ್ಮ ಜಗಳ ತೀರಿಸಿಕೊಳ್ಳಲು ಈ ವೇದಿಕೆಯನ್ನು ಬಳಸಿದರ, ಕ್ಯೂಬಾದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ, ಚೀನಾದ ಅಧ್ಯಕ್ಷ ಜಿಯಾಂಗ್ ಜೆಮಿನ್, ಜಿಂಬಾಬ್ವೆಯ ಅಧ್ಯಕ್ಷ ರಾಬರ್ಟ್ ಮುಗಾಬೆ ವಿಶ್ವದಲ್ಲಿನ ಅಸಮತೋಲ ಸ್ಥಿತಿ, ಹಣಕಾಸು ಬಂಡವಾಳದ ಆರ್ಥಿಕ ಹಿಡಿತದ ವಿರುದ್ಧ ದನಿ ಎತ್ತಿದರು.



ವಿಶ್ವಸಂಸ್ಥೆಯ ಕಾರ್ಯದರ್ಶಿ ಕೋಫಿ ಅನ್ನನ್‌ರವರು ಕ್ಯೂಬಾದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋರವರನ್ನು ಸ್ವಾಗತಿಸುತ್ತಿರುವುದು.



ವಿಶ್ವಸಂಸ್ಥೆಯ ಸಮ್ಮೇಳನದಲ್ಲಿ ಚೀನಾದ ಅಧ್ಯಕ್ಷ ಜೆಮಿನ್, ರಷ್ಯಾದ ಅಧ್ಯಕ್ಷ ಪುಟಿನ್, ಕ್ಯೂಬಾದ ಅಧ್ಯಕ್ಷ ಕ್ಯಾಸ್ಟ್ರೋ ಮೊದಲಾದವರು.



ಬಂಧು, ನೀವು ಹಾಡಿದ್ದು ನಮೆಲ್ಲರಿಗಾಗಿ

ನಿರುದ್ಯೋಗದ ವಿರುದ್ಧ ಡಿವೈಎಫ್ಐ ಸಾಂಸ್ಕೃತಿಕ ಜಾಥಾ

ಸತೀಶ್ ಕುಮಾರ್ ಶೆಟ್ಟಿ

ಬಂಧು, ಆಗ ನೀವು ಹಾಡಿದ್ದು
ನಿಮಗೊಬ್ಬರಿಗಾಗಿಯಷ್ಟೇ ಅಲ್ಲ
ನಮ್ಮೆಲ್ಲರ ಪರವಾಗಿಯೂ ಹಾಡಿದಿರಿ
ಇನ್ನು ನಾವೆಲ್ಲ ಏನು
ಮಾಡಬೇಕೆಂಬುದರ ಬಗ್ಗೆ ಸಂದೇಹವೇ
ನಮಗಿಲ್ಲ - ಏಕೆಂದರೆ
ನಿಮ್ಮ ಹಾಗೆಯೇ ನಾವೂ
ಹಾಡಲು ಶುರು ಮಾಡಬೇಕು
ಇನ್ನಷ್ಟು ಹಾಡಬೇಕು.

ಪಾಬ್ಲೋ ನೆರೂದಾ, ಚಿಲಿ ದೇಶದ ಕ್ರಾಂತಿಕಾರಿ ಕವಿ, ನೊಬೆಲ್ ಪ್ರಶಸ್ತಿ ವಿಜೇತ.

ಇದು ದ.ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ನಡೆದ ಯುವಜನರ ಸಾಂಸ್ಕೃತಿಕ ಜಾಥಾವನ್ನು ನೋಡಿದವರಿಗೆ ನೆನಪಿಗೆ ಬರುವ ಸಾಲುಗಳು. ನಿರುದ್ಯೋಗದ ಬಗ್ಗೆ ನಿರುದ್ಯೋಗಕ್ಕೆ ಕಾರಣವಾದ ಪರಿಸ್ಥಿತಿಯ ಬಗ್ಗೆ ಯುವಜನರಲ್ಲಿ ಅರಿವು ಹಾಗೂ ಎಚ್ಚರವನ್ನು ಮೂಡಿಸುವ ಈ ಕಾರ್ಯಕ್ರಮ ಹಾಗೂ ಅದಕ್ಕೆ ಜನರು ಸ್ಪಂದಿಸಿದ ರೀತಿಯ ಬಗ್ಗೆ ಒಂದು ವರದಿ.

ಅಂದು ಆಗಸ್ಟ್ 22, ಕುಂದಾಪುರದ ಎನ್‌ಜಿಒ ಸಭಾಂಗಣದಲ್ಲಿ ಜಾಥಾದ ಸಮಾರೋಪ ಸಮಾರಂಭ. ಮುಖ್ಯ ಅತಿಥಿ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ತಮ್ಮ ಭಾಷಣದ ಆರಂಭದಲ್ಲೇ ಚಿಲಿಯ ಪಾಬ್ಲೋ ನೆರೂದಾರ ಕವನಗಳನ್ನು ನೆನಪಿಸುವ ಮೂಲಕ ಆಂದೋಲನದ ಮಹತ್ವವನ್ನು ಅರ್ಥಪೂರ್ಣವಾಗಿ ವಿವರಿಸಿದರು.

ಈಗ ಬಂದಿದೆ ಕಾಲ
ಗಂಭೀರ ಗುಲಾಬಿಯ ಕಿತ್ತೆಸೆಯಲು
ಎಚ್ಚೆತ್ತವರ ಜೊತೆ ಏಳಬೇಕು
ಇಲ್ಲವೇ ಕನಸಿನ ಕನವರಿಕೆಗಳೊಂದಿಗೆ
ಸಾಗಬೇಕು.

ಕಾವ್ಯದ ಈ ಭಾಗ ಸಮಾರಂಭಕ್ಕೆಂದೇ ಜೋಡಿಸಿಟ್ಟಂತಿತ್ತು. ಏಕೆಂದರೆ ಇಂದಿನ ವಾಸ್ತವ ಪರಿಸ್ಥಿತಿ ಹಾಗಿದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಕ್ರಿಯೆಯಿಂದಾಗಿ ಭಾರತದ ಆರ್ಥಿಕತೆ ಪ್ರಪಾತಕ್ಕಿಳಿದಿದೆ. ಉಳ್ಳವರ ಹಾಗೂ ಇಲ್ಲದವರ ನಡುವಿನ ಕಂದರ ಹೆಚ್ಚಾಗುತ್ತಿದೆ. ಶೋಷಕರು ಇನ್ನಷ್ಟು ಉಗ್ರವಾಗಿ ನಿರ್ದಯವಾಗಿ ಶೋಷಿಸುತ್ತಿದ್ದಾರೆ. ಹೊಸ ಹೊಸ ತಂತ್ರಜ್ಞಾನ, ವಿಜ್ಞಾನಗಳನ್ನು ಮತ್ತು ಆಧುನಿಕ ಉತ್ಪಾದನಾ ವಿಧಾನಗಳನ್ನು ಕಾರ್ಮಿಕರ ಶೋಷಣೆಗೆ ಪರಿಣಾಮಕಾರಿಯಾಗಿ ಬಳಸುತ್ತಿದ್ದಾರೆ. ಕಾರ್ಮಿಕರು ರೈತರು, ಯುವಜನರು, ಮಹಿಳೆಯರು, ವಿದ್ಯಾರ್ಥಿಗಳು ತಮ್ಮ ಮೇಲಾಗುತ್ತಿರುವ ವಿವಿಧ ಧಾಳಿಗಳಿಂದ ಕಂಗಾಲಾಗಿದ್ದಾರೆ. ಕೇಂದ್ರ ಸರ್ಕಾರ ಅನುಸರಿಸುತ್ತಿರುವ ನೀತಿಗಳು ಸಾಗರದ ತೆರೆಗಳಂತೆ ಒಂದರ ಮೇಲೊಂದರಂತೆ ಅಪ್ಪಳಿಸುತ್ತಾ ಶೋಷಿತ ಜನತೆಯನ್ನು ದಿಗ್ಭ್ರಮೆರನ್ನಾಗಿ ಮಾಡುತ್ತಿವೆ.

ಇದೆಲ್ಲದರ ಪರಿಣಾಮವಾಗಿ ನಿರುದ್ಯೋಗ ಭೂತಾಕಾರವಾಗಿ ಬೆಳೆದು ನಿಂತಿದೆ. ಸರಕಾರಿ ನೌಕರರು, ಬ್ಯಾಂಕು, ಎಲ್‌ಐಸಿ ನೌಕರರು, ಸಾರ್ವಜನಿಕ ರಂಗದ ಕಾರ್ಮಿಕರು ತಮ್ಮ ಕೆಲಸಕಳೆದುಕೊಳ್ಳುತ್ತಿದ್ದಾರೆ. ಉದ್ಯೋಗಿಗಳೂ ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗಿಗಳಾಗುತ್ತಿದ್ದಾರೆ. ಕೆಲಸದ ಅಭದ್ರತೆ ಎಲ್ಲರನ್ನು ಕಾಡುತ್ತಿದೆ. ಪ್ರತಿವರ್ಷ ಶಾಲಾ ಕಾಲೇಜಿನಿಂದ ಹೊರಬರುತ್ತಿರುವ ಲಕ್ಷಾಂತರ ವಿದ್ಯಾರ್ಥಿಗಳು ಸೂಕ್ತ ಕೆಲಸವಿಲ್ಲದೆ ಬದುಕಿನ ಹಪಹಪಿಕೆಯಲ್ಲಿದ್ದಾರೆ. ಇಂದು ದೇಶದ ಪ್ರತೀ ಮೂರು ಪ್ರಜೆಗಳಲ್ಲಿ ಒಬ್ಬ ನಿರುದ್ಯೋಗಿ. ಈ ಕ್ರೂರ ವಾಸ್ತವ ಸಮಸ್ಯೆಯ ನೈಜ ಗಂಭೀರತೆಯನ್ನು ಬಿಚ್ಚಿಡುತ್ತದೆ.

ಡಿವೈಎಫ್ಐ, ಎಸ್‌ಎಫ್ಐ ಇಂದು ದೇಶಾದ್ಯಂತವಾಗಿ ನಿರುದ್ಯೋಗದ ವಿರುದ್ಧ ಮತ್ತು ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ವ್ಯಾಪಕ ಜನಾಂದೋಲನವನ್ನು ರೂಪಿಸುತ್ತಿದೆ. 26 ಕೋಟಿ ಜನಗಳನ್ನು ಬಾಧಿಸುತ್ತಿರುವ ಈ ಸಮಸ್ಯೆಯನ್ನು ಕೈಗೆತ್ತಿ ಹಲವಾರು ಹಂತಗಳಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮ ಆಳುವ ವರ್ಗಗಳ ಜನವಿರೋಧಿ ನೀತಿಗಳನ್ನು ಬಿಚ್ಚಿಟ್ಟು ನಗ್ನಗೊಳಿಸುವಲ್ಲಿ ಯಶಸ್ವಿಯಾಗಿದೆ. "ನಾವು ಎಚ್ಚೆತ್ತ ದೇಶಪ್ರೇಮಿ ಯುವಜನರು, ನಮ್ಮೊಂದಿಗೆ ನೀವೂ ಎದ್ದೇಳಬೇಕು. ಇಲ್ಲವೇ ಕನಸಿನ ಕನವರಿಕೆಯೊಂದಿಗೆ ಸಾಗಬೇಕು" ಎಂದು ಈ ಹೋರಾಟದ ಸಾಗರಕ್ಕೆ 26ಕೋಟಿ ನಿರುದ್ಯೋಗಿಗಳನ್ನು ಬೆಸೆಯಬೇಕಾಗಿದೆ.

ಆಗಸ್ಟ್ 15 ರಿಂದ 22 ರವರೆಗೆ ಮಂಗಳೂರಿನ ತೊಕ್ಕೊಟ್ಟಿನಿಂದ ಕುಂದಾಪುರದವರೆಗಿನ ಎಂಟು ದಿನಗಳ ಯುವಜನ ಸಾಂಸ್ಕೃತಿಕ ಕಲಾ ಜಾಥಾ ಈ ಹೋರಾಟದ ಸಣ್ಣ ತೊರೆಗಳಲ್ಲೊಂದು. ಆದರೆ ದ.ಕ.-ಉಡುಪಿ ಜಿಲ್ಲೆಯಾದ್ಯಂತ ಸಂಚರಿಸಿ ಸುಮಾರು 100 ಕ್ಕೂ ಮಿಕ್ಕಿ ಕಾರ್ಯಕ್ರಮಗಳನ್ನು ನೀಡಿ ಲಕ್ಷಾಂತರ ಜನರೊಂದಿಗೆ ಸಂವಹನೆ ನಡೆಸುವಲ್ಲಿ ಈ ಜಾಥಾ ಯಶಸ್ವಿಯಾಗಿದೆ.

ಸ್ವಾತಂತ್ರ್ಯ ಚಳುವಳಿಗೆ ಕ್ರಾಂತಿಕಾರಿಕೊಡುಗೆಗಳನ್ನು ನೀಡಿದ ವೀರ ರಾಣಿ ಅಬ್ಬಕ್ಕ ಅವರ ಹುಟ್ಟೂರಾದ ತೊಕ್ಕೊಟ್ಟಿನ ಅಂಬೇಡ್ಕರ್ ಮೈದಾನದಿಂದ ಹೊರಟ ಯುವಜನರ ಭವ್ಯ ಮೆರವಣಿಗೆ ತೊಕ್ಕೊಟ್ಟು ಮುಖ್ಯ ಪೇಟೆಯಲ್ಲಿ ನೆರೆಯಿತು. ಬ್ಯಾಂಡ್, ವಾದ್ಯ, ಪಟಾಕಿಗಳ ಸದ್ದು ಮೆರವಣಿಗೆಯನ್ನು ಇನ್ನೂ ಆಕರ್ಷಕವಾಗಿ, ವೈಭವಯುತವನ್ನಾಗಿ ಮಾಡಿತು. ಈ ಮೆರವಣಿಗೆ ಮೂಲಕ ಜಾಥಾ ತನ್ನ ಎಂಟು ದಿನಗಳ ಪಯಣ ಆರಂಭಿಸಿತು.

ಜಾಥಾವನ್ನು ಉದ್ಘಾಟಿಸಿ ಮಾತನಾಡಿದ ಡಿವೈಎಫ್ಐ ರಾಜ್ಯ ಉಪಾಧ್ಯಕ್ಷ ಎಸ್.ವೈ.ಗುರುಶಾಂತ್ ಜಾಥಾದ ಮಹತ್ವವನ್ನು ವಿವರಿಸಿದರು. ಹಿರಿಯಕಾರ್ಮಿಕ ಮುಖಂಡ ಬಿ.ಮಾಧವ ಶುಭಾಶಯ ವ್ಯಕ್ತಪಡಿಸಿದರು.

ನಿರುದ್ಯೋಗದ ವಿರುದ್ಧ ಚಳುವಳಿಯಾಗಿರುವ ಈ ಜಾಥ ಪಯಣಿಸಿದ ಎಂಟು ದಿನಗಳೂ ವಿಭಿನ್ನ ವರ್ಣರಂಜಿತ ಅನುಭವಗಳು, ಜನಗಳ ಪ್ರತಿಕ್ರಿಯೆಗಳೊಂದಿಗೆ ಸಮೃದ್ಧ ನೆನಪುಗಳನ್ನು ತನ್ನ ಮಡಿಲಿನಲ್ಲಿ ಇರಿಸಿಕೊಂಡಿತು.

ಮನಮಿಡಿಯುವ ಹೃದಯಸ್ಪರ್ಶಿ ಸ್ವಾಗತ, ತುಂಬಿದ ಹೃದಯಗಳ ಪ್ರೋತ್ಸಾಹ ಜಾಥಾ ತಂಡದ ಉತ್ಸಾಹ, ಸ್ಫೂರ್ತಿಯನ್ನು ನೂರ್ಮಡಿಗೊಳಿಸಿತ್ತು, ಈ ಪ್ರತಿಕ್ರಿಯೆಯಿಂದ ಕಲಾವಿದರ ನಟನೆಗೆ ಹೊಸ ವೇಗ, ಚಲನೆ ಬಂತು. ಹಾಡುಗಾರರ ಕಂಠದಿಂದ ಮೊಳಗಿದ ಬಲಿಷ್ಠ ಆವೇಶಭರಿತ ಕ್ರಾಂತಿಗೀತೆಗಳು ಬಾನೆತ್ತರಕ್ಕೆ ಚಿಮ್ಮಿದವು. ಜನಗಳನ್ನು ಚಳುವಳಿಯೊಂದಿಗೆ ಬೆಸೆದುಕೊಳ್ಳಲು ವಾತಾವರಣ ಕಲ್ಪಿಸುವ ಮೂಲಕ ಹೊಸ ಆಶಾವಾದವನ್ನು ಮೂಡಿಸಿತು.

ಅಂತರ್ರಾಷ್ಟ್ರೀಯ ಖ್ಯಾತಿಯ ಪ್ರಗತಿಪರ ಕವಿ ಮಖ್ದೂಂ ಮೊಹಿಯುದ್ದೀನರ ಕಾವ್ಯದ ಈ ಸಾಲುಗಳು ಆಶಾವಾದಿ ಮನಸುಗಳಿಗೆ ಕನ್ನಡಿ ಹಿಡಿದಂತಿದೆ.

ರಾತ್ರಿಗೆ ಕತ್ತಲೆಯನ್ನುಳಿದು
ಕೂಡಲು ಇನ್ನೇನಿಲ್ಲ
ಇರುಳಿನ ಹಣೆಯ ಮೇಲೆ ಸೇರಿದ ಈ ವ್ಯಾಕುಲ
ನಕ್ಷತ್ರಗಳು, ಶುಭ್ರ ಸೂರ್ಯನ
ಬರವಿನೊಂದಿಗೆ ಕಣ್ಮರೆಯಾಗುತ್ತದೆ.

ಜಿಲ್ಲೆಯ ಜನತೆ ನೆಟ್ಟ ಕಣ್ಣುಗಳಿಂದ ಜಾಥಾವನ್ನು ನೋಡಿದ್ದಾರೆ. ತೆರೆದ ಕಿವಿಗಳಿಂದ ಜಾಥಾ ಸಂದೇಶ ಕೇಳಿದ್ದಾರೆ. ಭಿನ್ನ ಭಿನ್ನವಾಗಿ ಹೃದಯಸ್ಪರ್ಶಿಯಾಗಿ ಸ್ಪಂದಿಸಿದ್ದಾರೆ ಕೂಡ.

ನಮ್ಮೆಲ್ಲರ ನಿರೀಕ್ಷೆಗೂ ಮೀರಿ ಈ ಜಾಥಾವನ್ನು ಸ್ವಾಗತಿಸಿದ ರೀತಿ ನಮ್ಮನ್ನೇ ದಂಗುಬಡಿಸಿದವು. ಕೇವಲ ಆರು ತಿಂಗಳ ಹಿಂದೆಯಷ್ಟೆ ಅಸ್ತಿತ್ವಕ್ಕೆ ಬಂದ ಅದ್ಯಪಾಡಿ(ಬಜ್ಪೆ ವಿಮಾನ ನಿಲ್ದಾಣದ ಹತ್ತಿರ) ಘಟಕ ಊರಿನ ಉತ್ಸವ ಎಂಬಂತಹ ವಾತಾವರಣ ನಿರ್ಮಿಸಿ ಜಾಥಾವನ್ನು ಸ್ವಾಗತಿಸಿತು. ದ್ವಿಚಕ್ರ ವಾಹನ, ಜೀಪ್, ರಿಕ್ಷಾಗಳಿಂದ ಕೂಡಿದ ಮೆರವಣಿಗೆಯ ಮೂಲಕ ಜಾಥಾವನ್ನು ಬಜ್ಪೆ ಜಂಕ್ಷನ್‌ನಿಂದ ಸಮೀಪದ ಅದ್ಯಪಾಡಿಗೆ ಕೊಂಡೊಯ್ದಿತು. ಆಕರ್ಷಕವಾಗಿ ವಿದ್ಯುದ್ದೀಪಾಲಂಕೃತ ವೇದಿಕೆ ಕಾರ್ಯಕ್ರಮಕ್ಕೆ ಸಜ್ಜಾಗಿ ನಿಂತಿತ್ತು. ಜಾಥಾ ತನ್ನ ಕಾರ್ಯಕ್ರಮಕ್ಕಿಂತ ಎರಡು ಗಂಟೆಗಳಷ್ಟು ತಡವಾಗಿ ಬಂದಿದ್ದರೂ ಜನ ಕದಲದೆ ನಿಂತು ಕಾದರು. ಊರಿಗೆ ಊರೇ ನೆರೆದ ಈಜನ ಸಾಗರದ ಮಧ್ಯೆ ಬೀದಿ ನಾಟಕ, ಜಾಥಾ ಸಂದೇಶ ನೀಡಲಾಯಿತು. ಜಾಥಾದ ಕಾರ್ಯಕ್ರಮವನ್ನು ರಾತ್ರಿ 12.00 ರ ವರೆಗೂ ವೀಕ್ಷಿಸಿದರು. ಪಂಚಾಯತ್ ಉಪಾಧ್ಯಕ್ಷರು, ಊರಿನ ಗಣ್ಯರ ಇರುವಿಕೆ ಕಾರ್ಯಕ್ರಮದ ತೂಕವನ್ನು ಇನ್ನಷ್ಟು ಹೆಚ್ಚಿಸಿತು.

ಹರೇಕಳ ಎಂಬಲ್ಲಿನ ಜನತೆ ಸ್ವಾಗತಿಸಿದ ರೀತಿಯನ್ನು ಜಾಥಾ ತಂಡ, ತನ್ನ ಎಂಟು ದಿವಸಗಳಲ್ಲೂ ಮೆಲುಕು ಹಾಕಿತು. ಅಲ್ಲಿನ ಸಂಗಾತಿಗಳು ತಮ್ಮ ಮನೆಯಿಂದ ಒಂದೊಂದು ವಸ್ತುವನ್ನು ಪೂರೈಸುವ ಮೂಲಕ ವಿಭಿನ್ನತೆ ತೋರಿದರು. ತಂಗುವ ವ್ಯವಸ್ಥೆ, ಚಾ, ಬಗೆಬಗೆಯ ತಿಂಡಿ, ಊಟದ ವ್ಯವಸ್ಥೆ ಸ್ನಾನ ಇತ್ಯಾದಿ. ಹೀಗೆ ಪ್ರತಿಯೊಂದರಲ್ಲಿ ಎಲ್ಲರ ಸಾಮೂಹಿಕ ಪಾಲ್ಗೊಳ್ಳುವಿಕೆ, ಸಂಗಾತಿಯೊಬ್ಬರು ತಮ್ಮ ಹಾಗೂ ಸಂಬಂಧಿಕರ ಮೂರು ಮನೆಗಳನ್ನು ಜಾಥಾ ತಂಡದ ತಂಗುವಿಕೆಗೆ ಒದಗಿಸಿದರು. ಸಾಲದೆಂಬಂತೆ ಹಾಸಿಗೆ, ಹೊದಿಕೆ ತಲೆದಿಂಬು ಒದಗಿಸಿದರು. ಮನೆಯವರು ಮಾತ್ರ ಬರಿ ಮೈಯಲ್ಲಿ ನೆಲದ ಮೇಲೆ ಮಲಗಿದರು. ಇವರ ಅರ್ಪಣಾ ಮನೋಭಾವ ಜಾಥಾ ತಂಡಕ್ಕೆ ಒಂದು ಸ್ಫೂರ್ತಿಯಾಗಿ ಕೊನೆಯವರೆಗೂ ಉಳಿಯಿತು.

ಮೂಡಬಿದಿರೆಯ ಮಹಿಳಾ ಕಾರ್ಮಿಕ ನಾಯಕಿಯೊಬ್ಬರು ತಮ್ಮ ಮನೆಯನ್ನು 24 ಮಂದಿ ಜಾಥಾ ತಂಡದ ಸದಸ್ಯರಿಗೆ ಒದಗಿಸಿದರು. ಇಡೀ ತಂಡವೇ ಅಲ್ಲಿ ತಂಗಿತು.

ಪಜೀರು ಘಟಕದ ಸಂಗಾತಿಗಳು ಊರಿನ ಗ್ರಾಮಸ್ಥರನ್ನು ಸೇರಿಸಿ ಅದ್ದೂರಿಯಾಗಿ ಜಾಥಾವನ್ನು ಇದಿರುಗೊಂಡರು. ಅದೇ ರೀತಿ ಅಸೈಗೋಳಿ, ಕುತ್ತಾರು, ಉಳ್ಳಾಲ ಎಲ್ಲ ಕಡೆಯೂ ಉತ್ತಮ ಸ್ವಾಗತ.

ಮೂರನೇ ದಿನ ಜಾಥಾ ಮಂಗಳೂರು ನಗರ ಪ್ರವೇಶಿಸಿತು. ಪ್ರವೇಶ ದ್ವಾರದಲ್ಲೇ ಮಂಗಳೂರು ನಗರ ಸಮಿತಿ ಬೆಳಿಗ್ಗೆ 8.00 ಗಂಟೆಗೆ ಸ್ವಾಗತಿಸಿತು. ಜಪ್ಪಿನ ಮೊಗರು, ಮಂಗಳಾದೇವಿ, ಜಪ್ಪು ಮಾರ್ಕೆಟ್, ಸ್ಟೇಟ್‌ಬ್ಯಾಂಕ್, ದಕ್ಕೆ, ಸೆಂಟ್ರಲ್ ಮಾರ್ಕೆಟ್, ಜ್ಯೋತಿ, ಬಂದರು ಮೊದಲಾದೆಡೆ



ಜಾಥಾ ತನ್ನ ಕಾರ್ಯಕ್ರಮ ನೀಡಿತು. ಬಜಾಲ್, ನಕ್ಕಡ್ಕ, ಉರ್ವಸ್ಟೋರಗಳಲ್ಲದೆ ನಾಲ್ಕನೇ ದಿನ ಕೊಂಚಾಡಿ, ಮಲ್ಲಿಕಟ್ಟೆ, ಶಕ್ತಿನಗರ, ಕಾವೂರು, ಕುಂಜತ್ತಬೈಲ್ ಕೊನೆಗೆ ಅದ್ಯಪಾಡಿಗಳಲ್ಲೂ ಜಾಥಾ ಸಂಚರಿಸಿತು.

ಎಲ್ಲಾ ಕಡೆಗಳಲ್ಲೂ ಅದ್ದೂರಿಯ ಸ್ವಾಗತ, ಪಂಜಿಮೊಗರು ಘಟಕ ಹೂವಿನ ಮಳೆಗರೆದು ವಿನೂತನ ಸ್ವಾಗತ ನೀಡಿತು. ಘಟಕದ ಗಡಿ ಪ್ರವೇಶಿಸುತ್ತಿದ್ದಂತೆ ಆಗಸದಿಂದ ಸುರಿದ ಪುಷ್ಪಧಾರೆ ಕಲಾ ತಂಡದ ಶಿರದಮೇಲೆ ಜಿನುಗಿತು. ಉಳಿದ ಘಟಕಗಳು ಸುಂದರ ಕೆಂಪು ಗುಲಾಬಿಯನ್ನು ತಂಡದ ಪ್ರತೀ ಸದಸ್ಯರಿಗೆ ನೀಡುವ ಮೂಲಕ ಜಾಥಾ ತಂಡವನ್ನು ಆತ್ಮೀಯವಾಗಿ ಬರಮಾಡಿಕೊಂಡವು.

ಕುಪ್ಪೆಪದವಿನಲ್ಲಿ ಕೆಂಪು ರಿಬ್ಬನ್‌ನ ಮೇಲೆ ಸ್ವಾಗತ ಕೋರಿದರೆ, ಅಲ್ಲಿಗೆ ಸಮೀಪದ ಮತ್ತೂರು ಘಟಕ ಬಿಳಿಯ ಕೈಪಟ್ಟಿ ಒದಗಿಸಿತು. ಬೆಳ್ತಂಗಡಿಯಲ್ಲಿ ರೈತರು, ಕಾರ್ಮಿಕರು, ಯುವಜನರು ಭರ್ಜರಿಸ್ವಾಗತ ನೀಡಿದರು. ಕಾರ್ಕಳ, ಉಡುಪಿ, ಹಳೆಯಂಗಡಿಗಳಲ್ಲಿ ಎಸ್‌ಎಫ್‌ಐ ಸಂಗಾತಿಗಳು ಜಾಥಾಕ್ಕೆ ಸ್ವಾಗತ ನೀಡಿದರು. ಕೊಡವೂರಿನಲ್ಲಿ ಯುವಕ ಮಂಡಳ ಹಾಗೂ ಹಳೆ ವಿದ್ಯಾರ್ಥಿ ಸಂಘಗಳು, ಕುಂದಾಪುರದ ವಕ್ವಾಡಿಯಲ್ಲಿ ಟೈಲ್ ವರ್ಕರ್ಸ್ ಯೂನಿಯನ್ ಕಾರ್ಯಕ್ರಮವನ್ನು ಪ್ರಾಯೋಜಿಸಿತು. ಬೆಟ್ಟಾಗರ ಘಟಕ ಕೆಂಪು ಗುಲಾಬಿ ನೀಡಿ ಘೋಷಣೆಗಳೊಂದಿಗೆ ಬರಮಾಡಿದರು.

ಪಡುಕೋಣೆ, ಬಸ್ರೂರು, ಬಳ್ಕೂರುಗಳಲ್ಲಿ ಜಾಥಾಕ್ಕೆ ಉತ್ತಮ ಪ್ರತಿಕ್ರಿಯೆ ದೊರಕಿತು. ಜಾಥಾ ಹೆಚ್ಚಿನೆಡೆ ತಲುಪುವುದು ವಿಳಂಬವಾಗುತ್ತಿದ್ದರೂ ಜನ ಕಾದು ಕುಳಿತು ಸ್ವಾಗತಿಸುತ್ತಿದ್ದರು. ಜಾಥಾದ ಸಮಾರೋಪ ಕುಂದಾಪುರದ ಹೃದಯಭಾಗದಲ್ಲಿರುವ ಎನ್‌ಜಿಒ ಸಭಾಂಗಣದಲ್ಲಿ ನಡೆಯಿತು.

ಜಾಥಾದುದ್ದಕ್ಕೂ ರಾಜ್ಯ ನಾಯಕರಾದ ಎಸ್.ವೈ.ಗುರುಶಾಂತ್, ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ರಾಜ್ಯಜೊತೆ ಕಾರ್ಯದರ್ಶಿ ವಿಠ್ಠಲ್ ಭಂಡಾರಿ, ಜಿಲ್ಲಾಧ್ಯಕ್ಷ ಕೃಷ್ಣಪ್ಪ ಕೊಂಚಾಡಿ, ವಸಂತ ಆಚಾರಿ, ಕೆ.ಯಾದವಶೆಟ್ಟಿ, ನಾಗೇಶ್ ಕುಮಾರ್, ಅರುಣ್ ಕುಮಾರ್ ಉಳ್ಳಾಲ್, ಸುಕೇಶ್ ಕುಮಾರ್ ಶೆಟ್ಟಿ ಮೊದಲಾದವರು ಭಾಗವಹಿಸಿದ್ದರು.

ಪುಸ್ತಕ ಮಾರಾಟ

ಜಾಥಾ ಅಂಗವಾಗಿ ಪುಸ್ತಕ ಮಾರಾಟವನ್ನು ಹಮ್ಮಿಕೊಳ್ಳಲಾಗಿತ್ತು. ಇದು ಕೂಡ ಭಾರಿ ಯಶಸ್ವಿಯಾಯಿತು. ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ವೈಜ್ಞಾನಿಕ, ಪ್ರಗತಿಪರ, ಎಡಚಿಂತನೆಯ ಪುಸ್ತಕಗಳು ಮಾರಾಟಗೊಂಡವು. ಪುರೋಗಾಮಿ, ಎಡ ಪ್ರಗತಿಪರ ಸಾಹಿತ್ಯವು ಜನರೆಡೆಗೆ ತಲುಪಿಸುವಲ್ಲಿ ಜಾಥಾ ಸಹಕಾರಿಯಾಯಿತು. ಗ್ರಾಮಾಂತರ ಪ್ರದೇಶದ ಜನತೆ ಮಾರ್ಕ್ಸ್, ಲೆನಿನ್, ಎಂಗೆಲ್ಸ್‌ರ ಪುಸ್ತಕಗಳನ್ನು ಮುಗಿಬಿದ್ದುಕೊಂಡರು. ಇದು ಓದುವ ಆಸಕ್ತಿಯನ್ನು ತೋರಿಸುತ್ತದೆ. ಕೆಲವರಂತೂ ಪುಸ್ತಕಗಳನ್ನು ತೆಗೆದಿರಿಸಿ ಬಳಿಕ ಮನೆಯಿಂದ ಹಣತಂದು ಕೊಂಡೊಯ್ದಿದ್ದಾರೆ.

ಜಾಥಾಕ್ಕೆ ಸಹಕರಿಸಿದ ಪೋಲೀಸ್ ಇಲಾಖೆ ಮಂಗಳೂರು, ಕಾರ್ಕಳ, ಉಡುಪಿ ಮುಂತಾದೆಡೆಗಳಲ್ಲಿ ಕಾರ್ಯಕ್ರಮ ನೀಡಿದಾಗ ರಕ್ಷಣೆ ಒದಗಿಸಿತು.

ಒಟ್ಟಿನಲ್ಲಿ ಜಾಥಾವು ಜಿಲ್ಲೆಯ ಯುವಜನ ಚಳುವಳಿಯಲ್ಲಿ ಹೊಸ ಸಾಧ್ಯತೆಗಳನ್ನು ತೋರಿಸಿಕೊಟ್ಟಿತು. ಜನಪರ, ಪ್ರಗತಿಪರ ವಿಚಾರಧಾರೆಗಳನ್ನು ಜನ ಖಂಡಿತ ಒಪ್ಪುತ್ತಾರೆ. ಈ ನಿಟ್ಟಿನಲ್ಲಿ ಸಂಘಟನೆಯನ್ನು ಜನ ಸ್ವೀಕರಿಸುತ್ತಾರೆ ಎಂದು ಜಾಥಾ ಸಾರಿ ಹೇಳಿದೆ. ○

ಜಾಥಾ ತಂಡದ ಕುರಿತಾಗಿ

ಇವರ ಬಗ್ಗೆ ಎಷ್ಟು ಹೇಳಿದರೂ ಸಾಲದು. ಯುವಜನ ಚಳುವಳಿಯೊಂದಿಗೆ ಕಲಾವಿದರಾಗಿ ಬೆಳೆದ ಇವರು ಜಾಥಾದೊಂದಿಗೆ ಇನ್ನಷ್ಟು ಬೆಳೆದಿದ್ದಾರೆ. ಹೊಸ ಎತ್ತರಕ್ಕೆ ಏರಿದ್ದಾರೆ. ಪ್ರತಿಯೊಬ್ಬರೂ ಅತ್ಯಂತ ಶ್ರಮವಹಿಸಿ ದುಡಿದಿದ್ದಾರೆ. ವಾರಗಳಷ್ಟು ಕಾಲ ಮನೆಯ ಮುಖವನ್ನೂ ನೋಡದೆ, ನಿದ್ರೆ ಬಿಟ್ಟ ಕಣ್ಣುಗಳು, ಹಸಿವುಗಳನ್ನು ನುಂಗಿದ ಹೊಟ್ಟೆ, ಆಯಾಸದಿಂದ ತೂಕಡಿಸುತ್ತಿದ್ದರೂ ಎಲ್ಲವನ್ನೂ ಬದಿಗಿಟ್ಟು ಒದ್ದಾಡಿ ಕೊನೆಗೂ ಜಾಥಾದ ಯಶಸ್ಸನ್ನು ಕಂಡು ಸಂತೋಷದಿಂದ ಕುಣಿದಾಡಿದ್ದಾರೆ.

"ಜಾಥಾ ಇಷ್ಟು ಯಶಸ್ಸು ಕಾಣುತ್ತದೆ ಎಂದು ನಾವು ಎಣಿಸಿರಲಿಲ್ಲ. ನಿಜಕ್ಕೂ ಇದು ನಮಗೆ ಹೊಸ ಅನುಭವ, ಹೊಸ ಸ್ಫೂರ್ತಿಯನ್ನು ನೀಡಿದೆ" ಎನ್ನುತ್ತಾರೆ ಕಲಾವಿದರು.

ಜಾಥಾ ಸಮಾರೋಪಗೊಂಡಾಗ ತಂಡದ ಪ್ರತಿ ಸದಸ್ಯರಲ್ಲಿ ಬೆಚ್ಚಗಿನ ಅನುಭವಗಳು ಮಡಿಲಿನ ತುಂಬಾ ಇದ್ದವು. ನೆನಪುಗಳು ಹಂಚಲು ಬೇಕಾದಷ್ಟಿದ್ದವು. ಮಾತುಗಳು ಮುಗಿಯದಾದವು. ಆಗಿನ ಅವರ ಪಾಡು ಅವರೇ ಬಲ್ಲರು. ಕಣ್ಣಂಚುಗಳು ನೆನೆದಿದ್ದರೂ ತೋರ್ಪಡಿಸಲಾರರು. ಮನಸಾರೆ ನಕ್ಕರೂ ಒಳಗೆ ಅಗಲುವಿಕೆಯ ನೋವು, ವೇದನೆ ಮನೆ ಮಾಡಿತು. ಒಂದೆ ತಟ್ಟೆಯಲ್ಲಿ ಊಟ ಮಾಡಿ ಭಾವನಾತ್ಮಕವಾಗಿ ಆತ್ಮೀಯತೆಯನ್ನು ಹೊಂದಿದ್ದ ಅವರುಗಳು ಸಮೃದ್ಧ ಅನುಭವಗಳೊಂದಿಗೆ 10-15 ದಿನ ಕಷ್ಟಸುಖಗಳನ್ನು ಒಟ್ಟಿಗೆ ಉಂಡಿದ್ದರು. ಪರಸ್ಪರ ಅಗಲುವುದು ಎದೆಯಾಳದ ವೇದನೆ.

ಕ್ಯೂಬಾ ಕ್ರಾಂತಿಯ ಯಶಸ್ಸಿನ ಬಳಿಕ, ಒಂದಾಗಿ ದಶಕಗಳ ಕಾಲ ದುಡಿದ ಗ್ವಾಟೆಮಾಲಾದ ಕವಿ ಪಟೋಜೋ, ಕ್ರಾಂತಿಯ ಕರೆ ಬಂದಾಗ ತನ್ನ ಸಂಗಾತಿ ಚೆಗೆವಾರನನ್ನು ಅಗಲಲೆ ಬೇಕಿತ್ತು. ಆಗ ಆತನಿಗಾಗಿ ಒಂದು ಕವಿತೆಯನ್ನೇ ಬರೆದ. ಅದನ್ನು ಬಹುಕಾಲ 'ಚೆ' ತನ್ನ ಪ್ರೀತಿಯ ಪತ್ನಿಗೆ ತೋರಿಸುತ್ತಾ ತನ್ನ ಸಂಗಾತಿಯ ನೆನಪು ಮಾಡಿಕೊಳ್ಳುತ್ತಿದ್ದ.

ಹಿಡಿ ಇದನ್ನು, ನನ್ನ ಹೃದಯಕ್ಕಿಂತ
ಹೆಚ್ಚೇನೂ ಇಲ್ಲ. ತೆಗೆದುಕೋ
ನಿನ್ನ ಕೈಯಲ್ಲಿ ಏಕೆಂದರೆ, ಆ
ಒಂದು ದಿನ ಬಂದಾಗ
ನಿನ್ನ ಕೈ ತೆರೆದಿಡು
ಸೂರ್ಯನು ಅದನ್ನಷ್ಟು ಬೆಚ್ಚಗಿರಿಸುವನು.

ಜನರ ಪ್ರತಿಕ್ರಿಯೆ-ಸ್ವಾಗತ

ಯಾರಿಂದಲೋ ಸಾಲವಾಗಿ ತಂದ ನೂರು ರೂಪಾಯಿಗಳಿಂದ ಕರಪತ್ರಗಳನ್ನು ಅಚ್ಚು ಹಾಕಿಸಿ ದುಡಿಯುವ ಜನತೆ, ಶೋಷಿತರಿಗೆ ವಿತರಿಸಿದ ಸಾಮಾನ್ಯ ಮನುಷ್ಯನೊಬ್ಬ ಪುನ್ನಪ್ರ ವಯಲಾರ್ ಸಮರಕ್ಕೆ ಅಡಿಗಲ್ಲು ಹಾಕಿ ಇತಿಹಾಸ ನಿರ್ಮಿಸಿದ. ಹೌದು, ಆತನೇ ಸೈಮನ್ ಆಶಾನ್. ಸ್ವತಂತ್ರ ಚಳುವಳಿಯ ಧೀರ ಹೋರಾಟಗಳಲ್ಲೊಂದಾದ ಪುನ್ನಪ್ರ ವಯಲಾರ್ ಸಮರದ ಕನಸುಗಳ ಭ್ರೂಣ.

ಮತ್ತೊಮ್ಮೆ ನಾನೆದ್ದು ನಡೆಯುವೆ
ಮಗದೊಮ್ಮೆ ನಾನೆದ್ದು ನಡೆಯುವೆ
ಈ ನಾಡಿನ ತುಂಬ
ನೀಡುವೆ ಹೊಸ ಜೀವ
ಈ ನಾಡಿಗೆ,
ಎದ್ದು ಬರುವ ಈ ನಾಡಿಗೆ ನಾನು.

ಕುಮಾರ್ ಆಶಾನ್‌ನ ಆಶಯಗಳನ್ನೇ ಗರ್ಭದಲ್ಲಿರಿಸಿ ಜಿಲ್ಲೆಯಾದ್ಯಂತ ಸಂಚರಿಸಿದ ನಿರುದ್ಯೋಗ ವಿರೋಧಿ ಯುವಜನ ಜಾಥಾ ಹೊಸ ಸ್ಫೂರ್ತಿ ನೀಡಿತು.

ಜನವಿರೋಧಿ ಆಡಳಿತ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಲಾರದ ಅದೆಷ್ಟೊ ಜನರು ಈ ಜಾಥಾವನ್ನು ಒಂದು ಆಶಾಕಿರಣವನ್ನಾಗಿ ನೋಡಿದ್ದಾರೆ. ಆಳುವ ವರ್ಗಗಳ ಜನವಿರೋಧಿ ನೀತಿಗಳ ವಿರುದ್ಧ ಕೊರಳ ತನಕ ಕ್ರೋಧವನ್ನಿಟ್ಟುಕೊಂಡ ಜನ ಜಾಥಾ ತಂಡದ ಸದಸ್ಯರೊಂದಿಗೆ ತಮ್ಮ ಅಳಲನ್ನು ತೋಡಿಕೊಂಡರು. 'ನೀವು ಇಂತಹ ಉತ್ತಮ ಕೆಲಸ ಮಾಡುತ್ತಿದ್ದೀರಿ, ನಿಜಕ್ಕೂ ಒಂದು ಉತ್ತಮ ಪ್ರಯತ್ನ. ಸಮಾಜ ಬದಲಾವಣೆಯಾದರೆ ನಿಮ್ಮಿಂದ ಮಾತ್ರ' ಜಾಥಾ ವೀಕ್ಷಿಸಿದ ಹೆಣ್ಮಗಳೊಬ್ಬಳು ನಂತರ ಕಲಾವಿದರು ಭೇಟಿ ನೀಡಿದಾಗ ನುಡಿದಳು.

ಕಾರ್ಯಕ್ರಮ ಮುಗಿದ ನಂತರ ಖರ್ಚು ವೆಚ್ಚ ತೂಗಿಸಲು ಜನರಿಂದ ಡಬ್ಬಾ ಮೂಲಕ ಹಣ ಸಂಗ್ರಹಿಸಲಾಗುತ್ತಿತ್ತು. ಇದಕ್ಕೆ ಜನರೆಲ್ಲರೂ ಉತ್ತಮ ಪ್ರತಿಕ್ರಿಯೆ ತೋರಿಸಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ, ಹಳ್ಳಿಗಳಲ್ಲಿ ಕಾರ್ಯಕ್ರಮ ನೀಡುವಾಗ ಖಾಲಿ ಕೈಗಳಲ್ಲಿ ನೆರೆದಿದ್ದ ಹೆಂಗಸರು, ಹಿರಿಯರು 'ಡಬ್ಬಿ ಸಂಗ್ರಹ'ಕ್ಕೆ ಕೊಡುಗೆ ನೀಡಲು ಮನೆಗೆ ಓಡೋಡಿ ತಮ್ಮಿಂದ ಕೈಲಾದ ಸಹಾಯ ನೀಡುತ್ತಿದ್ದರು.

ಟೆಲಿಫೋನ್ ಬೂತ್‌ನವರು ಕಲಾವಿದರು ಮಾಡಿದ ಫೋನ್ ಕರೆಗೆ ಹಣ ತೆಗೆದುಕೊಳ್ಳಲು ನಿರಾಕರಿಸಿದ್ದು ಮಾತ್ರವಲ್ಲದೆ ಆರ್ಥಿಕ ಸಹಕಾರವನ್ನು ನೀಡಿದರು. ಅದೇ ರೀತಿ ಕಾಪು ಎಂಬಲ್ಲಿ ಹಣ ಸಂಗ್ರಹಕ್ಕೆ ತೆರಳಿದ ಕಲಾವಿದರಿಗೆ ಎಳನೀರಿನೊಂದಿಗೆ ಉಪಚರಿಸಿದ ಬಳಿಕ ಧನ ಸಹಾಯವನ್ನೂ ನೀಡಿದರು. ಬೆಳಿಗ್ಗೆ 8.00 ಗಂಟೆಗೆ ಕಾರ್ಯಕ್ರಮ ನೀಡಿದಾಗಲೂ ಕೆಲವರು ಹಣ ಸಹಾಯ ನೀಡಲಾಗದಿರುವುದಕ್ಕೆ ಚಡಪಡಿಸಿದರೂ ಉಳಿದವರು ತಮ್ಮ ಹತ್ತಿರದವರಿಂದ ಸಾಲ ಕೊಂಡು ಜಾಥಾಕ್ಕೆ ಸಹಕರಿಸಿದ ಉದಾಹರಣೆಗಳಿವೆ. ಕೆಲವು ಅಂಗಡಿ ಮಾಲೀಕರು, ವ್ಯಾಪಾರಸ್ಥರು ಕಲಾವಿದರನ್ನು ಕರೆಕರೆದೂ ಕೊಡುಗೆ ನೀಡುತ್ತಿದ್ದರು.

ನಿರುದ್ಯೋಗ ನಿಜವಾದ ಕಷ್ಟವನ್ನು ಎದುರಿಸುವವರು ನಿರುದ್ಯೋಗಿಗಳ ತಾಯಂದಿರು. ಆದುದರಿಂದ ಜಾಥಾ ವೀಕ್ಷಿಸಿದ ಹೆಂಗಸರು ಬಹುದೊಡ್ಡ ರೀತಿಯಲ್ಲಿ ನಮ್ಮ ಸಂದೇಶಕ್ಕೆ ದನಿಗೂಡಿಸಿದ್ದಾರೆ. ಬಂಟ್ವಾಳದಲ್ಲಿ ಬೀಡಿ ಕಾರ್ಮಿಕರ ಸಮಾವೇಶದಲ್ಲಿ ಜಾಥಾ ಪ್ರದರ್ಶನ ನೀಡಿದಾಗ ಉತ್ಸಾಹಕಾರಿ ಪ್ರತಿಕ್ರಿಯೆ ಬಂದಿದೆ. ಎಲ್ಲಾ ಎಂಟು ದಿನಗಳಲ್ಲೂ ಕಾರ್ಯಕ್ರಮ ವೀಕ್ಷಿಸಿದ ಮಹಿಳೆಯರು, ಯುವತಿಯರು ಧನ ಸಹಾಯ ನೀಡಿ ಸಮಸ್ಯೆಯ ನಿಜವಾದ ಆಳವನ್ನು ಅರಿತುಕೊಂಡಿದ್ದಾರೆ. ಕಳೆದ ಎಂಟು ದಿನಗಳಲ್ಲಿ ಜಿಲ್ಲೆಯ ಜನತೆ ನೀಡುತ್ತಿದ್ದದ್ದು ಕೇವಲ ಆರ್ಥಿಕ ಸಹಕಾರವಲ್ಲ. ಒಂದು ಬಹುದೊಡ್ಡ ಜನಪರ ಚಳುವಳಿಯನ್ನು ಪ್ರತಿನಿಧಿಸುವ ಕಲಾವಿದರಿಗೆ, ಜಾಥಾಕ್ಕೆ ತಮ್ಮ ಅಪಾರ ನೈತಿಕ ಬೆಂಬಲವನ್ನು, ಪ್ರೋತ್ಸಾಹವನ್ನು ನೀಡುತ್ತಿದ್ದರು. ಇವರು ಕೊಟ್ಟ ಪ್ರೋತ್ಸಾಹ, ಬೆಂಬಲ ಅತ್ಯಪೂರ್ವವಾದದ್ದು ಎಂದು ಬೇರೆ ಹೇಳಬೇಕಿಲ್ಲ.


ಹಳೆಯಂಗಡಿ ಬಳಿಯ ಪಡುಪಣಂಬೂರು ಎಂಬಲ್ಲಿ ಜಾಥಾ ಸ್ವಾಗತಿಸಿದ ಕಾಂಗ್ರೆಸ್‌ನ ಜನಪ್ರತಿನಿಧಿಯೊಬ್ಬರು ಕಲಾವಿದರ ಬೆನ್ನುತಟ್ಟಿ ತಮ್ಮ ಮನೆಯಲ್ಲಿರುವ ನಿರುದ್ಯೋಗ ಸಮಸ್ಯೆ, ಅದಕ್ಕೆ ಕಾರಣವಾಗಿರುವ ನೀತಿಗಳನ್ನು ತಿಳಿಸಿದ ಕಲಾವಿದರನ್ನು ತುಂಬು ಮನದಿಂದ ಹೊಗಳಿದ್ದಲ್ಲದೆ ಸಂಘಟನೆಗೆ ಮುಂದಿನ ದಿನಗಳಲ್ಲಿ ಬೆಂಬಲ ನೀಡುವುದಾಗಿ ಆಶ್ವಾಸನೆಯನ್ನೂ ನೀಡಿದರು. ಅನೇಕ ಕಡೆಗಳಲ್ಲಿ ಯುವಕರ ಗುಂಪುಗಳು ಜಾಥಾ ವೀಕ್ಷಿಸಿ ಡಿವೈಎಫ್‌ಐ ಸಂಘಟನೆಯನ್ನು ತಮ್ಮ ಊರಿನಲ್ಲೂ ಸ್ಥಾಪಿಸಲು ವಿನಂತಿಸಿಕೊಂಡರು. ಕೆಲವೆಡೆ ನಿಷ್ಕ್ರಿಯರಾಗಿದ್ದ ಸದಸ್ಯರು ಪೂರ್ಣ ಪ್ರಮಾಣದಲ್ಲಿ ತೊಡಗಿಕೊಳ್ಳುವ ಬಗ್ಗೆ ತಮ್ಮ ಇಂಗಿತ ವ್ಯಕ್ತಪಡಿಸಿದರು. ಜಿಲ್ಲೆಯಾದ್ಯಂತ ಸುರಿಯುತ್ತಿದ್ದ ಮಳೆ ಜಾಥಾಕ್ಕೂ ಬಾಧಿಸದೆ ಇರಲಿಲ್ಲ. ಈ ಕಾರಣದಿಂದ ಕುಪ್ಪೆಪದವಿನಲ್ಲಿ ನಾಟಕವನ್ನು ಅರ್ಧಕ್ಕೆ ನಿಲ್ಲಿಸಲಾಯಿತು. ಭಾಷಣವನ್ನು ನಮ್ಮ ರಥದೊಳಗಿನಿಂದ ಮಾಡಬೇಕಾಯಿತು. ಬಳ್ಕೂರು ಎಂಬಲ್ಲಿ ಧೋ ಎಂದು ಮಳೆ ಸುರಿಯುತ್ತಿದ್ದಾಗಲೂ ದೂರದೂರಿನಿಂದ ಕಾರ್ಯಕ್ರಮಕ್ಕೆಂದು ಬಂದಿದ್ದ ಹೆಂಗೆಳೆಯರು ಮಳೆಗೆ ಒದ್ದೆಯಾದರೂ ಮಿಸುಕಾಡದೆ ನಿಂತು ಕಾರ್ಯಕ್ರಮ ವೀಕ್ಷಿಸಿದರು. ಛತ್ರಿಯಿದ್ದವರು ಕಲಾವಿದರಿಗೆ ಒದಗಿಸಿದರು.

ವಿದ್ಯಾರ್ಥಿಗಳು, ಬೀಡಿ ಕಾರ್ಮಿಕರು, ಯುವಕ ಮಂಡಲಗಳು, ಹಳೆ ವಿದ್ಯಾರ್ಥಿ ಸಂಘಗಳು, ಟೈಲ್ ಕಾರ್ಮಿಕರು, ಜನಪ್ರತಿನಿಧಿಗಳು ಜಾಥಾ ತಂಡವನ್ನು ಸ್ವಾಗತಿಸಿದರು. ವಿಮಾ ನೌಕರರ ಸಂಘ ಜಾಥಾದ ಕಲಾವಿದರಿಗೆ ಬನಿಯನ್ ವ್ಯವಸ್ಥೆಯನ್ನು ಮಾಡಿತ್ತು. ಒಟ್ಟು ಜಾಥಾ ಸಂಚರಿಸಿದ ಎಂಟು ದಿನಗಳು ಕೊಟ್ಟ ಕಾರ್ಯಕ್ರಮ ನೂರಕ್ಕೂ ಮಿಕ್ಕಿ ಸುಮಾರು ಒಂದು ಲಕ್ಷ ಮಂದಿಗೆ ಕಾರ್ಯಕ್ರಮದ ಸಂದೇಶವನ್ನು ನೇರವಾಗಿ ತಲುಪಿಸಿದ ಜಾಥಾ ದ.ಕ.-ಉಡುಪಿ ಜಿಲ್ಲೆಯ ಪ್ರಗತಿಪರ ಚಳುವಳಿಯ ಮೈಲುಗಲ್ಲಾಗಿ ದಾಖಲಾಯಿತು.

ಕಾರ್ಯಕ್ರಮ ವೀಕ್ಷಿಸಿದ ಜನತೆ ತನ್ಮಯತೆಯಿಂದ ತಲೆದೂಗಿದ್ದಾರೆ. ಚಳುವಳಿಯಲ್ಲಿ ಒಂದಾಗಬಯಸಿದ್ದಾರೆ. ನಮ್ಮ ಹಾಡನ್ನು ಕಿವಿಯಾರೆ ಕೇಳಿದ್ದಾರೆ. ಕಣ್ತುಂಬ ನೋಡಿದ್ದಾರೆ. ಇಟಲಿಯ ಫ್ಯಾಸಿಸ್ಟ್ ಮುಸಲೋನಿ ಸೇನೆಯ ನಗುವ ಅಟ್ಟಹಾಸವನ್ನು ನಿಲ್ಲಿಸಿದ ಕ್ರಾಂತಿಕಾರಿ ಕವಿ ನಜೀಂ ಹಿಕ್ಮತ್ ಕುರಿತು ಪಾಬ್ಲೊ ನೆರೂದಾ ಬರೆಯುತ್ತಾರೆ

ಬಂಧು, ಆಗ ನೀವು ಹಾಡಿದ್ದು
ನಿಮಗೊಬ್ಬರಿಗಾಗಿಯಷ್ಟೇ ಅಲ್ಲ
ನಮ್ಮೆಲ್ಲರ ಪರವಾಗಿಯೂ ಹಾಡಿದಿರಿ
ಇನ್ನು ನಾವೆಲ್ಲ ಏನು
ಮಾಡಬೇಕೆಂಬುದರ ಬಗ್ಗೆ ಸಂದೇಹವೇ
ನಮಗಿಲ್ಲ, ಏಕೆಂದರೆ
ನಿಮ್ಮ ಹಾಗೆಯೇ ನಾವೂ
ಹಾಡಲು ಶುರು ಮಾಡಬೇಕು
ಇನ್ನಷ್ಟು ಹಾಡಬೇಕು

ಹೌದು, ಜನ ಬದುಕಿನ ನೈಜತೆ ಅರಿತಿದ್ದಾರೆ. ಸಮಸ್ಯೆಗಳಿಗೆ ಉತ್ತರಿಸಬಯಸಿದ್ದಾರೆ. ಹೋರಾಟದ ಹೆಜ್ಜೆಯೊಂದಿಗೆ ಹೆಜ್ಜೆ ಹಾಕಬಯಸಿದ್ದಾರೆ. ಇನ್ನಷ್ಟು ಹಾಡಲು ಕಾತರಿಸುತ್ತಿದ್ದಾರೆ. ಅವರ ಬಳಿಗೆ ತೆರಳಿ ಅವರನ್ನು ಚಳುವಳಿಯೊಂದಿಗೆ ಬೆಸೆಯಬೇಕಾದದ್ದು ನಮ್ಮ ಮುಂದಿನ ಕರ್ತವ್ಯ. ಆ ದಿಸೆಯಲ್ಲಿ ನಾವು ಕೆಲಸ ಮಾಡಬೇಕಾಗಿದೆ. ಜನರ ನೋವಿನೊಂದಿಗೆ ಸ್ಪಂದಿಸಿ ಹೋರಾಟ ಹಾದಿಯೊಂದಿಗೆ ಮುನ್ನಡೆಯಬೇಕು. ಆಗಲೇ ಪುನ್ನಪ್ರ ವಯಲಾರ್‌ನ ಧೀರ ಕುಮಾರ್ ಆಶಾನ್‌ನ ಬಯಕೆಗಳು, ಜಾಥಾ ತಂಡದ ಆಶಯಗಳು ಈಡೇರಬಲ್ಲವು. ○



ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ
ಜಾಗತಿಕ ತಲ್ಲಣ-ಹೋರಾಟಗಳು


ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೆಟ್ರೋಲಿಯಂ ತೈಲದ ಬೆಲೆ ಏರಿಕೆ ಜಾಗತಿಕವಾಗಿ ವ್ಯಾಪಕ ಪರಿಣಾಮಗಳನ್ನು ಉಂಟು ಮಾಡಿದೆ. ಈ ತೀವ್ರ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ಸರಕಾರ ಏರಿಸುವ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಯ ಇಳಿಕೆಗಾಗಿ ಒತ್ತಾಯಿಸಿ, ಫ್ರಾನ್ಸ್‌ನಲ್ಲಿ ನಡೆದ ಮುಷ್ಕರ ಯಶಸ್ವಿ. ಬೆಲ್ಜಿಯಂ-ಜರ್ಮನಿ-ಇಂಗ್ಲೆಂಡ್- ಇಟಲಿ-ಐರ್ಲೆಂಡ್-ಸ್ಪೈನ್ ಮುಂತಾದ ಯುರೋಪಿಯನ್ ದೇಶಗಳಿಗೂ ಹರಡಿ ಹಲವೆಡೆ ಕೈಗಾರಿಕೆ-ವಾಣಿಜ್ಯೋದ್ದಿಮೆ-ಜನಜೀವನವನ್ನೇ ಸ್ತಬ್ಧಗೊಳಿಸಿದೆ.ವಾಜಪೇಯಿಯವರು ಅಮೆರಿಕ ಪ್ರವಾಸದಿಂದ ಹಿಂತಿರುಗಿದ ಮೇಲೆ ಭಾರತದಲ್ಲಿಯೂ ಸಹ ಪ್ರಸ್ತಾವಿತ ಪೆಟ್ರೋಲ್ ಬೆಲೆ ಏರಿಕೆ ಮಾಡಲು ಯೋಚಿಸಿರುವ ಹಿನ್ನೆಲೆಯಲ್ಲಿ ಈ ಪ್ರತಿಭಟನೆಗಳು ಹೆಚ್ಚು ಅರ್ಥ ಪಡೆಯುತ್ತವೆ.

ಫ್ರಾನ್ಸ್ ದೇಶದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಶೇ 80 ರಷ್ಟು ತೆರಿಗೆಯನ್ನು ವಿಧಿಸಲಾಗುತ್ತಿದೆ. ಇದಲ್ಲದೆ ಈಗ ಶೇ 30 ರಷ್ಟು ಬೆಲೆಏರಿಕೆ ಸರಕಾರದ ಇತರ ಎಲ್ಲಾ ವೆಚ್ಚಗಳಿಗೂ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಯಿಂದ ಆದಾಯ ಸಂಗ್ರಹಿಸುವ ಪ್ರವೃತ್ತಿ ವ್ಯಾಪಕವಾಗಿದೆ. ಸರಕಾರಗಳ ಈ ನೀತಿಯ ವಿರುದ್ಧ ಯುರೋಪಿನಾದ್ಯಂತ ಜನ ಸಿಡಿದೆದ್ದಿದ್ದಾರೆ. ಫ್ರಾನ್ಸ್‌ನಲ್ಲಿ ಪೆಟ್ರೋಲಿಯಂ ಉತ್ಪನ್ನ ಬೆಲೆ ಏರಿಕೆಯಿಂದ ಸಂಕಷ್ಟಕ್ಕೆ ಒಳಗಾದ ಮೀನುಗಾರರು-ರೈತರು-ಸಾರಿಗೆ ಇತ್ಯಾದಿ ವಿಭಾಗಗಳ ಜನ ಬೀದಿಗಿಳಿದರು. ವ್ಯಾಪಕ ಮುಷ್ಕರ-ಪ್ರತಿಭಟನೆಗಳ ನಂತರ 64 ಕೋಟಿ ಡಾಲರುಗಳಷ್ಟು ರಿಯಾಯಿತಿಯನ್ನು ಪಡೆದರು.


ಈ ಹೋರಾಟದ ಯಶಸ್ಸಿನ ಸ್ಫೂರ್ತಿಯೋ ಎಂಬಂತೆ ಇಂಗ್ಲೆಂಡಿನ ಬಹುತೇಕ ಜನಜೀವನ ಅಸ್ತವ್ಯಸ್ತಗೊಂಡಿದೆ. ಬಸ್-ರೈಲುಗಳ ಮುಂತಾದ ಸಾರಿಗೆ ವ್ಯವಸ್ಥೆ ಕುಸಿದಿದೆ. ಶಾಲಾ-ಕಾಲೇಜುಗಳನ್ನು ಬಹುತೇಕ ಮುಚ್ಚಬೇಕಾಗಬಹುದೆಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಅಗತ್ಯ ಸೇವೆಗಳಿಗೆ ಮಾತ್ರ ಪೆಟ್ರೋಲ್ ದೊರೆಯುತ್ತಿದೆ.

ತೈಲ ಸಂಸ್ಕರಣ ಘಟಕದ ಸುತ್ತ ಪ್ರತಿಭಟನಾಕಾರರ ವ್ಯಾಪಕ ತಡೆಗೋಡೆಯೇ ನಿರ್ಮಾಣವಾಗಿದೆ. ಹೋರಾಟಗಾರರು ಪೋಲೀಸರ ನಡುವೆ ಸಂಘರ್ಷ ಮುಂದುವರಿದಿದೆ. ತೈಲ ಸಾಗಾಣಿಕೆಯನ್ನು ತಡೆ ಹಿಡಿದಿರುವ ಪರಿಣಾಮ ಇಂಗ್ಲೆಂಡ್‌ನ ಸಾವಿರಾರು ತೈಲಟ್ಯಾಂಕ್‌ಗಳು ಒಣಗಿವೆ. ಪರಿಸ್ಥಿತಿ ಇನ್ನು ತೀವ್ರವಾಗುವ ಸಾಧ್ಯತೆ ಇದೆ. ಜನರು ಕೆಲಗಳಿಗೆ ಹೋಗಲಾರದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಆದರೆ ಹೋರಾಟ ಸಂಪೂರ್ಣ ಶಾಂತಿಯುತವಾಗಿದೆ. ಇಂಗ್ಲೆಂಡಿನಲ್ಲಿ ನಡೆಯುತ್ತಿರುವ ಈ ಮುಷ್ಕರ ಬಗ್ಗೆ ನಡೆದ ಜನಮತ ಸಂಗ್ರಹದಲ್ಲಿ ಶೇ 78 ಮತಗಳು ಮುಷ್ಕರದ ಪರವಾಗಿ ದೊರೆತಿದೆ.

ಭಾರತದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸುವುದಾಗಿ ಕೇಂದ್ರದ ಪೆಟ್ರೋಲಿಯಂ ಖಾತೆ ಮಂತ್ರಿ ಹೇಳುತ್ತಿದ್ದಾರೆ. ಪ್ರಧಾನಿ ವಾಜಪೇಯಿ ಅಮೆರಿಕೆಯಿಂದ ಹಿಂದುರುಗಿ ಬಂದ ನಂತರ ಈ ಕುರಿತು ನಿರ್ಧಾರ ಕೈಗೊಳ್ಳಲಾಗುತ್ತದಂತೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಬಾರಿ ತೆರಿಗೆ ಹೇರುವ ಪ್ರವೃತ್ತಿ ಭಾರತದಲ್ಲೂ ಇದೆ. ಪ್ರಸ್ತಾವಿತ ಈ ಬೆಲೆ ಏರಿಕೆ ಭಾರತದ ಕೈಗಾರಿಕೆ - ಕೃಷಿ ವಾಣಿಜ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ.



ಇಂಧನ ಬೆಲೆ ಹೆಚ್ಚಳ ಪ್ರತಿಭಟಿಸಿ ಜರ್ಮನಿಯ ಟ್ರಕ್ ಮತ್ತು ಟ್ಯಾಕ್ಸಿ ಚಾಲಕರು ಸಂಚಾರಕ್ಕೆ ಅಡ್ಡಿ ಉಂಟು ಮಾಡಿರುವುದು.



ಫ್ರೆಂಚ್ ರೈತರು ರೈಲ್ವೆ ಹಳಿಯ ಮೇಲೆ ಟ್ರಾಕ್ಟರ್‌ಗಳನ್ನು ನಿಲ್ಲಿಸಿ ಪ್ರತಿಭಟನೆ ವ್ಯಕ್ತಪಡಿಸಿರುವುದು.

...................ಕಾಮ್ರೇಡ್ ಎಂ.ಎಸ್. ಕೃಷ್ಣನ್

ಪುಟ 2 ರಿಂದ

ಮುಷ್ಕರವಾದ ಸಾರ್ವಜನಿಕ ಉದ್ದಿಮೆಗಳ ನೌಕರರ ಮುಷ್ಕರದಲ್ಲಿ ಕಾಂ.ಕೃಷ್ಣನ್ ಮುಖ್ಯ ಪಾತ್ರವಹಿಸಿದ್ದರು.

1964 ರಲ್ಲಿ ಕಮ್ಯುನಿಸ್ಟ್ ಪಕ್ಷವು ತೀವ್ರತರವಾದ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಂದ ವಿಭಜನೆಗೊಂಡಾಗ ಕಾಂ. ಕೃಷ್ಣನ್ ಸಿಪಿಐಯಲ್ಲಿ ಉಳಿದರು. ಮುಂದೆ ಅವರು ರಾಜ್ಯ ಕಾರ್ಯದರ್ಶಿಯಾಗಿಯೂ ದೀರ್ಘಕಾಲ ಜವಾಬ್ದಾರಿ ನಿರ್ವಹಿಸಿದರು. 1986 ರ ನಂತರ ಎಐಟಿಯುಸಿಯ ಅಖಿಲ ಭಾರತ ಅಧ್ಯಕ್ಷರಾಗಿ ಎರಡು ಬಾರಿ ಆಯ್ಕೆಯಾಗಿ ಕಾರ್ಯನಿರ್ವಹಿಸಿ ದ್ದಾರೆ. ಹಾಗೇ ಪಕ್ಷದ ಕೇಂದ್ರ ಸೆಕ್ರೆಟರಿಯಾಟ್ ಸದಸ್ಯರಾಗಿ ದುಡಿದಿದ್ದಾರೆ. ಅಂತರ್ರಾಷ್ಟ್ರೀಯ ರಂಗದಲ್ಲಿಯೂ ಕಾರ್ಮಿಕ ಚಳುವಳಿ ಹಾಗೂ ಸಿಪಿಐಯನ್ನು ಪ್ರತಿನಿಧಿಸಿದ್ದಾರೆ.

1967 ಒಳಗೊಂಡು ಒಟ್ಟು ಅಲ್ಲಿ ಎರಡು ಬಾರಿ ಬೆಂಗಳೂರಿನ ಮಲ್ಲೇಶ್ವರಂ ಮತ್ತು 1983 ಹಾಗೂ 1985 ರಲ್ಲಿ ರಾಜಾಜಿನಗರ ವಿಧಾನಸಭಾ ಕ್ಷೇತ್ರಗಳಿಂದ ಕರ್ನಾಟಕದ ವಿಧಾನಸಭೆಗೆ ಶಾಸಕರಾಗಿ ಆಯ್ಕೆಯಾಗಿದ್ದಾರೆ. ವಿಧಾನಸಭೆಯಲ್ಲಿ ದುಡಿಯುವ ಜನತೆಯ ಪರವಾಗಿ ಕೆಲಸ ನಿರ್ವಹಿಸಿ, ಉತ್ತಮ ಗಂಭೀರ ವಾದಗಳ ಮೂಲಕ ಸದನದ ಕಲಾಪಗಳನ್ನು ಅರ್ಥಪೂರ್ಣಗೊಳಿಸಿದ್ದಾರೆ. ಜನತೆಗಾಗಿ ಹೋರಾಡಿದ್ದಾರೆ.

ಕಳೆದ ಐದು ವರ್ಷಗಳಿಂದ ಅನಾರೋಗ್ಯ ಪೀಡಿತರಾಗಿ, ಮಾತನಾಡಲು ಆಗದೇ ಇದ್ದಾಗ್ಯೂ ದೇಶದ ಆಗುಹೋಗುಗಳಿಗೆ ಸ್ಪಂದಿಸಿದ್ದಾರೆ. ಸೆಪ್ಟೆಂಬರ್ 5 ರಂದು ಅವರೇ ಸ್ಥಾಪಿಸಿದ್ದ ಯಶವಂತಪುರದ ಆದರ್ಶಗರ್ಲ್ಸ್ ಹೈಸ್ಕೂಲ್ ಶಾಲೆಯ ಸಮಾರಂಭದಲ್ಲಿ ಬಹುಮಾನ ವಿತರಿಸಿ ವಾಪಸಾಗಿ ಅಂದೇ ರಾತ್ರಿ ಹೃದಯಾಘಾತದಿಂದ ನಮ್ಮೆಲ್ಲರನ್ನು ಅಗಲಿದ್ದಾರೆ.

ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಯಲ್ಲಿ ಪೂರ್ಣ ಸಮರ್ಪಿಸಿಕೊಂಡ ಅತ್ಯಂತ ಹಿರಿಯ, ಪ್ರಮುಖ ಸಂಗಾತಿ ಕಾಂ. ಎಂ.ಎಸ್ .ಕೃಷ್ಣನ್‌ರವರ ಅಗಲಿಕೆ ದುಡಿಯುವ ವರ್ಗಕೆ, ಪ್ರಜಾಸತ್ತಾತ್ಮಕ ಚಳವಳಿಗೆ ತುಂಬಲಾರದ ನಷ್ಟ. ತನ್ನ ಇಡೀ ಜೀವನವನ್ನೇ ಕಾರ್ಮಿಕವರ್ಗದ ವಿಮೋಚನೆಗೆ ಮುಡಿಪಾಗಿಟ್ಟು ಅವರಿಗೆ ಪ್ರೀತಿ ಮತ್ತು ಗೆಳೆತನ ಹಂಚಿಕೊಂಡು ದಣಿವರಿಯದ ಒಡನಾಡಿಯ ಕೊಡುಗೆಗಳನ್ನು ಸ್ಮರಿಸಿಕೊಂಡು ಅದರಿಂದ ಇಂದಿನ ಪೀಳಿಗೆ ಸ್ಫೂರ್ತಿ ಹೊಂದಲಿದೆ.

ಸರಳ, ಸಜ್ಜನಿಕೆ, ಬದ್ಧತೆಯ ಪ್ರತೀಕವಾಗಿದ್ದ ಕಾಂ. ಎಂ.ಎಸ್.ಕೃಷ್ಣನ್ ಸದಾ ಚಿರಸ್ಮರಣೀಯ.

ಸೂರಿಯವರೊಂದಿಗೆ ಕೃಷ್ಣನ್...........

ರಾಜ್ಯ ಹಿರಿಯ ಕಮ್ಯುನಿಸ್ಟ್ ಮುಖಂಡರಾದ ಕಾಂ.ಎಂ.ಎಸ್. ಕೃಷ್ಣನ್ ರವರ ನಿಧನದಿಂದ ರಾಜ್ಯ ಒಬ್ಬ ಸಮತಾವಾದಿ ಹಾಗೂ ಪ್ರಾಮಾಣಿಕ ವ್ಯಕ್ತಿಯನ್ನು ಕಳೆದು ಕೊಂಡಿದೆ ಎಂದು ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ರಾಜ್ಯ ಕಾರ್ಯದರ್ಶಿ ಹಾಗೂ ಅವರಜೊತೆ ಜೊತೆಯಾಗಿ ಕಮ್ಯೂನಿಸ್ಟ್ ಚಳುವಳಿ ಬೆಳೆಸಲು ಶ್ರಮಿಸಿದ ಕಾಂ. ಎಸ್. ಸೂರ್ಯನಾರಾಯಣರಾವ್ ಶೋಕಿಸಿದ್ದಾರೆ.

ರಾಜ್ಯದಲ್ಲಿ ವಿದ್ಯಾರ್ಥಿ ಚಳುವಳಿ ಪ್ರಾರಂಭಿಸಿದ ಕೃಷ್ಣನ್ ನಂತರ ಕಾರ್ಮಿಕ ಚಳುವಳಿಯನ್ನು ಕಟ್ಟಿ AITUC ಪ್ರಬಲವಾಗಿ ಬೆಳೆಯಲು ದುಡಿದರು ಎಂದು ಅವರ ಒಡನಾಡಿಯಾಗಿ ದುಡಿದ ಕಾಂ। ಸೂರಿಯುವರು ಈ ಸಂದರ್ಭದಲ್ಲಿ ಸ್ಮರಿಸಿಕೊಂಡರು.

ಲಾಲಾ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಕೃಷ್ಣನ್ ಎಂಜಿನಿಯರಿಂಗ್ ಪದವಿ ಪಡೆದಿದ್ದರು. ಭೂಗತರಾಗಿದ್ದುಕೊಂಡೆ ಆಂಧ್ರ ಮಹಾ ಸಭಾದಲ್ಲಿ ಹರಿಸರ್ವೋತ್ತಮರನ್ನು ಆಹ್ವಾನಿಸಿ ವಿದ್ಯಾರ್ಥಿ ಸಮ್ಮೇಳನ ನಡೆಸಿದ್ದನ್ನು ನೆನಪಿಸಿಕೊಂಡ ಸೂರಿಯವರು, ವಿಶ್ವೇಶ್ವರ ಪುರದ ಅಕ್ಕ ಪಕ್ಕದ ಮನೆಗಳಲ್ಲಿ ಜೊತೆಯಾಗಿ ಬೆಳೆದು ಪ್ರೌಢ ಶಾಲೆಯ ವ್ಯಾಸಂಗ ಹಾಗೂ ಸಮಾಜವಾದಿ ಸಿದ್ಧಾಂತಕ್ಕೆ ಆಕರ್ಷಿತರಾದುದನ್ನು ಮೆಲುಕು ಹಾಕಿದರು.

1942 ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದ ಕೃಷ್ಣನ್ ಕಾಂ॥ ಎನ್.ಎಲ್. ಉಪಾಧ್ಯಯರ ಜೊತೆ ಸೇರಿ ಪಕ್ಷ ಕಟ್ಟುವಲ್ಲಿ ಶ್ರಮಿಸಿದ್ದರು. ಟ್ರೇಡ್ ಯೂನಿಯನ್ ಕಟ್ಟಿ ಬೆಳಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಕೃಷ್ಣನ್ ಮುನ್ಸಿಪಲ್ ಕಾರ್ಮಿಕ ಯೂನಿಯನ್, ಕೃಷ್ಣಮಿಲ್ ವರ್ಕರ್ಸ್ ಯೂನಿಯನ್ ಟ್ರಾನ್ಸಿ ವರ್ಕರ್ಸ್ ಯೂನಿಯನ್ ಹೀಗೆ ರಾಜ್ಯದ ಹಲವೆಡೆ ಗಳಲ್ಲಿ ಯೂನಿಯನ್ ರಚಿಸಿದರು. ಕೆ.ಎಸ್. ಆರ್.ಟಿ.ಸಿ.ಯಲ್ಲಿ ಟ್ರೇಡ್ ಯೂನಿಯನ್ ಮಾನ್ಯತೆ ಪಡೆಯಲು ಶ್ರಮಿಸಿದ ಕೃಷ್ಣನ್ ಎ.ಐ. ಟಿ.ಯು.ಸಿ.ಗೆ ಭದ್ರ ಬುನಾದಿ ಒದಗಿಸಿದರೆಂದು ಕಾಂ॥ ಸೂರಿಯುವರು ವಿವರಿಸಿದರು.

ರಾಜ್ಯದ ಪ್ರಜಾಪ್ರಭುತ್ವ ಚಳುವಳಿಗಳಲ್ಲಿ ಕೃಷ್ಣನ್ ಜೊತೆ ತಾವು ಸಕ್ರಿಯವಾಗಿ ಭಾಗವಹಿಸಿ ಸೂರಿ-ಕೃಷ್ಣನ್ ಜೋಡಿಯೆಂದೇ ಖ್ಯಾತಿ ಹೊಂದಿದ್ದನ್ನು ತಮ್ಮ ಶ್ರದ್ಧಾಂಜಲಿಯಲ್ಲಿ ಸೂರಿಯವರು ಸ್ಮರಿಸಿಕೊಂಡಿದ್ದಾರೆ.

ರಾಜಾಜಿನಗರ ಹಾಗೂ ಮಲ್ಲೇಶ್ವರಂ ವಿಧಾನ ಸಭಾ ಕ್ಷೇತ್ರ ದಿಂದ 4 ಬಾರಿ ರಾಜ್ಯ ಶಾಸನ ಸಭೆಗೆ ಆಯ್ಕೆಯಾಗಿದ್ದ ಕೃಷ್ಣನ್ ನಿಷ್ಠಾವಂತ ಪ್ರಜಾಪ್ರಭುತ್ವವಾದಿ, ಉತ್ತಮ ಸಂಸದೀಯ ಪಟು ಹಾಗೂ ಪ್ರಾಮಾಣಿಕ ವ್ಯಕ್ತಿಯಾಗಿದ್ದರೆಂದು ಕಾಂ। ಸೂರಿ ಎಂ.ಎಸ್. ಕೃಷ್ಣನ್ ರವರನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಂಡರು.

ಎಂ.ಎಸ್. ಕೃಷ್ಣನ್ ರವರಿಗೆ ಭಾವ ಪೂರ್ಣ ಶ್ರದ್ಧಾಂಜಲಿ

ಸಿಪಿಐ(ಎಂ) ರಾಜ್ಯ ಸಮಿತಿ ಶ್ರದ್ಧಾಂಜಲಿ;

ಹಿರಿಯ ಕಮ್ಯೂನಿಸ್ಟ್ ಮುಖಂಡ, ಸ್ವಾತಂತ್ರ್ಯ ಹೋರಾಟಗಾರರಾದ ಎಂ.ಎಸ್. ಕೃಷ್ಣನ್ ನಿಧನ ದಿಂದ ಜನತೆ ಒಬ್ಬ ಉತ್ತಮ ಗೆಳೆಯನನ್ನು ಕಳೆದುಕೊಂಡಂತಾಗಿದೆ ಎಂದು ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ)ದ ರಾಜ್ಯ ಕಾರ್ಯದರ್ಶಿ ಮಂಡಳಿ ತನ್ನ ಅತೀವ ಶೋಕ ವ್ಯಕ್ತಪಡಿಸಿದೆ.

ವಿದ್ಯಾರ್ಥಿ ದೆಸೆಯಿಂದಲೇ ಚಳುವಳಿಯಲ್ಲಿ ಭಾಗವಹಿಸಿದ್ದ ಕೃಷ್ಣನ್ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಕರ್ನಾಟಕದಲ್ಲಿ ಕಾರ್ಮಿಕ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸಾಮಾನ್ಯ ಜನರ ಬಗ್ಗೆ ತೀವ್ರ ಕಾಳಜಿ ಹೊಂದಿದ್ದರು. ಶ್ರೀಮಂತ ಕುಟುಂಬದಿಂದ ಬಂದರೂ ಸದಾ ಕಾಲ ಬಡ, ಮಧ್ಯಮ ವರ್ಗದ ಏಳಿಗೆಗಾಗಿ ದುಡಿಯುತ್ತಿದ್ದ ಕೃಷ್ಣನ್ ಶಾಸಕರಾಗಿಯೂ ಜನಪ್ರಿಯರಾಗಿದ್ದರು ಎಂದು ಸಿಪಿಐ(ಎಂ) ತನ್ನ ಶ್ರದ್ಧಾಂಜಲಿಯಲ್ಲಿ ತಿಳಿಸಿದೆ.

1953 ರಲ್ಲಿ ಹೆಚ್.ಎಂ.ಟಿ.ಯ ಆಡಳಿತದಲ್ಲಿ ಕಾರ್ಮಿಕರು ಭಾಗವಹಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟು ಚರಿತ್ರಾರ್ಹ ಹೋರಾಟ ನಡೆಸಿ ಅದರಲ್ಲಿ ಯಶಸ್ಸನ್ನು ಗಳಿಸಿದನ್ನು ತನ್ನ ಶೋಕ ಸಂದೇಶದಲ್ಲಿ ಉಲ್ಲೇಖಿಸಿದೆ.

1964 ರಲ್ಲಿ ಸಿಪಿಐ(ಎಂ)ನಲ್ಲೇ ಉಳಿದ ಕೃಷ್ಣನ್ ಕರ್ನಾಟಕದಲ್ಲಿ ಎಡ ಚಳುವಳಿಯನ್ನು ಬೆಳೆಸಲು ನಿರಂತರ ಶ್ರಮಿಸಿದರು. 1987 ಹಾಗೂ 1992 ರಲ್ಲಿ ಎಡ ಪಕ್ಷಗಳ ನೇತೃತ್ವದಲ್ಲಿ ನಡೆದ ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿ ರಾಜ್ಯದ ವಿವಿಧ ಭಾಗಗಳ ಜನರಲ್ಲಿ ಜಾಗೃತಿ ಮೂಡಿಸಲು ಶ್ರಮಿಸಿದರೆಂದು ತನ್ನ ಸಂದೇಶದಲ್ಲಿ ತಿಳಿಸಿದೆ.

ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ್ ಹಾಗೂ ಜಿ.ಸಿ. ಬಯ್ಯಾರೆಡ್ಡಿಯವರು ಪಾರ್ಥಿವ ಶರೀರದ ಮೇಲೆ ಪುಷ್ಪಗುಚ್ಛವನ್ನಿರಿಸಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಸಿಪಿಎಂ ಕೇಂದ್ರ ಸಮಿತಿಯ ಶ್ರದ್ಧಾಂಜಲಿ

ಕಾಂ॥ ಎಂ.ಎಸ್. ಕೃಷ್ಣನ್ ರವರ ನಿಧನಕ್ಕೆ ಸಿಪಿಐ(ಎಂ) ಕೇಂದ್ರ ಸಮಿತಿ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಕರ್ನಾಟಕದಲ್ಲಿ ಕಮ್ಯೂನಿಸ್ಟ್ ಚಳುವಳಿಯನ್ನು ಕಟ್ಟಿಬೆಳೆಸುವಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ ಕಾಂ। ಕೃಷ್ಣನ್ 'ಕಮ್ಯೂನಿಸ್ಟ್ ಸಿದ್ಧಾಂತವನ್ನು ಹರಡಲು ಶ್ರಮಿಸಿದವರು.

ಒಬ್ಬ ನಿಷ್ಠಾವಂತ ಸಂಗಾತಿಯಾಗಿದ್ದ ಕಾಂ॥ ಕೃಷ್ಣನ್ ಕಾರ್ಯಕರ್ತರಿಗೆ ಮತ್ತು ಇತರ ಜನವಿಭಾಗಗಳಿಗೆ ಪ್ರೀತಿಯ ಸಂಗಾತಿಯಾಗಿದ್ದರು. ತಮ್ಮ ಜೀವಿತವನ್ನೆಲ್ಲ ಚಳುವಳಿಗೆ ಮುಡುಪಿಟ್ಟು ಕೆಲಸ ಮಾಡಿದ ಕೃಷ್ಣನ್ ರವರ ಬದುಕು ಮುಂದಿನ ಪೀಳಿಗೆಗೆ ಸ್ಫೂರ್ತಿದಾಯಕವಾಗಿದೆ. ಎಂದು ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿಯ ಪರವಾಗಿ ಪ್ರಧಾನಕಾರ್ಯದರ್ಶಿ ಹರಕಿಷನ್ ಸಿಂಗ್ ಸುರ್ಜಿತ್ ತಮ್ಮ ಸಂತಾಪ ಸೂಚಕ ಸಂದೇಶದಲ್ಲಿ ತಿಳಿಸಿದ್ದಾರೆ.



ಚೆಗುವಾರಗೆ ಅವಮಾನ ಮಾಡುವ ಜಾಹಿರಾತು ವಿರುದ್ಧ ಕೋರ್ಟಿಗೆ

ಚೆಗುವಾರನ ಈ ಚಿತ್ರ ಜಗತ್ತಿನಾದ್ಯಂತ ರಾಷ್ಟ್ರೀಯ ವಿಮೋಚನೆ, ಸಾಮ್ರಾಜ್ಯಶಾಹಿ- ವಿರೋಧಿ, ಸಮಾಜವಾದಕ್ಕಾಗಿ ಹೋರಾಡುವ ಎಲ್ಲರಿಗೂ- ಅದರಲ್ಲೂ ಯುವಜನರಿಗೆ ಸ್ಫೂರ್ತಿ ಕೊಡುವ ಚಿತ್ರ. ಈ ಚಿತ್ರ ಚೆಗುವಾರ 1960 ಮಾರ್ಚ್ 5 ರಂದು ಒಬ್ಬ ಪಾಶ್ಚಿಮಾತ್ಯ ಪತ್ರಿಕಾ ಫೋಟೋಗ್ರಾಫರ್ (ಕೋರ್ಡಾ ಎಂಬುವ)ತೆಗೆದದ್ದು-ಚೆಗುವಾರ ಹುತಾತ್ಮರಾಗುವ ಕೆಲವೇ ತಿಂಗಳುಗಳ ಮೊದಲು. ಕ್ಯೂಬಾಗೆ ಶಸ್ತ್ರಾಸ್ತ್ರ ತರುತ್ತಿದ್ದ ಬೆಲ್ಜಿಯಮ್ ಹಡಗನ್ನು ಅಮೆರಿಕದ ಬೆಂಬಲದಿಂದ ಪ್ರತಿ-ಕ್ರಾಂತಿಕಾರಿಗಳು ಸ್ಫೋಟಗೊಳಿಸಿ 100 ಜನ ಹಡಗಿನ ಸಿಬ್ಬಂದಿ ಸತ್ತಿದ್ದರು. ಅವರ ನೆನಪಿಗೆ ನಡೆದ ಸಭೆಯಲ್ಲಿ ಕೋರ್ಡಾ ಈ ಫೋಟೋ ತೆಗೆದದ್ದು. 1968 ರ ಫ್ರೆಂಚ್ ವಿದ್ಯಾರ್ಥಿಗಳ ದಂಗೆ ಸೇರಿದಂತೆ 60 ರ ದಶಕದ ಹಲವು ವಿದ್ಯಾರ್ಥಿ ಹೋರಾಟಗಳಲ್ಲಿ, ಈ ಫೋಟೋ ಯುವಜನರ ಪ್ರತಿರೋಧದ ಪ್ರತೀಕವಾಯಿತು, ಅತ್ಯಂತ ಜನಪ್ರಿಯವಾಯಿತು.

ಈಗ ಬ್ರಿಟನ್ ಕಂಪನಿಯೊಂದು ಈ ಫೋಟೋವನ್ನು ಸ್ಮಿರ.ನೋಫ್ ವೋಡ್ಕಾ(ಮಾದಕ ಪಾನೀಯ)ದ ಜಾಹೀರಾತಿಗೆ ಬಳಸಿದೆ. ಈ ಜಾಹೀರಾತಿನಲ್ಲಿ ಚೆಗುವಾರನ ಚಿತ್ರದ ಮೇಲೆ ಕತ್ತಿ-ಸುತ್ತಿಗೆಯ ಚಿತ್ರವನ್ನು ಮುದ್ರಿಸಲಾಗಿದೆ - ಸುತ್ತಿಗೆಯ ಬದಲು 'ಮೆಣಸು' ಚಿತ್ರಿಸಲಾಗಿದೆ. ಇದು 'ಖಾರ' ವೋಡ್ಕಾದ ಜಾಹೀರಾತಂತೆ. ಇದು ತನ್ನ 'ಕಾಪಿರೈಟ್'ನ ಉಲ್ಲಂಘನೆ ಮತ್ತು ಚೆಗುವಾರ್‌ಗೆ ಮಾಡುವ ಅಪಮಾನ ಎಂದು ಫೋಟೋಗ್ರಾಫರ್ ಕೋರ್ಡಾ ಕೋರ್ಟಿನ ಮೆಟ್ಟಿಲು ಹತ್ತಿದ್ದಾನೆ. ಚೆಗುವಾರನ ಬಿಂಬವನ್ನು ವೋಡ್ಕಾ ಮಾರಲು ಬಳಸುವುದು ಅಸಹ್ಯ, ಅಶ್ಲೀಲ. ಚೆಗುವಾರ ಎಂದೂ ಕುಡಿಯುತ್ತಿರಲಿಲ್ಲ. 'ಚೆ'ಯ ಹುತಾತ್ಮನೆನಪಿಗೆ ಈ ಜಾಹೀರಾತು ಕಳಂಕವೆಂದು ಈ ಕೋರ್ಡಾ ದಾವೆಗಾಗಿ ತೆರಳಿದ್ದಾನೆ. ಕೋರ್ಡಾನ ಬಳಿ ಆತ ಆಗ ಬಳಸಿದ ಕ್ಯಾಮೆರಾ, ನೆಗೆಟಿವ್ ಈಗಲೂ ಇದೆ. ಜಗತ್ತಿನಾದ್ಯಂತ ಈ ಫೋಟೋದ ಬಳಕೆ ಆಗಿದ್ದರೂ, ತಾನು ಕಾಪಿರೈಟ್ ಕೇಳಿರಲಿಲ್ಲ. ಅದರ ಸರಿಯಾದ ಉಪಯೋಗ ಆಗುತ್ತಿತ್ತು. ಆದರೆ ಚೆಗುವಾರಗೆ ಅವಮಾನ ಮಾತ್ರ ತಾನು ಸಹಿಸುವುದಿಲ್ಲ ಎಂದಿದ್ದಾನೆ!

ಅಮೆರಿಕದಲ್ಲಿ ವಾಜಪೇಯಿ

ಪುಟ 5 ರಿಂದ

ವಾಜಪೇಯಿಯವರು ಭಾರತದ ವಿದೇಶಾಂಗ ನೀತಿ ನಿರೂಪಣೆಗಳಲ್ಲಿಯೂ ಮಧ್ಯ ಪ್ರವೇಶಿಸಲು ಅಮೇರಿಕಕ್ಕೆ ಆಹ್ವಾನ ನೀಡುತ್ತಿದ್ದಾರೆ. ಇದರ ಪರಿಣಾಮವೆಂದರೆ ಭಾರತ ಹಿಂದಿನಿಂದಲೂ ಕಾಯ್ದುಕೊಂಡು ಬಂದಿದ್ದ ತೃತೀಯ ಜಗತ್ತಿನ ನಾಯಕತ್ವಕ್ಕೆ ಅಪಾಯವನ್ನು ತಂದೊಡ್ಡುವುದು. ಮತ್ತು ತನ್ನ ವಿದೇಶಾಂಗ ಹಿತಾಸಕ್ತಿಗಳಿಂದ ದೂರವಾಗುವುದು ಎಂದರ್ಥ.

ಜನತೆಯ ಮತ್ತು ದೇಶದ ಸಹಮತವಿಲ್ಲದಿದ್ದರೂ ವಾಜಪೇಯಿಯವರು ಅಮೇರಿಕ ಮತ್ತು ಸಾಮ್ರಾಜ್ಯಶಾಹಿಗಳಿಗೆ ರಿಯಾಯಾತಿಗಳನ್ನು ನೀಡಲು ಸನ್ನದ್ಧರಾಗಿದ್ದಾರೆ. ಆದ್ದರಿಂದ ಭಾರತದ ಜನತೆ ದೇಶದ ಸ್ವಾತಂತ್ರ್ಯ, ಸಾರ್ವಭೌಮತ್ವವನ್ನು ರಕ್ಷಿಸಲು ತನ್ನ ಧೀರೋದಾತ್ತವಾದ ಹೋರಾಟವನ್ನು ಮುನ್ನಡೆಸಿ ಸಾಮ್ರಾಜ್ಯಶಾಹಿ ಶಕ್ತಿಗಳು ಹರಿಯ ಬಿಡುತ್ತಿರುವ ಎಲ್ಲಾ ದೇಶ ವಿರೋಧಿ ನೀತಿಗಳನ್ನು ಸೋಲಿಸಲು ಮುಂದಾಗಬೇಕಿದೆ.

ಜಾಗತೀಕರಣದ ಕರಿನೆರಳಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್ಒ)

"ಪ್ರಜಾಸತ್ತಾತ್ಮಕ ರಾಜಕೀಯ ಸುಧಾರಣೆ ಅಲೆಯೇ ಜಾಗತೀಕರಣ. ಈ ಅಲೆಯ ಪ್ರತೀಕವೇ ಬರ್ಲಿನ್ ಗೋಡೆಯ ಪತನ. ಮಾರುಕಟ್ಟೆ - ರಹಿತ ಅಥವಾ ಮಾರುಕಟ್ಟೆ-ವಿರೋಧಿ ಆರ್ಥಿಕ ಸಂಘಟನೆಯ ಪತನ...."

ಇದು ಬಹುರಾಷ್ಟ್ರೀಯ ಕಂಪನಿಯ ಹೇಳಿಕೆಯೋ, ಐಎಂಎಫ್-ವಿಶ್ವಬ್ಯಾಂಕ್ ಅಧಿಕಾರಿಗಳ ಹೇಳಿಕೆಯೋ ಅಥವಾ ಅವರ ಬಾಲಬಡುಕ ಸರ್ಕಾರದ ಹೇಳಿಕೆಯೋ ಎಂಬಂತಿದೆ. ಆದರೆ ನಿಮಗೆ ಆಶ್ಚರ್ಯವಾಗಬಹುದು! ಇದು ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ(ILO) ಯ ಡೈರೆಕ್ಟರ್ ಜನರಲ್‌ರ ಭಾಷಣದ ಭಾಗ. ಅದೂ ಇತ್ತೀಚಿಗೆ ಜನಿವಾದಲ್ಲಿ ಮೆ-ಜೂನ್‌ನಲ್ಲಿ ನಡೆದ ಅಂತರ್ರಾಷ್ಟ್ರೀಯ ಲೇಬರ್ ಕಾನ್ಫರೆನ್ಸ್‌ನ್ನು ಉದ್ದೇಶಿಸುತ್ತಾ ಅವರು ಹೇಳಿದ್ದು.

ಐಎಲ್‌ಒದಲ್ಲಿ ಐಎಂಎಫ್ ದನಿ

ಡೈರೆಕ್ಟರ್ ಜನರಲ್ ಸಾಹೇಬರು ಭಾಷಣದ ಹೆಸರು 'ಕೆಲಸದಲ್ಲಿ ನಿಮ್ಮ ದನಿ' ಎಂದು ಇದ್ದರೂ, ಆತ ಪರಾಕು ಹೇಳಿದ್ದು ಬಹುರಾಷ್ಟ್ರೀಯ ಸಂಸ್ಥೆಗಳದ್ದು, ಐಎಂಎಫ್-ವಿಶ್ವಬ್ಯಾಂಕನದ್ದು. ಆತ ತನ್ನ ಭಾಷಣದಲ್ಲಿ ಜಾಗತೀಕರಣ ಬಹುರಾಷ್ಟ್ರೀಯ ಕಂಪನಿಗಳ ನಾಯಕತ್ವದಲ್ಲಿ ನಡೆಯುತ್ತಿರುವುದು ಒಳ್ಳೆಯದು ಎಂದಿದ್ದಾರೆ. ವಿಶ್ವಬ್ಯಾಂಕ್, ಐಎಂಎಫ್ ಮತ್ತು WTOಗಳ ಜತೆ ILO ಸಹಕರಿಸಬೇಕೆಂದು ಕೋರಿದ್ದಾರೆ. ಜಾಗತೀಕರಣ ಕೆಲವು ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾದರೂ ಡೈರೆಕ್ಟರ್ ಜನರಲ್ ಸಾಹೇಬರು, ಬಹುರಾಷ್ಟ್ರೀಯ ಕಂಪನಿಗಳ ಸೂಪರ್‌ಲಾಭಕ್ಕೂ, ಬಡವರ ಬಡತನ ಹೆಚ್ಚುವುದಕ್ಕೂ ಏನೂ ಸಂಬಂಧವಿಲ್ಲ ಎಂದು ಹೇಳಬಯಸುತ್ತಾರೆ. ಇದು ಸಾಲದೆಂಬಂತೆ ಸಮಾಜವಾದಿ ದೇಶಗಳಲ್ಲಿ ಟ್ರೇಡ್‌ಯೂನಿಯನ್ ಹಕ್ಕು ಇಲ್ಲ ಎಂಬ ಹಸಿಸುಳ್ಳು ಅವರು ಹೇಳುತ್ತಾರೆ.

ಐ.ಎಲ್.ಓ.-ಇತರ ವಿಶ್ವಸಂಸ್ಥೆಯ ಅಂಗ-ಸಂಘಟನೆಗಳಂತೆ ಪೂರ್ತಿ ಸಾಮ್ರಾಜ್ಯಶಾಹಿ ಹಾದಿ ಹಿಡಿದಿದೆ. ಬೇರೆ ಸಂಘಟನೆಗಳಂತೆ ಐಎಲ್‌ಒ ದ ಶೇಕಡ 75 ಹಣ ಬರುವುದು ಈ ವಿಕಸಿತ ದೇಶಗಳಿಂದ. ಹಣ ಕೊಡುವ ಧಣಿಗಳು ಹೇಳಿದಂತೆ ಕೇಳುವ ಸಂಘಟನೆ ವಿಶ್ವಸಂಸ್ಥೆಯ ಅಂಗ-ಸಂಸ್ಥೆ ಆಗಿರುವುದರಲ್ಲಿ ಅರ್ಥವಿಲ್ಲ ಆದರೆ ಆ ರೀತಿ ಆಗಿದೆ.

88 ದೇಶಗಳು ಭಾಗವಹಿಸಿದ ಈ ಸಮ್ಮೇಳನದಲ್ಲಿ, ಸಿಐಟಿಯುನ ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂಧೆ ಭಾಗವಹಿಸಿದ್ದರು. ಅವರು ಐಎಲ್‌ಒ ನೀತಿಯನ್ನು ಕಟುವಾಗಿ ಟೀಕಿಸುತ್ತಾ "ಕೆಲಸದಲ್ಲಿ ಕಾರ್ಮಿಕರ ದನಿ ಎತ್ತಲು, ಅವರಿಗೆ ಉದ್ಯೋಗ ಇರಬೇಕು, ಉದ್ಯೋಗ ಇಲ್ಲದೆ, ದೇಶದ ಆರ್ಥಿಕದಲ್ಲಿ ಅವರಿಗೆ ಏನೂ ದನಿ ಎತ್ತಲು ಸಾಧ್ಯವಿಲ್ಲ. ವಿಕಾಸಶೀಲ ದೇಶಗಳಲ್ಲಿ ಆತಂಕಕಾರಿ ಮಟ್ಟದಲ್ಲಿ ಉದ್ಯೋಗ ಕಡಿತವಾಗಿರುವುದು ಜಾಗತೀಕರಣದಿಂದಲೇ" ಎಂದರು.

ಕಾರ್ಮಿಕರ ಮೇಲೆ ಜಾಗತೀಕರಣದ ದಾಳಿ

ಡೈರೆಕ್ಟರ್ ಜನರಲ್ ಏನೇ ಹೇಳಲಿ, ಬಂದ ಪ್ರತಿನಿಧಿಗಳಲ್ಲಿ ಹೆಚ್ಚಿನವರು ಜಾಗತೀಕರಣ ಪ್ರತಿ ದೇಶದಲ್ಲಿ(ಅಭಿವೃದ್ಧಿ ಹೊಂದಿರುವ ಅಥವಾ ಹೊಂದುತ್ತಿರುವ ದೇಶವಿರಲಿ) ಕಾರ್ಮಿಕರ ಹಕ್ಕುಗಳ ಮೇಲೆ ಮಾಡುತ್ತಿರುವ ದಾಳಿಯ ಬಗ್ಗೆ ದೂರಿದರು. ನಮ್ಮ ದೇಶದಿಂದ ಹೋದ ಎಲ್ಲಾ ಕೇಂದ್ರೀಯ ಟ್ರೇಡ್‌ಯೂನಿಯನ್ ಪ್ರತಿನಿಧಿಗಳು, (CITU, AITUC, INTUC, BMS, HMS, UTUC-LS) ಆಳುವ ಬಿಜೆಪಿ ಪಕ್ಷದ ಕಾರ್ಮಿಕ ವಿಭಾಗ BMS ಸೇರಿದಂತೆ ಕಾರ್ಮಿಕರು ದಶಕಗಳ ದೃಢ ಹೋರಾಟದಿಂದ ಪಡೆದುಕೊಂಡ ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿ ಕಾಪಾಡಲು ವಿಶ್ವಬ್ಯಾಂಕ್, ಐಎಂಎಫ್ ಒತ್ತಡದಿಂದ ನಡೆಯುತ್ತಿರುವ ಈ ಪ್ರಕ್ರಿಯೆಯನ್ನು ಬದಲಾಯಿಸದಿದ್ದರೆ ಕಾರ್ಮಿಕರಿಗೆ ಉಳಿಗಾಲವಿಲ್ಲ ಎಂದು ಒತ್ತಿ ಹೇಳಿದರು.

80 ದಶಕದವರೆಗೆ ವಿಶ್ವಸಂಸ್ಥೆಯ ಅಂಗ-ಸಂಸ್ಥೆಗಳು, ಬಡದೇಶಗಳು, ಎಲ್ಲಾ ದೇಶಗಳ ಬಡಜನತೆಯ ಹಿತಾಸಕ್ತಿ ಎತ್ತಿ ಹಿಡಿಯುವುದರಲ್ಲಿ ಗಮನಾರ್ಹ ಕೆಲಸ ಮಾಡುತ್ತಿದ್ದವು. (ಆಗಲೂ ಅಭಿವೃದ್ಧ ಬಂಡವಾಳಶಾಹಿಗಳು ಅತ್ಯಧಿಕ ವಂತಿಗೆ ಕೊಡುತ್ತಿದ್ದರೂ - ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳಿಗೆ ವಂತಿಗೆ ಆಯಾ ದೇಶದ ಆದಾಯದ ಮೇಲೆ ನಿರ್ಧಾರಿತವಾಗುತ್ತದೆ). UNICEF, UNESCO, FAO, ILO, UNCTAD ಮುಂತಾದ ಸಂಸ್ಥೆಗಳು ಇದರಲ್ಲಿ ಗಮನಾರ್ಹವಾದವು. ಆದರೆ 90 ರ ದಶಕದಲ್ಲಿ ಈ ಪ್ರತಿಯೊಂದು ಅಂಗಸಂಸ್ಥೆ ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿ ಕಾಪಾಡುವ ತೊತ್ತುಗಳಾಗುತ್ತಿವೆ. ಸಮ್ಮೇಳನಗಳಲ್ಲಿ ಮೂರನೇ ಜಗತ್ತಿನ ದೇಶಗಳಿಗೆ ಬಹುಮತವಿದ್ದರೂ, ಈ ಸಂಸ್ಥೆಗಳ ಆಡಳಿತ-ಮಂಡಳಿಗಳನ್ನು ಆರಿಸುವುದರಲ್ಲಿ ಸಾಮ್ರಾಜ್ಯಶಾಹಿ ದೇಶಗಳು ಒತ್ತಡ ತಂತ್ರಗಳನ್ನು ಬಳಸಿ ತಮಗೆ ಪರವಾದ ವ್ಯಕ್ತಿಗಳನ್ನು ಹಾಕುತ್ತಿದ್ದಾರೆ. ಈಗಿನ ILO ಆಡಳಿತ ಇದೇ ದಾರಿ ತುಳಿದಿದೆ.

ಜಾಗತೀಕರಣದ ವಿರುದ್ಧ ಹೋರಾಟ:

ಜಾಗತೀಕರಣದ ವಿರುದ್ಧ ಹೋರಾಟವನ್ನು ಈ ಸಂಸ್ಥೆಗಳೊಳಗೆ ತೆಗೆದುಕೊಂಡು ಹೋಗಬೇಕಾಗಿದೆ. ಈ ಸಂಸ್ಥೆಗಳನ್ನು ಇಡೀ ಮನುಕುಲದ ಅಭಿವೃದ್ಧಿ-ಪರ, ಜನ-ಪರವಾದ ನಿಜವಾದ ಜಾಗತೀಕರಣ ಸಾಧಿಸುವ ಸಾಧನಗಳಾಗಿ ಪರಿವರ್ತನೆ ಮಾಡಬೇಕಾಗಿದೆ.

ಜನಿವಾ ILO ಸಮ್ಮೇಳನ - ಹೆರಿಗೆ ಸೌಲಭ್ಯವನ್ನು ಕೃಷಿಕೂಲಿಕಾರರಿಗೆ ಸೇರಿದಂತೆ ಎಲ್ಲಾ ವಿಭಾಗಗಳಿಗೆ ವಿಸ್ತರಿಸುವ ಒಪ್ಪಂದ, ಕಾರ್ಮಿಕರಿಗೆ ತಂತ್ರಜ್ಞಾನ, ಆರ್ಥಿಕತೆಯಲ್ಲಿ ಬದಲಾವಣೆಗೆ ಅನುಗುಣವಾಗುವಂತೆ ತರಬೇತಿ ಬಗ್ಗೆ ವಿಶೇಷ ಚರ್ಚೆ, ಕೃಷಿ ಕ್ಷೇತ್ರದಲ್ಲಿ ಸುರಕ್ಷತತೆ ಮತ್ತು ಆರೋಗ್ಯ ಕಾಪಾಡುವ ಬಗ್ಗೆ ಚರ್ಚೆ - ಇವನ್ನು ಕೈಗೆತ್ತಿಕೊಂಡಿತು.

ಅವಧಿಗೆ ಮುನ್ನ ಅಗಲಿದ ಕವಿ, ಶಿಕ್ಷಕ ಜಿ.ಎಸ್.ಅವಧಾನಿ

"ನಾನು ಹೊರಟು ಹೋದೆನು ಎಂದು
ಅಳಬೇಡ ನೀ ಗೆಳತಿ
ನೆನಪಿಸಿಕೊ ನೀನೊಮ್ಮೆ ಕಳೆದ
ಖುಷಿ ಗಳಿಗೆಗಳ"

ಎಂದು 'ನಾನು ಹೊರಟುಹೋದಾಗ' ಎನ್ನುವ ಕವಿತೆಯೊಂದರಲ್ಲಿ ಪ್ರೊ. 'ಜಿ.ಎಸ್. ಅವಧಾನಿಯವರು ಬರೆದಿದ್ದರು. ಇಂದು ಅಂತಹ ಸ್ಥಿತಿ ನಿರ್ಮಾಣವಾಗಿದೆ. ಅವರೊಂದಿಗೆ ಕಳೆದ ಸುಖದ ಕ್ಷಣಗಳನ್ನು ನೆನಪಿಸುತ್ತಾ ಈ ನೋವಿನ ಕ್ಷಣಗಳನ್ನು ಮರೆಯುವುದು ಅನಿವಾರ್ಯವಾಗಿದೆ. ಯಾಕೆಂದರೆ ಇತ್ತೀಚಿಗೆ ಪ್ರೊ. ಅವಧಾನಿಯವರು ಹೃದಯಾಘಾತದಿಂದ ನಿಧನಹೊಂದಿ ಅನಿರೀಕ್ಷಿತ ಅಘಾತ ನೀಡಿದ್ದಾರೆ.

ಪ್ರೊ ಜಿ.ಎಸ್.ಅವಧಾನಿಯವರದು ಇನ್ನೂ 53 ರ ಹರೆಯ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಎಸ್.ಡಿ.ಎಂ. ಮಹಾವಿದ್ಯಾಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕೆಲಸ ನಿರ್ವಹಿಸುತ್ತಿದ್ದರು. ಕನ್ನಡ ವಿಭಾಗವನ್ನು ಸಾಹಿತ್ಯ-ಸಂಸ್ಕೃತಿಯ ಕೇಂದ್ರವನ್ನಾಗಿ ಪರಿವರ್ತಿಸುವ ಕನಸಿನೊಂದಿಗೆ ಇತ್ತೀಚಿಗೆ ತಾನೆ ವಿಭಾಗದ ಮುಖ್ಯಸ್ಥರ ಹುದ್ದೆಯನ್ನು ಸ್ವೀಕರಿಸಿದ ಅವರು ಅದು ನನಸಾಗುವ ಮೊದಲೇ ಹೊರಟುಹೋದರು.

ಸಾಹಿತ್ಯ ವಲಯದಲ್ಲಿ ಅವಧಾನಿಯವರದು ಪ್ರಮುಖ ಹೆಸರು. ನವ್ಯದ ಪ್ರಾಯದ ಕಾಲದಲ್ಲಿ ಬರವಣಿಗೆ ಪ್ರಾರಂಭಿಸಿದ ಅವರು, ಅಂತಿಮವಾಗಿ ತನ್ನನ್ನು ಗುರುತಿಸಿಕೊಂಡಿದ್ದು ಬಂಡಾಯ ಸಾಹಿತ್ಯದೊಂದಿಗೆ. ನವ್ಯದ ಜನವಿರೋಧಿ ಸಾಹಿತ್ಯ ತತ್ವವನ್ನು ಖಾರವಾಗಿ ಖಂಡಿಸಿದರು. ಪ್ರಗತಿಪರ, ವೈಜ್ಞಾನಿಕ ಆಲೋಚನೆಗೆ ಕಿವಿಗೊಟ್ಟ ಅವಧಾನಿಯವರು ಅವನ್ನು ತಮ್ಮ ಸೃಜನಶೀಲ ಕೃತಿ ಮತ್ತು ಲೇಖನ, ವಿಮರ್ಶೆಗಳಲ್ಲಿ ಪ್ರತಿಪಾದಿಸಿದರು. ಸಂಪ್ರದಾಯದ ಎಡಬಿಡಂಗಿತನವನ್ನು ನಿರ್ಭಿಡೆಯಿಂದ ವಿರೋಧಿಸಿದ ಅವರು ಸಂಪ್ರದಾಯವಾದಿಗಳ ಕೆಂಗಣ್ಣಿಗೆ ತುತ್ತಾದರು.

'ಬೆಂಕಿ ಬಳ್ಳಿ', 'ಹೊತ್ತು ಮುಳುಗುವ ಮುನ್ನ', 'ಗಂಗೋತ್ರಿಯ ಹಕ್ಕಿಗಳು' ಎನ್ನುವ ಕವನ ಸಂಕಲನಗಳು, 'ಕ್ಷಾಸಾರ' ಎನ್ನುವ ಕಾದಂಬರಿಯನ್ನು, 'ಪರಸ್ಪರ' ಎನ್ನುವ ವಿಮರ್ಶಾಕೃತಿಗಳು ಈಗಾಗಲೇ ಪ್ರಕಟ ಆಗಿದೆ. ಮತ್ತು ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಅವರ ಅನೇಕ ವೈಚಾರಿಕ ಲೇಖನಗಳು ಪ್ರಕಾಶಿತಗೊಂಡಿದೆ. ಸಾಹಿತ್ಯ ಸೇವೆಗಾಗಿ ಅಂಕೋಲೆಯ ದಿನಕರ ದೇಸಾಯಿ ಪ್ರತಿಷ್ಠಾನ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತ್ತು.

ನಾಡಿನ ಮುಖ್ಯ ಕವಿ ಮಾತ್ರ ಆಗಿರದೆ ಪ್ರೊ ಅವಧಾನಿಯವರು ಒಬ್ಬ ಪ್ರಮುಖ ಸಂಘಟಕರು ಕೂಡಾ ಆಗಿದ್ದರು. ಬಂಡಾಯ ಸಾಹಿತ್ಯ ಸಂಘಟನೆಯ ಉ.ಕ. ಜಿಲ್ಲಾ ಸಂಚಾಲಕರಲ್ಲಿ ಒಬ್ಬರಾಗಿ, ಕರ್ನಾಟಕ ಸಂಘದ ಪದಾಧಿಕಾರಿಗಳಾಗಿ ಸಾಹಿತ್ಯ ಮತ್ತು ಸಾಮಾಜಿಕ ಚಟುವಟಿಕೆಯಲ್ಲಿ ಪಾಲ್ಗೊಂಡಿದ್ದರು. 'ಸಮೂಹ' ಎನ್ನುವ ರಂಗ ತಂಡವನ್ನು ರಚಿಸಿ, ನಾಟಕ ಆಡಿಸಿ, ಅನೇಕರನ್ನು ರಂಗಭೂಮಿಗೆ ತಂದವರು ಅವಧಾನಿಯವರು ಸ್ವತಃ ಒಳ್ಳೆಯ ನಟ ಕೂಡ ಆಗಿದ್ದರು.

ಒಬ್ಬ ಕವಿಗಳಾಗಿ, ನಟರಾಗಿ, ವಿಮರ್ಶಕರಾಗಿ ಪ್ರೊ. ಅವಧಾನಿಯವರು ಮುಖ್ಯರಾಗುವುದಕ್ಕಿಂತ ಹೆಚ್ಚಾಗಿ ಅವರೊಬ್ಬ ಯಶಸ್ವಿ ಶಿಕ್ಷಕರಾಗಿ ನಮಗೆ ಮುಖ್ಯರಾಗಿದ್ದಾರೆ. ಒಬ್ಬ ಶಿಕ್ಷಕರಿಗೆ ಇರಬೇಕಾದ ಎಲ್ಲಾ ಅರ್ಹತೆಗಳು ಅವರಲ್ಲಿದ್ದವು. ಅವರ ವೈಚಾರಿಕತೆಯನ್ನು ಒಪ್ಪದ ವಿದ್ಯಾರ್ಥಿ ಕೂಡ ಅವರೊಬ್ಬ ಒಳ್ಳೆಯ ಶಿಕ್ಷಕರಲ್ಲವೆಂದು ಹೇಳಲಾರ. ಎಂಥವರನ್ನೂ ಆಕರ್ಷಿಸಬಲ್ಲ ಭಾಷೆ, ಆ ಭಾಷೆಯ ಪರಿಣಾಮಕಾರಿ ಬಳಕೆ, ಮಧ್ಯೆ, ಮಧ್ಯೆ ಹಣಕಿ ನೋಡುವ ಹಾಸ್ಯದ ತುಣುಕು ಅಯಸ್ಕಾಂತದಂತೆ ವಿದ್ಯಾರ್ಥಿಗಳನ್ನು ಸೆಳೆದುಕೊಳ್ಳುತ್ತಿತ್ತು.

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಮೊದಲಬಾರಿಗೆ ಉತ್ತರ ಕನ್ನಡದಲ್ಲಿ ಪ್ರಾರಂಭದ ವೇಳೆಯಲ್ಲಿ ಪ್ರೊ. ಅವಧಾನಿಯವರು ತಮ್ಮ ಕಾಲೇಜಿನಲ್ಲಿಯೂ ಅದರ ಘಟಕ ರಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಅನೇಕ ವರ್ಷಗಳ ಕಾಲ ಎಸ್‌ಎಫ್‌ಐ ನಾಯಕರಿಗೆ ಸೂಕ್ತ ಸಲಹೆ ಕೊಡುತ್ತಾ ಅನೇಕ ಹೋರಾಟಗಳಿಗೆ ನೈತಿಕ ಧೈರ್ಯ ತುಂಬಿದರು. ಅಧ್ಯಯನ ಶಿಬಿರಗಳಿಗಾಗಿ ಒತ್ತಾಯಿಸುತ್ತಾ ಕಾರ್ಯಕರ್ತರಲ್ಲಿ ವೈಚಾರಿಕ ಸ್ಪಷ್ಟತೆ ಮತ್ತು ಅಧ್ಯಯನ ಪ್ರವೃತ್ತಿಯನ್ನು ಬೆಳೆಸುವಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿದರು.

ಉತ್ತರ ಕನ್ನಡದಲ್ಲಿ ಕೋಮುಗಲಭೆ ನಡೆಯುತ್ತಿರುವ ಸಂದರ್ಭದಲ್ಲಿ ಕೋಮುವಾದಿಗಳ ಅಟ್ಟಹಾಸವನ್ನು ನಿಯಂತ್ರಿಸಲು ಮತ್ತು ಅವರ ಜನವಿರೋಧಿ ಸಿದ್ಧಾಂತಗಳನ್ನು ಜಿಲ್ಲೆಯಾದ್ಯಂತ ಜಾಹೀರು ಪಡಿಸಲು ಒಂದು ಸಾಂಸ್ಕೃತಿಕ ಸಂಘಟನೆಯೊಂದನ್ನು ಕಟ್ಟುವ ಅಗತ್ಯತೆಯನ್ನು ಮನಗಂಡು 'ಚಿಂತನ ಉತ್ತರ ಕನ್ನಡ' ವನ್ನು ಪ್ರಾರಂಭಿಸುವಾಗ ಪ್ರೊ. ಅವಧಾನಿಯವರು ಉತ್ಸಾಹದಿಂದ ಪಾಲ್ಗೊಂಡರು. ಅದಕ್ಕೊಂದು ಧ್ಯೇಯೋದ್ದೇಶ ಮತ್ತು ಕಾರ್ಯಕ್ರಮದ ರೂಪುರೇಷೆಯನ್ನು ತಯಾರಿಸುವ ಸಮಿತಿಯಲ್ಲಿದ್ದು ಚಿಂತನದ ಬೆಳವಣಿಗೆಯಲ್ಲಿ ಆಸಕ್ತರಾಗಿದ್ದರು. ಅದರ ಎಲ್ಲಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಇಡೀ ವ್ಯವಸ್ಥೆಯನ್ನು ತನ್ನ ವ್ಯಂಗ್ಯ, ಕಟುಮಾತುಗಳಿಂದ ಲೇವಡಿ ಮಾಡುತ್ತಾ ಹೊಸ ಸಮಾಜದ ಕನಸು ಕಂಡ ಅವಧಾನಿಯವರ ಅಕಾಲಿಕ ನಿಧನ ಸಾಹಿತ್ಯ ಕ್ಷೇತ್ರಕ್ಕೆ, ಶಿಕ್ಷಣ ರಂಗಕ್ಕೆ ಅಪಾರ ನಷ್ಟವೆನ್ನುವುದರಲ್ಲಿ ಎರಡು ಮಾತಿಲ್ಲ.

- ವಿಠ್ಠಲ ಭಂಡಾರಿ



ಮಾರುಕಟ್ಟೆ ಸಂಸ್ಕೃತಿ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಲ್ಲಿ ಒಲಂಪಿಕ್ಸ್ ಕ್ರೀಡೆ

ಒಲಂಪಿಕ್ಸ್ ಕ್ರೀಡೆಗಳು ಪ್ರಪಂಚದಲ್ಲಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಉತ್ಸವ. ಒಲಂಪಿಕ್ಸ್ ಕೇವಲ ಕ್ರೀಡೆ ಮಾತ್ರವಲ್ಲ, ಅದೊಂದು ಚಳುವಳಿ ಹಾಗೂ ಅಂತರ್ರಾಷ್ಟ್ರೀಯ ಸಂಘಟನೆ. ಆಧುನಿಕ ಒಲಂಪಿಕ್ಸ್ ಕ್ರೀಡೆಗಳ ಜನಕ ಪಿಯಲ್ ಕೂಬರ್ತಿ ಹುಟ್ಟು ಹಾಕಿದ ಸೂತ್ರ "ಒಲಂಪಿಕ್ಸ್ ಕ್ರೀಡೆಗಳಲ್ಲಿ ಭಾಗವಹಿಸುವುದು ಮುಖ್ಯವೇ ಹೊರತು ಗೆಲ್ಲುವುದಲ್ಲ" ಪ್ರಪಂಚದಲ್ಲಿ ಪ್ರತಿಯೊಬ್ಬರೂ ಕ್ರೀಡಾಪಟುವಾದರೆ ಶಾಂತಿ ನೆಲೆಸುವ ಸಂಭವ ಅಧಿಕ. "ನಾವು ಇನ್ನೊಬ್ಬರ ದಾಖಲೆ ಮುರಿಯಬೇಕು, ತಲೆಯನ್ನಲ್ಲ - ಹೀಗೆಂದವರು 1956-60 ರ ಸಮಯದ ರಷ್ಯನ್ ಒಲಂಪಿಕ್ಸ್ ಕ್ರೀಡಾಪಟು ವ್ಯಾಸಿಲಿ ಕುಜ್ನೆತ್ಸೋವ್.

ಇಂದು ಒಲಂಪಿಕ್ಸ್ ಕ್ರೀಡೆಗಳು ಚಳುವಳಿಯಾಗಿ ಉಳಿದಿಲ್ಲ. ಒಲಂಪಿಕ್ಸ್ ಕ್ರೀಡೆಗಳೆಂದು ಮಾರುಕಟ್ಟೆ ಸಂಸತಿ ಮತ್ತು ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಲ್ಲಿ ನಲುಗುತ್ತಿದೆ. ಇಂದು ಅಂತರ್ರಾಷ್ಟ್ರೀಯ ಒಲಂಪಿಕ್ಸ್ ಸಮಿತಿಯ ನಡುವಳಿಕೆಗಳಲ್ಲಿ ಭ್ರಷ್ಟಾಚಾರ ತೂರಿಕೊಂಡಿದೆ. ಒಲಂಪಿಕ್ಸ್ ಕ್ರೀಡೆಗಳ ಏರ್ಪಾಡು ಒಂದು ನಗರಕ್ಕೆ ವಹಿಸಲಾಗುತ್ತದೆ. ದೇಶಕ್ಕಲ್ಲ. ಈ ರೀತಿಯಲ್ಲಿ ಆಯಾ ನಗರಗಳ ಹೆಸರಿನಲ್ಲಿ ಪ್ರಸ್ತುತ ನಡೆಯುವ ಕ್ರೀಡೆಗಳನ್ನು ಹೆಸರಿಸಲಾಗುತ್ತದೆ. ಉದಾ: ಸಿಡ್ನಿ ಒಲಂಪಿಕ್ಸ್

ಒಲಂಪಿಕ್ಸ್ ಕ್ರೀಡೆಗಳನ್ನು ಜರುಗಿಸಲು ಅನುಮತಿ ದಕ್ಕಿಸಿಕೊಳ್ಳುವುದು ಇಂದು ದೇಶಗಳ ನಡುವೆ ಒಂದು ವ್ಯಾಪಾರ ರೀತಿಯ ಸ್ಪರ್ಧೆಯಾಗಿದೆ. 1980 ರವರೆಗೆ(ಮಾಸ್ಕೋ ಒಲಂಪಿಕ್ಸ್) ಕ್ರೀಡೆಗಳನ್ನು ಆತಿಥ್ಯ ದೇಶಗಳು ನಡೆಸುತ್ತಿದ್ದವು. ಒಲಂಪಿಕ್ಸ್ ಕ್ರೀಡೆಗಳಲ್ಲಿ

ಆರ್.ಡಿ.ಮೆಲ್ಕಿಯೋರ್

ವೃತ್ತಿಪರ ಕ್ರೀಡಾಳುಗಳು ಭಾಗವಹಿಸುವುದಕ್ಕೆ ನಿಷೇಧವಿತ್ತು. (ಈ ಕಾರಣ ಒಲಂಪಿಕ್ಸ್‌ನಲ್ಲಿ ಸಮಾಜವಾದಿ ರಾಷ್ಟ್ರಗಳ ಪ್ರಾಬಲ್ಯ ಅಧಿಕವಾಗಿತ್ತು). 1980 ರ ಮಾಸ್ಕೋ ಒಲಂಪಿಕ್ಸ್ ನಂತರ ನಿರ್ಬಂಧ ಸಡಿಲವಾಯಿತು. ಪ್ರಾಯೋಜಕರಿಗೆ ಬಾಗಿಲು ತೆರೆದಿಡಲಾಯಿತು. ಹವ್ಯಾಸಿ ಕ್ರೀಡೆ ಎಂಬ ಅಂತಸ್ತು ಬದಲಾಯಿತು. ಪ್ರತಿ ಒಲಂಪಿಕ್ಸ್ ಹಿಂದಿನದಕ್ಕಿಂತ ವೈಭವಯುತವಾಗಿರಬೇಕು ಎಂಬ ಪ್ರತಿಷ್ಠೆ ಬೆಳೆದು ಬಂದಿದೆ. ಖರ್ಚುಗಳು ಹೆಚ್ಚಾಗುತ್ತಿದೆ. 1972 ರ ಮ್ಯೂನಿಚ್ ಒಲಂಪಿಕ್ಸ್‌ಗೆ ಜರ್ಮನ್ ಸರ್ಕಾರ 7727 ಕೋಟಿ ರೂಪಾಯಿ ವ್ಯಯ ಮಾಡಿತು. ಸರಕಾರದ ಹಣವಲ್ಲದೆ ಪ್ರಾಯೋಜಕರ ಹಣ ಕ್ರೀಡೆ ನಡೆಸಲು ಅವಶ್ಯ ಎಂದು 1980 ರಿಂದ ಅಧಿಕಾರ ವಹಿಸಿಕೊಂಡ ಅಂತರ್ರಾಷ್ಟ್ರೀಯ ಒಲಂಪಿಕ್ಸ್ ಸಮಿತಿ ಅಧ್ಯಕ್ಷ ಜುವಾನ್ ಸಮರಾಂಚ್ ಅಭಿಪ್ರಾಯಪಟ್ಟರು. ಈ ದಿಶೆಯಲ್ಲಿ ಒಲಂಪಿಕ್ಸ್ ಚಳುವಳಿ ಪ್ರಾಯೋಜಕರ ಕೈ ಸೇರತೊಡಗಿತು. 1960 ರ ರೋಂ ಒಲಂಪಿಕ್ಸ್ ನಲ್ಲಿ ಇಟಲಿ ಸರ್ಕಾರ 200 ಮಿಲಿಯನ್ ಲಿರಾಗಳಷ್ಟು ನಷ್ಟ ಅನುಭವಿಸಿತು. 1976 ರ ಮಾಂಟ್ರಿಯಲ್ ಒಲಂಪಿಕ್ಸ್ ನಡೆಸಿ ಕೆನಡಾ ಸರ್ಕಾರ ಬಿಲಿಯನ್ ಡಾಲರುಗಳ ಕೊರತೆ ಅನುಭವಿಸಿತು. (ಮ್ಯೂನಿಚ್ ಒಲಂಪಿಕ್ ಹತ್ಯಾಕಾಂಡದ ನಂತರ ಭದ್ರತಾ ವ್ಯವಸ್ಥೆ ಖರ್ಚು ಅಧಿಕವಾಗತೊಡಗಿತು). ಕೆನಡಾ ಸರ್ಕಾರ ವೆಚ್ಚದಿಂದ ತತ್ತರಿಸಿ ಲಾಟರಿ, ಹೊಸ ತೆರಿಗೆ, ಅಂಚೆ ಚೀಟಿ ಮಾರಾಟದಿಂದ ನಷ್ಟ ತುಂಬಿಕೊಳ್ಳಲು ಪ್ರಯತ್ನಿಸಿತು. ಆಥಿತ್ಯ ರಾಷ್ಟ್ರದ ಸರಕಾರದ ಪೂರ್ಣ ವೆಚ್ಚದಲ್ಲಿ ಸುಸಜ್ಜಿತವಾಗಿ ಹಿಂದೆಂದೂ ನಡೆಯದ ಭವ್ಯ ರೀತಿಯಲ್ಲಿ ನಡೆದ ಕೊನೆಯ ಒಲಂಪಿಕ್ಸ್ ಆಗಿದೆ ಮಾಸ್ಕೋ 80 ರ ಕ್ರೀಡೆಗಳು. ಇದಕ್ಕಾಗಿ ರಷ್ಯಾ 1972 ರಿಂದ ಸಿದ್ಧತೆ ಆರಂಭ ಮಾಡಿತ್ತು ಹಾಗೂ 1976 ರ ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಹಣ ಮೀಸಲಿಡಲಾಗಿತ್ತು. 1984 ರ ಲಾಸ್ ಎಂಜಲೀಸ್ ಒಲಂಪಿಕ್ಸ್ ಕೇವಲ ಪ್ರಾಯೋಜಕರ ಖರ್ಚಿನಲ್ಲೇ ನಡೆದು ಅಥಿತ್ಯ ರಾಷ್ಟ್ರ 222 ಮಿಲಿಯನ್ ಡಾಲರುಗಳ ಲಾಭ ಪಡೆಯಿತು. ಒಲಂಪಿಕ್ಸ್ ಕ್ರೀಡೆಗಳ ವ್ಯಾಪಾರೀಕರಣ ಇಲ್ಲಿಂದ ಆರಂಭವಾಯಿತು.

ನಗರಗಳು ಹಾಗೂ ರಾಷ್ಟ್ರಗಳು ಒಲಂಪಿಕ್ಸ್ ಕ್ರೀಡೆ ನಡೆಸುವ ಹಕ್ಕು ದಕ್ಕಿಸಿಕೊಳ್ಳಲು ತೀವ್ರ ಸ್ಪರ್ಧೆ ನಡೆಸತೊಡಗಿದವು. 1996 ಒಲಂಪಿಕ್ಸ್ ಅನ್ನು ಅಟ್ಲಾಂಟ(ಅಮೆರಿಕಾ)ಗೆ ದಕ್ಕಿಸಿಕೊಳ್ಳುವಲ್ಲಿ ಕೋಕೋಕೋಲಾ ಪ್ರಮುಖ ಪಾತ್ರ ವಹಿಸಿತು. ಅಟ್ಲಾಂಟದಲ್ಲಿ ಕೋಕಾಕೋಲಾ ಕಂಪನಿಯ ಮುಖ್ಯ ನೆಲೆಯಿರುವ 2000 ಒಲಂಪಿಕ್ಸ್ ಕ್ರೀಡೆಗಳನ್ನು ಪ್ರಸ್ತುತ ಸಿಡ್ನಿಗೆ(ಆಸ್ಟ್ರೇಲಿಯ) ದಕ್ಕಿಸಿಕೊಡುವಲ್ಲಿ ಕೋಕಾಕೋಲಾ ತೆರೆಯ ಹಿಂದೆ ದೊಡ್ಡ ಪ್ರಯತ್ನ ಮಾಡಿ ಯಶಸ್ವಿಯಾಯಿತು. (ಈ ಬಗ್ಗೆ 1996 ರಲ್ಲಿ ಐಕ್ಯರಂಗದ ಲೇಖನದಲ್ಲಿ ಬರೆಯಲಾಗಿದೆ) 2000 ದ ಒಲಂಪಿಕ್ಸ್‌ಗೆ ಬೀಜಿಂಗ್ ತೀವ್ರ ಪ್ರಯತ್ನ ನಡೆಸಿತ್ತು. ಒಲಂಪಿಕ್ಸ್ ಕ್ರೀಡೆ ನಡೆಸಲು ಅನುಮತಿಯನ್ನು 7 ವರ್ಷಗಳ ಮೊದಲೇ ಅಂತರ್ರಾಷ್ಟ್ರೀಯ ಒಲಂಪಿಕ್ಸ್ ಸಮಿತಿ ನೀಡುತ್ತದೆ. 1993ರಲ್ಲಿ ಎಂಟು ನಗರಗಳು 2000 ಇಸವಿಯ ಒಲಂಪಿಕ್ಸ್ ನಡೆಸಲು ಅನುಮತಿ ಕೋರಿದ್ದವು. ಹಾಗೂ ಕೊನೆಗೆ ಸಿಡ್ನಿ ಹಾಗೂ ಬೀಜಿಂಗ್ ನಡುವೆ ತೀವ್ರ ಸ್ಪರ್ಧೆ ಏರ್ಪಟ್ಟಿತು. 1993 ರಲ್ಲಿ ಸಿಡ್ನಿ 4ನೇ ಸುತ್ತಿನ ಮತದಾನದಲ್ಲಿ ಕೇವಲ ಎರಡು ಮತಗಳ ಅಂತರದಿಂದ 2000 ಒಲಂಪಿಕ್ಸ್ ಅನ್ನು ದಕ್ಕಿಸಿಕೊಂಡಿತು. ಹಿಂದಿನ ಮೂರು ಸುತ್ತಿನ ಮತದಾನದಲ್ಲಿ ಬೀಜಿಂಗ್ ಮುಂದಿತ್ತು. ಕೊನೆಯ ಸುತ್ತಿನ ಮತದಾನದಲ್ಲಿ ಸಿಡ್ನಿ ಪರವಾಗಿ ಮತ ಬೀಳುವಂತೆ ಪ್ರಾಯೋಜಕ ಕಂಪನಿಗಳು ಆಸಕ್ತಿ ವಹಿಸಿದವು (ಬೀಜಿಂಗ್ ಕ್ರೀಡೆಗಳು ನಡೆಸುವ ಖರ್ಚು ಪೂರ್ತಿ ಚೀನಾ ಸರಕಾರ ವಹಿಸುತ್ತಿತ್ತು) ಈ ನಿಟ್ಟಿನಲ್ಲಿ 1.2 ಮಿಲಿಯನ್ ಡಾಲರುಗಳ ಭ್ರಷ್ಟಾಚಾರ ನಡೆದಿದ್ದೆ ಎಂಬ ಅಭಿಪ್ರಾಯ ಅನೇಕ ರಾಷ್ಟ್ರಗಳಲ್ಲಿ ವ್ಯಕ್ತವಾಗಿದೆ.

ಇಂದು ಒಲಂಪಿಕ್ಸ್ ಕ್ರೀಡೆಗಳನ್ನು ದಕ್ಕಿಸಿಕೊಳ್ಳಲು ಭ್ರಷ್ಟಾಚಾರ ತೀವ್ರವಾಗಿದೆ. ಬಡ ಆಫ್ರಿಕಾ ಹಾಗೂ ದಕ್ಷಿಣ ಅಮೆರಿಕಾ ರಾಷ್ಟ್ರಗಳ ಒಲಂಪಿಕ್ಸ್ ಸಮಿತಿ ಸದಸ್ಯರ ಮತಗಳು ಮಾರಾಟವಾಗುವಂತೆ ನೋಡಿಕೊಳ್ಳುವಲ್ಲಿ ಪ್ರಾಯೋಜಕ ವಹಿಸುವ ಬಹುರಾಷ್ಟ್ರೀಯ ಕಂಪನಿಗಳು ಯಶಸ್ವಿಯಾಗಿವೆ. ಇಂದು ಕೋಕಾಕೋಲಾ, ಮ್ಯಾಕ್‌ಡೋನಾಲ್ಡ್, ಟೈಮ್‌ವಾರ್ನರ್, ಜಾನ್‌ಹ್ಯಾನೋಕ ಇನ್ಶೂರೆನ್ಸ್ ಕಂಪನಿಗಳು ಒಲಂಪಿಕ್ಸ್ ಕ್ರೀಡೆಗಳ ಪ್ರಮುಖ ಪ್ರಾಯೋಜಕರ ಸ್ಥಾನಗಳಲ್ಲಿವೆ. ಇವುಗಳ ಪ್ರಭಾವವೇ ಇಂದು ಒಲಂಪಿಕ್ಸ್ ಚಳುವಳಿ ಮಾರುಕಟ್ಟೆ ಸಂಸತಿ ಹಿಡಿತದಲ್ಲೇ ಸಿಲುಕಲು ಕಾರಣ. 1988 ರ ಸಿಯೋಲ್ ಒಲಂಪಿಕ್ಸ್ ಪ್ರಾಯೋಜಕರು 10 ಮಿಲಿಯನ್ ಡಾಲರು ಸುರಿದಿದ್ದರು. 1996 ರ ಅಟ್ಲಾಂಟ ಒಲಂಪಿಕ್ಸ್ ಈ ಮೊತ್ತ 4 ಬಿಲಿಯನ್ ಡಾಲರ್ ಆಗಿತ್ತು. ದೂರದರ್ಶನ ಮಾಧ್ಯಮದಲ್ಲಿ ಕ್ರೀಡೆಗಳ ಪ್ರಸಾರವು ಇಂದು ಒಲಂಪಿಕ್ಸ್ ಚಳುವಳಿಯ ವ್ಯಾಪಾರೀಕರಣಕ್ಕೆ ಕಾರಣ. 1956 ರಲ್ಲಿ ಮೆಲ್‌ಬೋರ್ನ್ ಕ್ರೀಡೆಗಳ ಪ್ರಸಾರಕ್ಕೆ 80 ಡಾಲರ್ ಹಣ ಪಡೆಯಲಾಗಿತ್ತು. ಸಿಡ್ನಿ ಒಲಂಪಿಕ್ಸ್ ಕ್ರೀಡೆಗಳ ದೂರದರ್ಶನ ಪ್ರಸಾರದ ಹಕ್ಕು ಪಡೆದುಕೊಳ್ಳಲು ಎನ್.ಬಿ.ಸಿ ಸಂಸ್ಥೆ 715 ಮಿಲಿಯ ಡಾಲರ್‌ಗಳನ್ನು ನೀಡಿದೆ. ಒಲಂಪಿಕ್ಸ್ ಕ್ರೀಡೆಗಳನ್ನು ಇಂದು ದೇಶಗಳು ತಮ್ಮ ಆರ್ಥಿಕತೆಯನ್ನು ಉತ್ತಮಪಡಿಸಲು, ನಗರಗಳು ಪ್ರವಾಸೋದ್ಯಮ ಬೆಳೆಸಲು ಹಾಗೂ ನಗರಗಳ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಬಳಸುತ್ತಿವೆ. ಶಾಂತಿ ನೆಲೆಸಲು ಕ್ರೀಡೆ ಎಂಬ ಧ್ಯೇಯ ವಾಕ್ಯ ಕಣ್ಮರೆಯಾಗುತ್ತಿದೆ. ಒಲಂಪಿಕ್ಸ್ ಕ್ರೀಡೆ ವಿಶ್ವದ ರಾಷ್ಟ್ರಗಳ ನಡುವೆ ಬಾಂಧವ್ಯ ವೃದ್ಧಿಸುತ್ತಿದೆ ಎಂಬುದು ಸುಳ್ಳಾಗುತ್ತಿದೆ.

ವಿದಾಯ

ನಾದಿಯಾ ಕೋಮಾನ್ಸೆ
ಮನದಾಳದಿ
ಕನಸುಗಳ ಕೆದಕಿದವಳೆ
ಕಂಬಿಯೊಳಗೆ ಆತುಕೊಂಡು ಅತ್ತ-ಇತ್ತ ತೂಗಿದವಳೆ
ನೆಲಕ್ಕೆ ಕಾಲು ಸೋಕಿದಾಗ ಬಿಕ್ಕಿ ಬಿಕ್ಕಿ ಅತ್ತವಳೆ
ಎದೆಯ ಝಲ್ಲರಿಯೊಳಗೆ ನೆನಪುಗಳನ್ನು ಕುಕ್ಕಿದವಳೆ
ಎದೆಯಲ್ಲಿ ಕಾವಾಗಿ ಚಿಗಿರೊಡೆದು ಮೊಗ್ಗಾಗಿ
ಒಮ್ಮೆ ನೋಡುವ ಮುನ್ನ ಮರೆಯಾಗಿ ಹೋದವಳೆ
ಎದೆಯ ಕಂಬಿಯ ಮೇಲೆ ವಾಲುತ್ತಾ ನಡೆಯುತ್ತಾ
ಎಷ್ಟೊಂದು ಕನಸುಗಳ ಅಳಿಸಿ ಮರೆಯಾದವಳೆ
ಎದೆಯಾಳ ಘೋರಿಯಲ್ಲಿ ಕಾಮಾಂತ್ಸೆ ಅನುರಣನ
ಕನಸುಗಳ ಕುಡಿಯೊಡೆದಾಗ ನಿಶ್ಯಬ್ಧ ನಿರ್ಗಮನ
ನಿನ್ನ ನೆನಪನ್ನು ಹೆಕ್ಕಿ, ಹಲವು ರೆಕ್ಕೆಯ ಹಕಿ
ಪುನಃ ತಂತಿಯ ಮೇಲೆ ಬಾಗಿ ಬಳುಕಿ
ಇಳೆಗೆ ತಾಕುವ ಮುನ್ನ, ಶಬ್ದ ಜೀಕುವ ಮುನ್ನ
ಮತ್ತದೇ ಕ್ಷಣಗಳಲ್ಲಿ ನಿಶ್ಯಬ್ಧ ಮೌನದಲ್ಲಿ
ತಣ್ಣನೆಯ ನಗೆ ಮಧ್ಯೆ ನನ್ನೆದೆಯ ಚಲಕುಗಳಿಗೆ ಬಿಕ್ಕಿ
ಬಿಕ್ಕಿ

- ಜಿ.ಎನ್.ಮೋಹನ್

ಸೋನೆ ಮಳೆಯ ಸಂಜೆ-ಕವನ ಸಂಕಲನದಿಂದ

ಒಲಂಪಿಕ್ಸ್... ಒಲಂಪಿಕ್ಸ್... ಸಿಡ್ನಿ ಒಲಂಪಿಕ್ಸ್ - 2000

ಜಗತ್ತಿನ ಜನತೆಯೆಲ್ಲಾ ಕಣ್ಣಾಗಿ 'ಒಲಂಪಿಕ್ಸ್'ನ ಕಡೆ ಕಣ್ಣು ಹಾಯಿಸುತ್ತಿದೆ. ಮುಂದಿನ ಹಲವು ವಾರಗಳಲ್ಲಿ ಎತ್ತರ, ಎತ್ತರ ಮತ್ತಷ್ಟು ಎತ್ತರಕ್ಕೆ, ವೇಗ,ವೇಗ ಇನ್ನಷ್ಟು ವೇಗವಾಗಿ ಮಾನವನ ಸಾಮರ್ಥ್ಯ - ದೈಹಿಕ ಸಾಮರ್ಥ್ಯ ಬೆಳೆಯುವುದನ್ನು ಸಂಭ್ರಮ, ಆಶ್ಚರ್ಯಗಳಿಂದ ಮಾನವ ಜಗತ್ತು ನೋಡಲಿದೆ. ಹತ್ತು ಸಾವಿರಕ್ಕೂ ಹೆಚ್ಚು ತರುಣ ತರುಣಿಯರು-ಮಾನವ ಸಮುದಾಯದ ಶಿಶುಗಳಾಗಿ ಈ ಸಂಭ್ರಮವನ್ನು ತರಲಿದ್ದಾರೆ. ಜನಾಂಗ, ಧರ್ಮ, ಭಾಷೆ, ದೇಶಗಳ ಗಡಿಗಳನ್ನು, ಅವು ಹಾಕುವ ಮಿತಿಗಳನ್ನು ಮೀರಿದ ಮಾನವ ಸಮುದಾಯದ ಪ್ರತಿನಿಧಿಗಳು ಅವರು.

ಇಂದು ಜಗತ್ತಿನ ಹಲವೆಡೆ ಧರ್ಮ, ಜನಾಂಗ, ಭಾಷೆ, ದೇಶಗಳ ಹೆಸರಿನಲ್ಲಿ ಮಾನವ ಸಮುದಾಯವನ್ನು ಒಡೆದು, ಕದನರಂಗಗಳನ್ನು ನಿರ್ಮಿಸಿ ಸಾವಿರಾರು ಜೀವಗಳ ಹರಣವನ್ನು ನೋಡುತ್ತಿರುವಾಗಲೇ ಮನುಜಮತವಾಗಿ ವಿಶ್ವಪಥದಲ್ಲಿ ಅಡಿಯಿರಿಸುವ ರಂಗ ಒಲಂಪಿಕ್ಸ್ - 2000 ಆರಂಭವಾಗಿದೆ.


ಮಿಲ್ಖಾಸಿಂಗ್ ಹಾರುವ ಮಾನವನೆಂದು ಹೆಸರು ಪಡೆದಾಗ ಸಂತೋಷದಿಂದ ಜಗಿದಾಡಿದ ಜನ ಪಿ.ಟಿ.ಉಷಾ ಕೂದಲೆಳೆಯ ಅಂತರದಿಂದ ಪದಕ ವಂಚಿತರಾದಾಗ ಮಮ್ಮಲ ಮರುಗಿದ ಜನ ಭಾರತೀಯರಾಗಿದ್ದರು. ಆ ಭಾಷೆ, ಆ ರಾಜ್ಯದವರಷ್ಟೇ ಆಗಿರಲಿಲ್ಲ.

ಅತ್ಯಂತ ಶೀಘ್ರವಾಗಿ ಓಡಿದ ಮೈಕೆಲ್ ಜಾನ್ಸನ್, ಕಾರ್ಲ್‌ಲೂಯಿಸ್‌ರವರ ಸಾಧನೆ ನಿಗ್ರೋ ಜನಾಂಗಕ್ಕೆ ಹೆಮ್ಮೆ ಗೌರವ ತರಬಹುದು. ಅಮೆರಿಕಾ ದೇಶ ಸಂತೋಷಿಸಬಹುದು. ನಾಡಿಯಾ ಕೋಮಾನ್ಸೆ(ಜಿಮ್ನಾಸ್ಟಿಕ್ ಅತ್ಯಂತ ಅಪೂರ್ವ ನಿಪುಣತೆಯಿಂದ ಹತ್ತು ಅಂಕ ಪಡೆದ ಮೊದಲ ಸ್ಪರ್ಧಿ) ಕಂಬಿಯನ್ನು ಹಿಡಿದು ಹಾರಾಡಿದಾಗ, ಸಂತೋಷ ಪಟ್ಟವರು ಕೇವಲ ರುಮೇನಿಯಾದವರಲ್ಲ ಇಡೀ ಮಾನವ ಜನಾಂಗ.

ಹೀಗೆ ಮಾನವ ಜನಾಂಗದ ಮಾನವ ಗುಣದ ಸಂಕೇತವಾಗಿ ಒಲಂಪಿಕ್ಸ್ ಇಂದೂ ಕೂಡಾ ಮನಸ್ಸಿಗೆ ಲಗ್ಗೆ ಹಾಕುತ್ತಿದೆ.

ಅಗತ್ಯ ಸೌಲಭ್ಯಗಳೆಲ್ಲಾ ದೊರೆತಾಗ ಮಾನವನ ಜೀವಸೆಲೆ ಹೇಗೆ ಪುಟಿಯುತ್ತದೆ, ಪ್ರತಿಭೆ ಹೇಗೆ ಅರಳುತ್ತದೆ ಎಂಬುದಕ್ಕೆ ಈ ಒಲಂಪಿಕ್ಸ್ ಸಾಧನೆಗಳು ಸಾಕ್ಷಿ. ಹಾಗೆಯೇ ಅರಳುವ ಮೊದಲೇ ಕಮರಿಹೋದ ಪ್ರತಿಭೆಗಳು, ಪದಕ ಪಟ್ಟಿಯಲ್ಲಿ ಕಾಣದ ಹಲವು ಮಾನವ ಸಮಾಜಗಳು ಮಾನವ ಸಮಾಜ ವ್ಯವಸ್ಥೆಯಲ್ಲಿನ ವಿಕಾರಕ್ಕೆ ಸಂಕೇತ. ಕೇವಲ ಹಣಕ್ಕಾಗಿ, ಲಾಭಕ್ಕಾಗಿ ಎನ್ನುವ ದಿಶೆಯಲ್ಲಿ ಒಲಂಪಿಕ್ಸ್ ಸಾಗುತ್ತಿರುವುದು, ಅಪಾಯಕಾರಿ ಔಷಧಿಗಳು, ಅಪ ಮಾರ್ಗಗಳು ಮಾನವ ನಿವಾರಿಸಿಕೊಳ್ಳಬೇಕಾದ ಕ್ರೌರ್ಯಕ್ಕೆ ಹಿಡಿದ ದುರ್ಬೀನು.

- ಜಿ.ಎನ್.ನಾಗರಾಜ್



PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : G.N. NAGARAJ